4.50 ಪಿ.ಎಂ.

10.ಆ) ಹೆಜ್ಜಾಲದಲ್ಲಿ ನಡೆದ ಗೋಲಿಬಾರ್ ಮುಂದುವರಿದ ಚರ್ಚೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಇಲಾಖೆಗೆ ಹೊಂದಿಕೊಂಡಂತಿರುವ ಗೃಹ ಖಾತೆಯ ಸಚಿವರಾದ ಶ್ರೀಯುತ ರೋಷನ್ ಬೇಗ್‌ರವರಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನಾಯಕರಾದ ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ ಹಿಂದಿನ ಸರ್ಕಾರ ಯಾವ ರೀತಿಯ ಭದ್ರತೆ ಒದಗಿಸಿತ್ತೋ ಅದನ್ನು ಒದಗಿಸಬೇಕೆಂದು ನಾನು ಲಿಖಿತ ಮೂಲಕ ಅವರ ಗಮನಕ್ಕೆ ತಂದಾಗ ಅವರು ಹೊರಗಡೆ ತಿರುಗಾಡುತ್ತಿರುವಾಗ

ಮಾನ್ಯ ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ ಮಾಮನಿಯವರು)
ಪೀಠವನ್ನು ಅಲಂಕರಿಸಿದರು

ಅವರಿಗೆ ಭದ್ರತೆ ಕೊಡಲು ಸಾಧ್ಯವಿಲ್ಲವೆಂದು, ಮನೆಯಲ್ಲಿರುವಾಗ ಮಾತ್ರ ಭದ್ರತೆ ಕೊಡಲು ಸಾಧ್ಯವೆಂದರು ಮತ್ತು ಅವರೇ ಲಿಖಿತ ಮೂಲಕ ಪೋಲೀಸ್ ಇಲಾಖೆಗೆ ಆದೇಶ ಕೊಟ್ಟರು. ಆದರೆ, ಈ ರಾಜ್ಯದ ಅತ್ಯುನ್ನತ ಸ್ಥಾನದಲ್ಲಿರುವ ಒಬ್ಬ ಮುಖ್ಯಮಂತ್ರಿಯವರ ಜವಾಬ್ದಾರಿ ಬಗ್ಗೆ ಪತ್ರಿಕೆಯಲ್ಲಿ ವರದಿಯಾಯಿತು. ಇದಾಗಿ ಸುಮಾರ ಆಗಲೇ ಒಂದೂವರೆ, ಎರಡೂ ತಿಂಗಳುಗಳಾದವು. ಈ ಕುರಿತು ನಾನು ಮೂರ್ನಾಲ್ಕು ಬಾರಿ ಶ್ರೀಯುತ ರೋಷನ್‌ಬೇಗ್‌ರವರ ಗಮನಕ್ಕೆ ತಂದಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದಾಗ ನಾನು ಆವೊತ್ತೇ ಹೇಳಿದೆ. ಏನೆಂದರೆ, ರಾಜ್ಯದ ರಾಜಕೀಯ ವಲಯದಲ್ಲಿ ಬಹಳ ಪ್ರಮುಖವಾಗಿರುವ ವ್ಯಕ್ತಿಗಳ ಮೇಲೆ ಯಾವುದಾದರೂ ಕಾರಣದಿಂದ ಸಾವಿನ ಬೆದರಿಕೆಯಿದ್ದು ಅವರ ಮನೆ ಸುತ್ತ ಸುರಕ್ಷತೆ ಬೇಕೆಂದರೆ ಸಾಮಾನ್ಯವಾಗಿ ಭದ್ರತೆ ಒದಗಿಸುತ್ತೇವೆ. ಪ್ರೊಫೆಸರ್ ನಂಜುಂಡಸ್ವಾಮಿಯವರು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರೆಂಬುದು ಗೊತ್ತಿದೆ. ಆದರೆ, ಅವರಿಗೆ ಇತರೆ ಮಂತ್ರಿಗಳಿಗೆ ಪೈಲಟ್, ಎಸ್ಕಾರ್ಟ್ ಒದಗಿಸುವಂತೆ ಭದ್ರತೆ ಕೊಡುವುದಕ್ಕಾಗುವುದಿಲ್ಲ. ಆ ರೀತಿಯ ಭದ್ರತೆ ಕೊಡುವುದಾದರೆ ಬಹಳ ಜನರಿಗೆ ಕೊಡಬೇಕಾಗುತ್ತದಾದ್ದರಿಂದ ಸಾಧ್ಯವಿಲ್ಲ. ಅದು ಪರ್ಮಿಸಬಲ್. ಪ್ರೊ: ನಂಜುಂಡಸ್ವಾಮಿಯವರ ಮನೆ ಹತ್ತಿರ ರಕ್ಷಣಾ ವ್ಯವಸ್ಥೆಗೆ ಕೆಲವು ಬೇರೆ ತಾಂತ್ರಿಕ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಏರ್ಪಾಡು ಮಾಡುತ್ತೇವೆಂದು ಹೇಳಿದ್ದೇವೆ. ನಾನು ಬೇರೆಯವರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವರು ಭದ್ರತೆ ಒದಗಿಸಿ ಎಂದು ಕೇಳಿದರೆ ಏನು ಮಾಡುವುದು? ಭದ್ರತಾ ವ್ಯವಸ್ಥೆ ಒದಗಿಸಿ ಕೊಡಬೇಕೆಂದು ಕೋರಿ ನೂರು ಹೆಸರುಗಳು ಬಂದವು. ಈ ನೂರು ಜನರ ಮನೆಗಳ ಬಳಿ ಪೋಲೀಸ್ ಭದ್ರತೆ ಒದಗಿಸಬೇಕೆಂದು ಕೇಳಿದರೆ ಹೇಗೆ ಸಾಧ್ಯ? ಯಾವ ಕಾರಣಕ್ಕಾಗಿ ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ ಭದ್ರತೆ ಒದಗಿಸಬೇಕೆಂದು ನೀವು ಹೇಳಿದಿರಿ ಅದನ್ನು ನಾನು ಒಪ್ಪಿದ್ದೇನೆ, ಭದ್ರತೆ ಒದಿಗಿಸಿಕೊಡುತ್ತೇನೆ. ಆದರೆ, ವಾಸ್ತವಿಕವಾಗಿ ಅವರ ಮೇಲೇನಾದರೂ ಆಕ್ರಮಣವಾಗತಕ್ಕಂಥ ಸಂದರ್ಭಗಳೇನಾದರೂ

ಇವೆಯೇ ಇಲ್ಲವೇ ಎಂಬುದನ್ನು ನಾವು ನೋಡುವುದಾಗಿ ಪೋಲೀಸಿನವರು ಹೇಳಿದರು. ಅವರು ಏನೇ ಹೇಳಲಿ, ಅವರಿಗೆ ರಕ್ಷಣೆ ಕೊಡುವುದಾಗಿ ಒಪ್ಪಿಕೊಂಡಿದ್ದೇನೆ, ಕೊಡುತ್ತೇನೆ. ಒಂದು ವೇಳೆ ಸಾರ್ವತ್ರಿಕವಾಗಿ ಎಲ್ಲರೂ ತಮಗೆ ಭದ್ರತೆ ಒದಗಿಸಬೇಕೆಂದು ಕೇಳಿದರೆಂದು ಇಟ್ಟುಕೊಳ್ಳೋಣ. ಆಗ ಏನು ಮಾಡುವುದು? ಈಗ ನಾನು ಅವರೆಲ್ಲರ ಹೆಸರುಗಳನ್ನು ಹೇಳುವುದಿಲ್ಲ. ಸುಮಾರು ನೂರು ಹೆಸರುಗಳಿವೆ. ಅವರೆಲ್ಲರಿಗೂ ಭದ್ರತಾ ವ್ಯವಸ್ಥೆ ಕಲ್ಪಿಸಬೇಕಾಗುತ್ತದೆ. ಅವಶ್ಯಕತೆಯಿದ್ದರೆ ಇನ್ ಪ್ರಿನ್ಸಿಪಲ್ ಕೊಡಬೇಕು. ಏಕೆಂದರೆ, ಅವರ ವ್ಯಕ್ತಿತ್ವದ ಮೇಲೆ ಅಥವಾ ಅವರ ಮನೆ ಮೇಲೇನಾದರೂ ದಾಳಿಯಾಗತಕ್ಕಂಥ ಪ್ರಸಂಗಗಳಿದ್ದು ನಾವು ನೀವು ಯಾರೇ ಆದರೂ ಭದ್ರತಾ ವ್ಯವಸ್ಥೆ ಕೇಳಲಿ, ಕೇಳದಿರಲಿ ಈಗ ಪೀಪಲ್ಸ್ ವಾರ್ ಗ್ರೂಪ್‌ನವರನ್ನು, ಭಯೋತ್ಪಾದಕ ಚಟುವಟಿಕೆಗೆ ಸೇರಿದವರನ್ನು ಅಥವಾ ಜಮ್ಮು-ಕಾಶ್ಮೀರದಿಂದ ಬಂದಂಥವರನ್ನು ಪೋಲೀಸಿನವರು ಒಂದು ಪಟ್ಟಿ ಮಾಡಿಟ್ಟುಕೊಂಡಿರುತ್ತಾರೆ. ಆದರೆ, ಪ್ರೊ:ನಂಜುಂಡಸ್ವಾಮಿಯವರು ಆ ಕ್ಯಾಟಗರಿಗೆ ಸೇರಿದವರಲ್ಲ. ಅವರು ನಿಮ್ಮ ರೈತ ಸಂಘದ ಅಧ್ಯಕ್ಷರು, ವಿಧಾನಸಭಾ ಮಾಜಿ ಸದಸ್ಯರು. ಅವರಿಗೆ ರಕ್ಷಣೆ ಕೊಡುವುದಾಗಿ ನಾನು ಒಪ್ಪಿಕೊಂಡಿದ್ದೇನೆ; ಕೊಡುತ್ತೇನೆ. ಅದರ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡುವ ಅವಶ್ಯಕತೆಯಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಪ್ರೊ: ನಂಜುಂಡಸ್ವಾಮಿಯವರಿಗೆ ಭದ್ರತಾ ವ್ಯವಸ್ಥೆ ಕೊಡುವುದಿಲ್ಲವೆಂದು ನೀವು ಹೇಳಿಲ್ಲ, ಕೊಡುತ್ತೇವೆಂದು ತಾವು ಒಪ್ಪಿದ್ದೀರಿ. ತಾವು ಆದೇಶಿಸಿದ್ದರೂ ಇಷ್ಟೊಂದು ಕಾಲ ವಿಳಂಬವಾಗುವುದಕ್ಕೆ ಕಾರಣವೇನು?

ಶ್ರೀ ಜೆ.ಹೆಚ್. ಪಟೇಲ್:- ನನ್ನ ಬಳಿ ಭದ್ರತಾ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಕೋರಿ ಸುಮಾರು ನೂರು ಹೆಸರುಗಳು ಬಂದವು. ಅಷ್ಟೂ ಜನರಿಗೂ ಭದ್ರತಾ ವ್ಯವಸ್ಥೆ ಕಲ್ಪಿಸುವುದಕ್ಕಾಗುವುದಿಲ್ಲ. ಆದರೆ, ಇದರ ಬಗ್ಗೆ ನೀವು ಹೇಳಿದ್ದರಿಂದ ಮತ್ತು ಅವರು ರಾಜ್ಯದ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದು, ಬಹುಶಃ ಅವರ ಮನೆ ಮೇಲೆ ಯಾರಾದರೂ ಕಿಡಿಗೇಡಿಗಳು ಆಕಸ್ಮಾತ್ ಏನಾದರೂ ಮಾಡಬಹುದೆಂಬ ಕಾರಣಕ್ಕಾಗಿ ಭದ್ರತಾ ವ್ಯವಸ್ಥೆ ಒದಗಿಸಿಕೊಡುವುದಾಗಿ ಒಪ್ಪಿಕೊಂಡಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸರ್ಕಾರ ಪ್ರೊ: ನಂಜುಂಡಸ್ವಾಮಿಯವರಿಗೆ ಭದ್ರತಾ ಸೌಕರ್ಯ ಕಲ್ಪಿಸುವ ಬಗ್ಗೆ ಒಪ್ಪಿಕೊಂಡಿದೆ. ಆದುದರಿಂದ, ಯಾವುದೇ ಜವಾಬ್ದಾರಿ ವ್ಯಕ್ತಿ ಬಗ್ಗೆ ಈ ತರಹ ಕ್ರಮ ಕೈಗೊಳ್ಳಬೇಕೆಂದು ಲಿಖಿತ ಮೂಲಕ ಕೊಟ್ಟಾಗ ತ್ವರಿತವಾಗಿ ಆ ಕುರಿತು ಕಾರ್ಯಕ್ರಮ ರೂಪಿಸಬೇಕೆಂದು ಹೇಳುತ್ತಾ, ಹೆಜ್ಜಾಲದಲ್ಲಿ ಇತ್ತೀಚೆಗೆ ನಡೆದಿರುವ ಗೋಲಿಬಾರ್ ಪ್ರಕರಣದ ಬಗ್ಗೆ ಸದನ ಸಮಿತಿ ನೇಮಿಸುವುದರ ಮೂಲಕ ಜನರಿಗೆ ನ್ಯಾಯ ಒದಿಗಿಸಿಕೊಟ್ಟು ಯಾರು ತಪ್ಪಿತಸ್ಥರಿದ್ದಾರೋ ಅವರಿಗೆ ಶಿಕ್ಷೆಯಾಗಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ):- ಸನ್ಮಾನ್ಯ ಉಪಾಧ್ಯಕ್ಷರೆ, ಹೆಜ್ಜಾಲದಲ್ಲಿ ನಡೆದಂಥ ಗೋಲಿಬಾರ್ ಬಗ್ಗೆ ನನಗೂ ಬಹಳ ವಿವರಗಳು ಗೊತ್ತಿದೆ. ಏಕೆಂದರೆ, ನನ್ನ ಕ್ಷೇತ್ರದ ಪಕ್ಕದ ರಾಮನಗರ ಕ್ಷೇತ್ರದಲ್ಲಿ 3ನೇ ತಾರೀಖಿನಂದು ವಿಧಾನಸಭೆಯ ಉಪ ಚುನಾವಣೆ ನಡೆಯುವುದಿತ್ತು.

ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಅಲ್ಲಿನ ಗಿರಣಿ ಕಾರ್ಖಾನೆಯ ಕಾರ್ಮಿಕರು ಸುಮಾರು ಮೂರು ವರ್ಷಗಳಿಂದ ಮುಷ್ಕರ ನಡೆಸುತ್ತಿದ್ದರು. ಮುಷ್ಕರ ನಡೆಯುತ್ತಿರುವ ಸಂದರ್ಭದಲ್ಲಿ ಅಲ್ಲಿ ಉಪ ಚುನಾವಣೆ ಘೋಷಣೆಯಾದ ನಂತರ ನಾನು ಮತ್ತು ನಮ್ಮ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಷ್ಕರ ನಡೆಸುತ್ತಿದ್ದ ಕಾರ್ಮಿಕರ ಬಳಿ ಹೋಗಿ ಏಕೆ ಇಷ್ಟು ದಿವಸಗಳ ಕಾಲ ಮುಷ್ಕರ ಹೂಡುತ್ತಿದ್ದೀರಿ? ಇದರ ಬಗ್ಗೆ ಸರ್ಕಾರ ಗಮನಹರಿಸಿಲ್ಲವೇ ಎಂದು ಮಾತನಾಡಿದೆವು. ಇವೊತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವಂಥ ಸರ್ಕಾರಕ್ಕೆ ಬೆಂಬಲ ಕೊಟ್ಟಂಥ ನಿಮ್ಮದೇ ಆದಂಥ ಒಂದು ಪಕ್ಷದ ಸರ್ಕಾರ ರಾಜ್ಯ ಮತ್ತು ಕೇಂದ್ರದಲ್ಲಿರುದರಿಂದ ನಿಮ್ಮ ಬೇಡಿಕೆಗಳ ಬಗ್ಗೆ ಸರ್ಕಾರ ಆದಷ್ಟು ಬೇಗ ತೀರ್ಮಾನ ಕೈಗೊಳ್ಳಬಹುದೆಂಬ ಮಾತನ್ನು ಹೇಳಿದಾಗ ನಮ್ಮ ಬಗ್ಗೆ ಯಾವುದೇ ರೀತಿಯ ತೀರ್ಮಾನವಾಗುತ್ತಿಲ್ಲವೆಂದು ಕಾರ್ಮಿಕರು ಹೇಳಿದರು. ನಂತರ ಕಾರ್ಮಿಕ ಮುಖಂಡರಲ್ಲಿ ಮಾತನಾಡಿದಾಗ ಈ ಕಾರ್ಖಾನೆಯ ಮಾಲೀಕರಿಗೆ ಸರ್ಕಾರದಿಂದ ಸ್ವಲ್ಪ ಬೆಂಬಲವಿರುವುದರಿಂದ ಕಾರ್ಮಿಕರ ಕಡೆ ಜಾಸ್ತಿ ಗಮನ ಕೊಡುತ್ತಿಲ್ಲ ಎಂದಾಗ ನಾವು ಮಾತನಾಡುತ್ತಾ ಇದೇ ತಿಂಗಳ 11ನೇ ತಾರೀಖಿನಿಂದ ವಿಧಾನಮಂಡಲದ ಉಭಯ ಸದನಗಳು ಸೇರುತ್ತಿರುವುದರಿಂದ ವಿಧಾನಸಭೆಯಲ್ಲಿ ನಾವು ನಮ್ಮ ಪಕ್ಷದಿಂದ ಕಾರ್ಮಿಕರ ಪರವಾಗಿ ತೀರ್ಮಾನ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇವೆಂದು ಹೇಳಿ ಬಂದೆವು. ಮಾರನೇಯ ದಿವಸ ನಾನು ಮತ್ತು ನಮ್ಮ ಪಕ್ಷದವರಾದ ರಾಮಚಂದ್ರಗೌಡರು ಅಲ್ಲಿಂದ ಹೊರಟು ಕೆಂಗೇರಿ ಬಳಿ ಬರುತ್ತಿದ್ದಾಗ ಫೈರಿಂಗ್ ಆರ್ಡರ್ ಕೇಳಿಸಿತು. ಇದು ಕೇಳಿದ ತಕ್ಷಣ ನಾವು ಹೋಗುತ್ತಿದ್ದ 7-8 ಕಾರುಗಳಲ್ಲಿ ಪುನಃ ವಾಪಸ್ಸು ಬಂದೆವು. ಬಂದ ನಂತರ ಫೈರಿಂಗ್ ಆದ ಬಗ್ಗೆ ಅಲ್ಲಿನ ಕಾರ್ಮಿಕರು ಮತ್ತು ನಾಗರಿಕರನ್ನು ವಿಚಾರಿಸಿದಾಗ ಗೋಲಿಬಾರ್ ಆಗಿ ಒಬ್ಬ ವ್ಯಕ್ತಿ ಸತ್ತು ಹೋಗಿದ್ದು, ಅವರ ಮನೆಗೆ ಹೋಗಿ ಸತ್ತ ವ್ಯಕ್ತಿಯ ತಾಯಿಯನ್ನು ಮಾತನಾಡಿಸಿದಾಗ ಆಕೆಯ ಗೋಳಂತೂ ಹೇಳುವುದಕ್ಕಾಗುವುದಿಲ್ಲ. ಆಕೆ ವಿರೋಧಿಸುತ್ತಾ ನನ್ನ ಮಗನನ್ನು ಕೆಲಸದಿಂದ ತೆಗೆದುಹಾಕಿದ್ದರೂ ಪರವಾಗಿರಲಿಲ್ಲ, ಆತನನ್ನು ಅಟ್ಟಿಸಿಕೊಂಡು ಹೋಗಿ ಗೋಲಿಬಾರ್ ಮಾಡಿ ಸಾಯಿಸಿದ್ದಾರೆಂದಾಗ ಆ ತಾಯಿಗೆ ಸಮಾಧಾನ ಹೇಳಿ ನಾವೆಲ್ಲರೂ ಹೊರಟು ಬಂದೆವು. ಆ ಕಾರ್ಮಿಕರು ಎರಡು ವರ್ಷಗಳಿಂದ ಆ ಟೆಕ್ಸ್‌ಟೈಲ್‌ನಲ್ಲಿ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಹೆಜ್ಜಾಲದಲ್ಲಿ ಗೋಲಿಬಾರ್ ಆಗಬೇಕಾದರೆ ಸರ್ಕಾರವೇ ಹೊಣೆಯೆಂದು ಹೇಳುತ್ತೇನೆ. ಏಕೆಂದರೆ, ತಾವು ಎರಡು ವರ್ಷಗಳಿಂದ ಕಾರ್ಮಿಕರನ್ನು ಮತ್ತು ಮಾಲೀಕರನ್ನು ಕರೆದು ಮಾತನಾಡಿ ಸಮಸ್ಯೆಯನ್ನು ಪರಿಹಾರ ಮಾಡಬಹುದಾಗಿತ್ತು. ನಾವು ಕಾರ್ಮಿಕ ಮುಖಂಡರನ್ನು ವಿಚಾರ ಮಾಡಿದಾಗ ತಾವು ಯಾವುದೇ ರೀತಿಯಲ್ಲಿ ಅವರುಗಳೊಂದಿಗೆ ಕರೆದು ಮಾತನಾಡಿಯೇ ಇಲ್ಲವೆಂದು ತಿಳಿದುಬಂದಿತು. ಆ ಕಾರ್ಮಿಕರು ರಸ್ತೆ ಚಳುವಳಿಯನ್ನು ಮಾಡುವುದಕ್ಕೂ ಮೊದಲು ತಮಗೆ ತಿಳಿಸಿದ್ದಾರೆ. ಅವರು ಇದೇ ಸಮಯದಲ್ಲಿ ಚಳುವಳಿಯನ್ನು ಮಾಡಲು ಕಾರಣವೇನೆಂದರೆ, ರಾಮನಗರ ಚುನಾವಣೆಯ ಸಂದರ್ಭವಾದ ಈ ಸಮಯದಲ್ಲಿ ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಂತ್ರಿಗಳು ಬಂದೇ ಬರುತ್ತಾರೆ, ಆದ್ದರಿಂದ ನಮಗೆ ಬೇಗ ತೀರ್ಪನ್ನು ಕೊಡುತ್ತಾರೆ ಎನ್ನತಕ್ಕ ಉದ್ದೇಶದಿಂದ ಅವರು ರಸ್ತೆ ಚಳುವಳಿಯನ್ನು ಮಾಡುತ್ತಿದ್ದರು. ಆ ರೀತಿ ಉದ್ದೇಶವನ್ನಿಟ್ಟುಕೊಂಡು ಸರ್ಕಾರಕ್ಕೆ ನಾವು

ರಸ್ತೆಯ ಚಳುವಳಿಯನ್ನು ಮಾಡುತ್ತೇವೆಂದು ಸೂಚನೆಯನ್ನೂ ಕೊಟ್ಟರು. ರಸ್ತೆ ಚಳುವಳಿಯನ್ನು ಮಾಡುತ್ತಿರುವವರನ್ನು ಎಬ್ಬಿಸಬೇಕಾದರೆ ತಮ್ಮ ಬಳಿ ಬೇಕಾದಷ್ಟು ಮೆಟೀರಿಯಲ್ಸ್ ಇದೆ. ರಸ್ತೆ ಚಳುವಳಿಗೆ 500 ರಿಂದ 600 ಜನರು ಸೇರುತ್ತೇವೆಂದು ಅವರು ಮೊದಲೇ ಹೇಳಿದ್ದ ಮೇಲೆ ತಾವು ಆ ಜನರನ್ನು ಹದ್ದು ಬಸ್ತಿನಲ್ಲಿಡಲು ಅಗತ್ಯವಾಗಿದ್ದ ಪೋಲೀಸರನ್ನು ಅಲ್ಲಿ ನಿಯೋಜಿಸಿರಲಿಲ್ಲ. ಅಗತ್ಯವಿರುವಷ್ಟು ಪೋಲೀಸ್ ಮೀಸಲಾತಿಯ ಪಡೆಯ ವ್ಯಾನ್‌ಗಳನ್ನು ತಾವು ಕಳುಹಿಸಿರಲಿಲ್ಲ. ಸುಮಾರು ನಾಲ್ಕೈದು ಜನರು ಪೋಲೀಸ್‌ನವರು ಅಲ್ಲಿ ಇದ್ದರು. ಆ ರೀತಿ ನಾಲ್ಕೈದು ಜನರು ಪೋಲೀಸ್‌ನವರಿದ್ದಾಗ ಬೇಕಾದಷ್ಟು ಜನರು ಅಲ್ಲಿ ಬಂದಾಗ ಅವರನ್ನು ಆ ಪೋಲೀಸರು ತಡೆದಾಗ ಬಸ್ಸಿಗೆ ಕಲ್ಲಿನ ತೂರಾಟವಾಯಿತು, ಆ ರೀತಿ ಕಲ್ಲಿನ ತೂರಾಟವಾದಾಗಲೂ ಸುಮಾರು ಅರ್ಧ ಮುಕ್ಕಾಲು ಗಂಟೆಗಳ ಕಾಲ ಅಗತ್ಯವಿರುವಷ್ಟು ಪೋಲೀಸರು ಅಲ್ಲಿಗೆ ಬರಲಿಲ್ಲ. ಆ ರೀತಿ ಪೋಲೀಸರು ಬರದಿದ್ದಾಗ ಅಲ್ಲಿದ್ದ ಇತರೆ ಜನರು ಸೇರಿಕೊಂಡು ಸ್ವಲ್ಪ ದಾಂದಲೆಯಾಯಿತು. ಅಷ್ಟು ಆಗಿದ್ದೆ ತಡ ಒಂದೇ ಬಾರಿಗೆ ಲಾಠಿ ಚಾರ್ಜ್ ಮಾಡಿದರು. ಆ ರೀತಿ ಲಾಠಿ ಚಾರ್ಜ್ ಮಾಡಿದಾಗ ಜನರೆಲ್ಲರೂ ತೆರೆದ ಫೀಲ್ಡ್‌ನಲ್ಲಿ ಚೆಲ್ಲಾಪಿಲ್ಲಿಯಾಗಿ ಓಡಿದರು. ಅಕ್ಕಪಕ್ಕದಲ್ಲಿ ಯಾವುದೇ ಮನೆಗಳು ಇರಲಿಲ್ಲ. ಕೇವಲ ನಾಲ್ಕೈದು ಮನೆಗಳು ಹೆಜ್ಜಾಲದ ಬಲಭಾಗದಲ್ಲಿ ಇದ್ದವು. ಬೇರೆ ಮನೆಗಳು ಇರಲಿಲ್ಲ. ಆ ರೀತಿ ಜನರುಗಳು ಓಡಿಹೋದಾಗ ಪೋಲೀಸ್‌ನವರು ನೂರಾಐವತ್ತರಿಂದ ಇನ್ನೂರು ಅಡಿಗಳವರೆಗೆ ಅವರನ್ನು ಅಟ್ಟಿಸಿಕೊಂಡು ಹೋಗಿ ಬಂದೂಕಿನಲ್ಲಿ ಹೊಡೆದರು. ಇದು ಏಕೆ ಬೇಕಾಗಿತ್ತು? ಲಾಠಿ ಚಾರ್ಜ್ ಏಕೆ ಬೇಕಾಗಿತ್ತು? ಅದಕ್ಕೆ ಬದಲಾಗಿ ಗ್ಯಾಸ್ ಬಿಡಬಹುದಾಗಿತ್ತು, ನೀರು ಬಿಡಬಹುದಾಗಿತ್ತು, ಆದರೆ ಅದನ್ನು ಮಾಡಲಿಲ್ಲ. ಇಂಥ ಘಟನೆಯನ್ನು ನಮ್ಮ ಕ್ಷೇತ್ರದ ಪಕ್ಕದಲ್ಲಿ ನೋಡಿದ್ದೇವೆ. ತಾವು ಈ ಘಟನೆಯಲ್ಲಿ ಮಡಿದವರ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೀರಿ. ಸಂತೋಷ. ಆದರೆ ಅವರಿಗೆ ಆ ಪರಿಹಾರ ಸಾಕಾಗುವುದಿಲ್ಲ. ಯಾರು ಸತ್ತಿದ್ದಾರೆ ಅವರ ಕುಟುಂಬದ ಒಬ್ಬರು ಸದಸ್ಯರಿಗೆ ಸರ್ಕಾರದಲ್ಲಿ ಕೆಲಸವನ್ನು ಕೊಡಬೇಕು. ಈ ಘಟನೆಯೇನೋ ಆಯಿತು. ಆದರೆ ಇನ್ನು ಮುಂದಾದರೂ ಸಹ ಆ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಬೇಕು. ಈ ಘಟನೆಯಾದ ಮೇಲೆ ಆ ಕಾರ್ಮಿಕ ಮುಖಂಡರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಇನ್ನು ಸ್ವಲ್ಪ ದಿವಸದಲ್ಲಿ ನಾವು ಬಂದ್‌ನ್ನು ಆಚರಿಸುತ್ತೇವೆ. ಜಿಲ್ಲಾಧಿಕಾರಿಗಳ ಮುಂದೆ ಬಂದ್ ಮಾಡುತ್ತೇವೆಂದು ಹೇಳಿದ್ದಾರೆ. ಆ ರೀತಿಯಾದ ಘಟನೆಯಾದಮೇಲೂ ತಾವು ಕಾರ್ಮಿಕರನ್ನು ಮತ್ತು ಮಾಲೀಕರನ್ನು ಕರೆದು ಅವರ ಸಮಸ್ಯೆಯನ್ನು ಬಗೆಹರಿಸಿದರೆ ಬಹಳ ಒಳ್ಳೆಯದು. ಮತ್ತೆ ಅದೇ ರೀತಿಯಾದ ಘಟನೆಯಾಗಬಾರದು. ಈ ಘಟನೆಯ ಬಗ್ಗೆ ತನಿಖೆ ಮಾಡಲು ಸದನದ ಸಮಿತಿಯನ್ನು ಮಾಡಬೇಕೆಂದು ನಮ್ಮ ಪಕ್ಷದ ಪರವಾಗಿ ನಾನು ಒತ್ತಾಯ ಮಾಡುತ್ತೇನೆ.

+ **ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):-** ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಮುಖಂಡರು ಹೆಜ್ಜಾಲದ ಗೋಲೀಬಾರ್ ಘಟನೆಯ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಅವರುಗಳೇನು ಮಾತನಾಡಿದ್ದಾರೆ ಅದನ್ನೇ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಪೋಲೀಸ್‌ನವರು ಎಫ್.ಐ.ಆರ್.ನಲ್ಲಿ ಏನನ್ನು ಹೇಳಿದ್ದಾರೆ ಅದರ

ಬಗ್ಗೆ ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಬಿಡದಿ ಪೋಲೀಸ್ ಠಾಣೆಯ ನರಹದ್ದು ಹೆಜ್ಜಾಲ ಗ್ರಾಮದಲ್ಲಿರುವ ಶ್ರೀ ವೆಳ್ಳಿಯಪ್ಪ ಟೆಕ್ಸ್‌ಟೈಲ್ ಮಿಲ್‌ನ ಕಾರ್ಮಿಕರು ಕಳೆದ ಸುಮಾರು ಮೂರು ತಿಂಗಳಿನಿಂದ ಮುಷ್ಕರ ಹೂಡಿದ್ದು ತಮ್ಮ ಕೋರಿಕೆಗಳನ್ನು ಈಡೇರಿಸದ ಕಾರಣ ಈ ದಿನ ಅಂದರೆ 3-2-97 ರಂದು ಬೆಳಿಗ್ಗೆ ಎರಡು ಗಂಟೆಗಳ ಕಾಲ ಬೆಂಗಳೂರು ಮೈಸೂರು ರಸ್ತೆಯಲ್ಲಿ ರಸ್ತೆ ತಡೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಸಾರ್ವಜನಿಕರಿಗೆ ಮತ್ತು ಕಾರ್ಮಿಕರಂಗದವರು ಭಿತ್ತಿಪತ್ರಗಳನ್ನು ವಿತರಿಸಿದರು. ಈ ರಸ್ತೆ ತಡೆ ಚಳುವಳಿಯನ್ನು ಬಂದೋಬಸ್ತಿನ ಸಲುವಾಗಿ ಬೆಂಗಳೂರು ಜಿಲ್ಲಾ ಪೋಲೀಸ್ ಅಧಿಕಾರಿಗಳು, ರಾಮನಗರ ಡಿ.ವೈ.ಎಸ್.ಪಿ. ಮತ್ತು ಜಿಲ್ಲೆಯ ಪೋಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯವರನ್ನು ನಿಯೋಜಿಸಲಾಗಿತ್ತು. ಇದಲ್ಲದೆ ರಾಜ್ಯದ ಮೀಸಲು ಸಶಸ್ತ್ರ ಪಡೆಯ ನಾಲ್ಕು ತುಕಡಿಗಳು ಮತ್ತು ಜಿಲ್ಲೆಯ ಸಶಸ್ತ್ರ ಮೀಸಲು ಪಡೆಯ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಅಂದರೆ ಕಾರ್ಮಿಕರೇನು ಚಳುವಳಿಯನ್ನು ಮಾಡಲು ಹೊರಟಿದ್ದಾರೆ, ರಸ್ತೆ ತಡೆಯನ್ನು ಮಾಡಲು ಹೊರಟಿದ್ದಾರೆ ಅದರ ಬಗ್ಗೆ ಸರ್ಕಾರಕ್ಕೆ ಸಂಪೂರ್ಣವಾದ ಮಾಹಿತಿ ಇತ್ತು. ಕಾರ್ಮಿಕರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದಾರೆ, ಮಾಜಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದಾರೆ, ಕಾರ್ಮಿಕ ಸಚಿವರನ್ನು ಭೇಟಿ ಮಾಡಿದ್ದಾರೆ. ಸರ್ಕಾರದ ಮುಂದೆ ನಾವು ಈ ರೀತಿ ರಸ್ತೆ ತಡೆಯನ್ನು ಮಾಡುತ್ತಿದ್ದೇವೆ, ಎರಡು ಗಂಟೆಗಳ ಕಾಲ ಆದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡಿದ್ದಾರೆ. ಅದರ ಹಿನ್ನೆಲೆಯಲ್ಲಿ ಪೋಲೀಸರು ಅವರದ್ದೇ ಆದ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ನಮ್ಮ ಮುಖಂಡರೊಬ್ಬರು ಬ್ಯಾಲೆಟ್ ಸ್ಟ್ರಾಂಗೋ ಅಥವಾ ಬುಲೆಟ್ ಸ್ಟ್ರಾಂಗೋ ಎಂದು ಹೇಳುತ್ತಿದ್ದರು. ಬುಲೆಟ್‌ಗಿಂತ್ ಬ್ಯಾಲೆಟ್ ಸ್ಟ್ರಾಂಗ್ ಎಂದು ತೀರ್ಪು ಬಂದಿದೆ. ಆದರೆ ಈ ಸೆಣೆಸಾಟದಲ್ಲಿ ಅಮಾಯಕರು ಬಲಿಯಾಗಿರತಕ್ಕ ಪರಿಸ್ಥಿತಿ ಬಂದಿದೆ. ನನಗೆ ವಿಚಾರಗಳ ಬಗ್ಗೆ ತಿಳುವಳಿಕೆ ಬಂದು ಸುಮಾರು ಹದಿನೈದು ವರ್ಷಗಳಾಗಿದೆ. ಅಂದಿನಿಂದ ಇಲ್ಲಿಯವರೆಗೆ ಎರಡು ಸಾವಿರ ಜನರ ಮೇಲೆ ಎಫ್.ಐ.ಆರ್.ನ್ನು ಹಾಕಿರುವ ಬಗ್ಗೆ ನಾನು ಎಂದು ಎಲ್ಲಿಯೂ ನೋಡಿಲ್ಲ. ಐವತ್ತು, ನೂರು, ಇನ್ನೂರು, ನಾನೂರು ಜನರ ಮೇಲೆ ಏನಾದರೂ ಸಂದರ್ಭದಲ್ಲಿ ಒಂದೇ ಬಾರಿಗೆ ಎಫ್.ಐ.ಆರ್.ನ್ನು ಹಾಕಬಹುದು. ಅದನ್ನೂ ಯಾರ ಮೇಲೆ ಎಫ್.ಐ.ಆರ್. ಹಾಕಿದ್ದಾರೆಂದರೆ ಯಾರೋ ಕಾರ್ಮಿಕರು, ಮನೆಯಲ್ಲಿದ್ದವರು, ಅಲ್ಲಿರತಕ್ಕ ತಾಲ್ಲೂಕು ಪಂಚಾಯಿತಿ ಸದಸ್ಯರು, ಪಂಚಾಯಿತಿಯ ಅಧ್ಯಕ್ಷರು, ಆ ಸ್ಥಳದಲ್ಲಿ ಯಾರ್‍ಯಾರು ಮುಖಂಡರಿರುತ್ತಾರೆ, ಯಾವುದೋ ಒಂದು ಪಕ್ಷದ ಪರವಾಗಿ ಓಡಾಡುತ್ತಾರೆ ಎಂದು ಅವರನ್ನು ಏನಾದರೂ ಮಾಡಿ ತಡೆಗಟ್ಟಬೇಕು, ಆ ಮೂಲಕ ಚುನಾವಣೆಯಲ್ಲಿ ಗೆಲ್ಲಬೇಕು ಎಂದು ಪೋಲೀಸ್‌ನವರು ಮಾಡಿಕೊಂಡು ಹೋದರೆ ಹೇಗೆ? ಯಾರ ಆದೇಶದ ಮೇರೆಗೆ ಪೋಲೀಸರು ಈ ಕೆಲಸ ಮಾಡಿದರು? ಮುಖ್ಯಮಂತ್ರಿಗಳೇನೂ ತಕ್ಷಣ ಪ್ರೋಬ್ ಆರ್ಡರ್ ಮಾಡಿದ್ದಾರೆ. ಅವರು ಹೃದಯ ವಿಶಾಲತೆಯಿಂದ ಯೋಚನೆ ಮಾಡಿ ಆ ರೀತಿ ತೀರ್ಮಾನ ಮಾಡಿದ್ದಾರೆ. ಬಹುಶಃ ಅವರಿಗೂ ಈ ಎಲ್ಲಾ ವಿಚಾರಗಳು ಗೊತ್ತಿರಬಹುದು ಏಕೆ ಈ ಘಟನೆಯಾಯಿತು? ಹೇಗೆ ಆಯಿತು ಎಂಬುದು ಅವರಿಗೆ ಗೊತ್ತಿರಬಹುದು. ಏಕೆಂದರೆ ಅದು ಬಹಳ ಜವಾಬ್ದಾರಿಯುತವಾದ ಸ್ಥಾನ. ಬಹಳಷ್ಟು ಜನರಿಗೆ ಈ ವಿಚಾರ ಗೊತ್ತಿದ್ದದ್ದೇ. ಬೇಕಾದಷ್ಟು

ಮುಖಂಡರು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಕಾರ್ಮಿಕರು ನಮಗೆ ಈ ರೀತಿಯಾದ ಸಮಸ್ಯೆ ಇದೆ, ಅದನ್ನು ಬೇಗನೆ ಬಗೆಹರಿಸಿ ಎಂದು ಅವರುಗಳು ಮನವಿ ಮಾಡಿಕೊಂಡಾಗ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗಲು ಈ ಚಿಕ್ಕ ಫ್ಯಾಕ್ಟರಿಯ ಎರಡು ಮೂರು ವರ್ಷದಿಂದ ಇರತಕ್ಕ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಪಟ್ಟರು, ಆದರೆ ಆಗಲಿಲ್ಲವೆನ್ನುವ ವಿಚಾರ ಗೊತ್ತಿದೆ. ಅವರು ನೀಡಿರುವ ಪಾಂಪ್ಲೆಟ್‌ನಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗಲೂ ನಮ್ಮ ಸಮಸ್ಯೆ ಇತ್ತು ಎಂದು ಹೇಳಿದ್ದಾರೆ. ಆದರೆ ಈಗ ಇಷ್ಟೊಂದು ಚಿಕ್ಕ ಸಮಸ್ಯೆಯನ್ನು ಬಗೆಹರಿಸದೆ ಇಷ್ಟೊಂದು ದೊಡ್ಡ ಘಟನೆಯಾಗಿದೆಯೆಂದರೆ ತಾವು ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ನಾವೆಲ್ಲರೂ ಸಹ ಅದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಎರಡು ಸಾವಿರ ಜನರ ಮೇಲೆ ಕೇಸ್‌ನ್ನು ಮಾಡಿದ್ದೀರಿ. ತಕ್ಷಣ ನಮ್ಮ ಮುಖಂಡರುಗಳು ಹೋಗಿ ನಮ್ಮ ಕಾರ್ಯಕರ್ತರನ್ನೆಲ್ಲಾ ಅರೆಸ್ಟ್ ಮಾಡುತ್ತಾರೆಂದು ಪ್ರತಿಭಟನೆ ಮಾಡಿದರು, ತಕ್ಷಣ ಪೋಲೀಸ್‌ನವರು ಅದಕ್ಕೆ ಏನೇನೋ ವ್ಯವಸ್ಥೆಯನ್ನು ಮಾಡಿದರು. ಅದು ಬೇರೆ ವಿಚಾರ. ಆ ಘಟನೆಯಾದ ಸಂಜೆಯೇ ಶಾಸಕ ಡಿ.ಕೆ. ಶಿವಕುಮಾರ್ ಮತ್ತು ರಾಮನಗರ ಕ್ಷೇತ್ರದ ಅಭ್ಯರ್ಥಿ ಸಿ.ಎಂ. ಲಿಂಗಪ್ಪನವರು ಈ ಘಟನೆಯಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳಿದ್ದಾರೆ. ನಾವೇನಾದರೂ ಅದರಲ್ಲಿ ಶಾಮೀಲಾಗಿದ್ದರೆ, ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ, ಗೃಹ ಸಚಿವರಿದ್ದಾರೆ, ಆ ರೀತಿ ನಾವುಗಳು ಶಾಮೀಲಾಗಿದ್ದರೆ ಅದರ ಹಿಂದಿನ ದಿನವೇ ನಮ್ಮನ್ನು ಅರೆಸ್ಟ್ ಮಾಡಬಹುದಾಗಿತ್ತು. ಈವತ್ತೂ ನಮ್ಮನ್ನು ಅರೆಸ್ಟ್ ಮಾಡಿ. ಮತ್ತೆ ನಾನು ಪತ್ರಿಕಾ ವರದಿ ಓದಿ ಹೇಳುತ್ತೇನೆ. ಭಾನುವಾರ ರಾತ್ರಿ ಕಾಂಗ್ರೆಸ್‌ನವರು ಒಂದು ಟ್ರಕ್‌ನಲ್ಲಿ ಕಲ್ಲು ಮತ್ತು ಈರುಳ್ಳಿ... ಯಾವ ಟ್ರಕ್ಕು? ಯಾವ ಈರುಳ್ಳಿ? ಯಾವ ಕಲ್ಲು ಸ್ವಾಮಿ?...

ಶ್ರೀ ಜೆ.ಹೆಚ್. ಪಟೇಲ್:- ಅವರು ಘಟನೆ ನಡೆದ ಸ್ಥಳದ ವ್ಯಾಪ್ತಿಗೆ ಬರುವ ಲೋಕಸಭಾ ಸದಸ್ಯರು. ಮಾನ್ಯ ಶಿವಕುಮಾರ್‌ರವರು ವಿಧಾನ ಸಭಾ ಸದಸ್ಯರು. ಈ ಸದನದಲ್ಲಿ ಮಾನ್ಯ ಸದಸ್ಯರಿಗೆ ಗೊತ್ತಿರಬೇಕು...

ಶ್ರೀ ಡಿ.ಕೆ. ಶಿವಕುಮಾರ್:- ನಮ್ಮ ಪರಿಸ್ಥಿತಿಯನ್ನು ನಾವು ಡಿಫೆಂಡ್ ಮಾಡಿಕೊಳ್ಳುವುದು ಹೇಗೆ? ಹಾಗಾದರೆ ಯಾರು ಎಲ್ಲೆಲ್ಲಿ ಹೇಗೆ ಬೇಕಾದರೂ ಮಾತನಾಡಬಹುದೇ?

ಉಪಾಧ್ಯಕ್ಷರು:- ಅವರು ಈ ಸದನದ ಸದಸ್ಯರಲ್ಲ, ಆದ್ದರಿಂದ ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅಷ್ಟು ಸೂಕ್ತವಲ್ಲ.

(ಗೊಂದಲ)

SRI M. MALLIKARJUNA KHARGE:- He is referring to the statement made by him and it has appeared in all the newspapers. He is referreing to the statement.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ನೇರವಾಗೇ ಬರುತ್ತಿದ್ದೇನೆ ನಾನು...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಮಾನ್ಯ ಲೋಕಸಭಾ ಸದಸ್ಯರ ಮೇಲೆ ಅಲಿಗೇಷನ್ ಮಾಡುತ್ತಿಲ್ಲ. He is referring to the statement.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ಜವಾಬ್ದಾರಿ ಸ್ಥಾನದಲ್ಲಿರುವವರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು.

(ಗೊಂದಲ)

SRI J.H. PATEL:- Will you listen to me?

(ಗೊಂದಲ)

ಉಪಾಧ್ಯಕ್ಷರು:- ಈ ಸದನದ ಸದಸ್ಯರಲ್ಲದವರ ಹೆಸರನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವಲ್ಲ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಶಿವಕುಮಾರ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುವುದನ್ನು ಕೇಳಿ. ಕನಿಷ್ಟ ನನಗೆ ಪ್ರೊಸೀಜರ್ ಆದರೂ ಗೊತ್ತಿದೆ. ಅವರು ಏನೇ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದರೂ ಲೋಕಸಭಾ ಸದಸ್ಯರಾಗಿಯೇ ಇವರ ಮೇಲೆ ಹೇಳಿರಬಹುದು, ಇವರು ಅವರ ಮೇಲೆ ಹೇಳಿರಬಹುದು. ಈ ಸದನದಲ್ಲಿ ಅದನ್ನು ಉಲ್ಲೇಖ ಮಾಡಬಾರದು.

ಸಭಾಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಪೀಠವನ್ನು ಅಲಂಕರಿಸಿದರು

ಶ್ರೀ ಜೆ.ಹೆಚ್. ಪಟೇಲ್:- ನಾಳೆ ಮಾನ್ಯ ಶಿವಕುಮಾರ್‌ರವರ ಬಗ್ಗೆ ಲೋಕಸಭಾ ಸದಸ್ಯರು ಲೋಕಸಭೆಯಲ್ಲಿ ಹೇಳಿದರೆ ಅದನ್ನು ನೀವು ಹೇಗೆ ಡಿಫೆಂಡ್ ಮಾಡಿಕೊಳ್ಳುತ್ತೀರಿ? ಇವತ್ತು ಲೋಕಸಭಾ ಸದಸ್ಯರು ಏನು ಹೇಳಿದ್ದಾರೆ, ಪ್ರೆಸ್ ಸ್ಟೇಟ್‌ಮೆಂಟ್ ಏನು ಕೊಟ್ಟಿದ್ದಾರೆ ಅದನ್ನು ಇಲ್ಲಿ ನೀವು ಉಲ್ಲೇಖ ಮಾಡಬಾರದು. ಅಲ್ಲಿ ಅವರು ರಾಜಕೀಯವಾಗಿ ಇನ್ನೇನಾದರೂ ಆಕ್ಟಿವಿಟೀಸ್ ಮಾಡಿದ್ದರೆ ಬೇಕಾದರೆ ಹೇಳಿ. ಅವರು ಈ ಸದನದ ಸದಸ್ಯರಲ್ಲ, ಮೇಲಾಗಿ ಘಟನೆ ನಡೆದ ಸ್ಥಳದ ವ್ಯಾಪ್ತಿಯ ಲೋಕಸಭಾ ಸದಸ್ಯರು. ಅವರು ಅಲ್ಲಿ ಹೇಳಿದ್ದುದು ಪತ್ರಿಕೆಯಲ್ಲಿ ಬಂದಿರುವುದನ್ನು ನೀವು ಇಲ್ಲಿ ಹೇಳುವುದಕ್ಕಾಗುವುದಿಲ್ಲ. You cannot use this House.

SRI M. MALLIKARJUNA KHARGE:- He is not making any allegation. Just he is referring to his statement that such and such M.P. said in the Press Conference alleging that D.K. Shiva Kumar and Lingappa brought onions and stones... ಅವರು ಹೇಳಿದ್ದನ್ನು ಹೇಳಿದ್ದಾರೆ ಅಷ್ಟೆ.

MR. SPEAKER:- He is an M.P. Whether he has said or not..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರೂ ಜೊತೆಯಲ್ಲಿ ಪ್ರೆಸ್ ಕಾನ್ಫರೆನ್ಸ್ ಮಾಡಿದ್ದಾರೆ ಸಾರ್.

ಶ್ರೀ ಜೆ.ಹೆಚ್. ಪಟೇಲ್:- ದಯವಿಟ್ಟು ನಾನು ಹೇಳುವುದನ್ನು ಕೇಳಿ. ಪಾರ್ಲಿಮೆಂಟರಿ ಪ್ರೊಸೀಜರ್ ನನಗೂ ಸ್ವಲ್ಪ ಗೊತ್ತಿದೆ. ಲೋಕಸಭಾ ಸದಸ್ಯರು ಹೇಳಿದರು ಎಂದು ಈ ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿ ಇಲ್ಲಿ ಅದು ರೆಕಾರ್ಡ್ ಆಗಬಾರದು. ಅವರೂ ಕೂಡ ಲೋಕಸಭೆಯಲ್ಲಿ ಹೋಗಿ ಮಾನ್ಯ ಶಿವಕುಮಾರ್‌ರವರು ಹೀಗೆ ಹೇಳಿದರು ಎಂದು ಹೇಳಬಾರದು. ನೀವೂ ಕೂಡ ಅವರ ಬಗ್ಗೆ ಇಲ್ಲಿ ಮಾತನಾಡಬಾರದು. ಈ ಸದನದಲ್ಲಿ ಯಾವುದೇ ಕಾರಣದಿಂದ ಪತ್ರಿಕೆ ಮೂಲಕ ವರದಿಯಾಗಿದ್ದನ್ನು ಉಲ್ಲೇಖಿಸಬಾರದು. ಅವರಿಗೆ ನೀವು ಉತ್ತರ ಕೊಡುವುದಾದರೆ ನೀವು ಪತ್ರಿಕೆ ಮೂಲಕವೇ ಕೊಡಿ. ಈ ಸದನದಲ್ಲಿ ಕೊಡುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಲೋಕಸಭಾ ಸದಸ್ಯರು ನಡೆಸಿದ ಪ್ರೆಸ್ ಕಾನ್ಫರೆನ್ಸ್‌ನಲ್ಲಿ ಮಾನ್ಯ ಮಂತ್ರಿಗಳಾದ ವರದೇಗೌಡರೂ ಇದ್ದರು.

ಶ್ರೀ ಎಂ. ವರದೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಅವತ್ತು ಅಲ್ಲಿ ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರಿಗೆ ಎಲ್ಲಾ ವಿಷಯ ಗೊತ್ತಿದೆ, ಕೇಳಿ ನೋಡಿ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಖರ್ಗೆಯವರೇ, ನೀವು ಹಿರಿಯ ಸದಸ್ಯರಿದ್ದೀರಿ. These things should not go on record.

ಅಧ್ಯಕ್ಷರು:- ಇದೆಲ್ಲಾ ಮಾನ್ಯ ಖರ್ಗೆಯವರಿಗೂ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾವು ಆ ಕಡೆಗೆ ಕುಳಿತಿದ್ದಾಗ ಮಾನ್ಯ ಖರ್ಗೆಯವರು ಈ ಕಡೆಗೆ ಮಂತ್ರಿಗಳು ಆಗಿದ್ದಿರಿ. ಆ ಸಂದರ್ಭದಲ್ಲಿ ಚನ್ನಪಟ್ಟಣ ಮತ್ತು ರಾಮನಗರದಲ್ಲಿ ಇದೇ ರೀತಿ ಹಿಂದೂ ಮುಸ್ಲಿಂ ಕ್ಲಾಷ್ ಆಗಿತ್ತು. ಆಗ ನಾನು ಒಬ್ಬ ಲೋಕಸಭಾ ಸದಸ್ಯರ ಹೆಸರನ್ನು ಹೇಳಬಯಸಿದಾಗ ನೀವು ಅದನ್ನು ರೆಕಾರ್ಡ್ಸ್‌ಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ. ನಾನು ಆಗ ಇದೇ ತರಹದ ಒಂದು ಪ್ರೆಸ್ ಸ್ಟೇಟ್‌ಮೆಂಟ್ ಅನ್ನು ರೆಫರ್ ಮಾಡುತ್ತಿದೆ. ಈ ರೀತಿ ಪತ್ರಿಕೆಗಳಲ್ಲಿ ವರದಿಯಾಗಿದೆ ಎಂದು ನಾನು ಆ ದಿವಸ ಹೇಳಿದಾಗ ಮಾನ್ಯ ಖರ್ಗೆಯವರು ಯಾವುದೇ ಕಾರಣಕ್ಕೂ ಅದನ್ನು ಸದನದಲ್ಲಿ ಪ್ರಸ್ತಾಪಿಸಬಾರದು ಎಂದು ಅಬ್ಜೆಕ್ಟ್ ಮಾಡಿದ್ದರು. ಈಗ ನೀವು ಮಾನ್ಯ ವರದೇಗೌಡರು ಅಲ್ಲಿದ್ದರು ಎಂದು ಹೇಳಿದ್ದೀರಿ; 30 ಕಿ.ಮೀ. ದೂರದಲ್ಲಿ ಸಿಂಧ್ಯಾರವರು ಇದ್ದರು ಎಂದು ನನಗೂ ಹೇಳಿದ್ದೀರಿ. ಅದನ್ನು ಬೇಕಾದರೆ ನೀವು ಹೇಳಿ, ಏಕೆಂದರೆ ನಾನು ಈ ಸದನದ ಸದಸ್ಯನಾಗಿದ್ದೇನೆ. ನಾನಿಲ್ಲಿದ್ದೇನೆ, ನಾನು ಹೇಳುತ್ತಿದ್ದೇನೆ, ಇಲ್ಲಾ ನಾನು 10-45 ಗಂಟೆಗೆ ಅವತ್ತಿನ ದಿವಸ ವೋಲ್ವೋ ಕಂಪನಿಯವರ ಜೊತೆಯಲ್ಲಿ ವಿಧಾನ ಸೌಧದಲ್ಲಿ ಸರ್ಕಾರದ ಪರವಾಗಿ ಒಪ್ಪಂದವೊಂದನ್ನು ಮಾಡಿಕೊಳ್ಳಲು ಸೇರಿದ ಸಭೆಯಲ್ಲಿ ಇದ್ದೆ. ಘಟನೆಯಾದ ಸ್ಥಳದಲ್ಲಿ ನಾನು ಇರಲೇ ಇಲ್ಲ. ಘಟನೆಯಾದ 30 ಕಿ.ಮೀ. ದೂರದಲ್ಲಿ ನಾನು ಇದ್ದೆ. ನಾನು ಮಧ್ಯಾಹ್ನ 3.30 ಗಂಟೆಗೆ ಘಟನೆ ನಡೆದ ವಿಚಾರ ಗೊತ್ತಾಯಿತು ಎಂದು ನಾನು ಆಗಲೇ ಹೇಳಿದ್ದೇನೆ. I am here

to contradict it or to defend myself whereas Mr. Kumaraswamy is not here. How can you make a reference to him?

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಸಭಾಧ್ಯಕ್ಷರೇ, ಲೋಕಸಭಾ ಸದಸ್ಯರ ಹೆಸರನ್ನು ಏಕೆ ಇಲ್ಲಿ ಪ್ರಸ್ತಾಪ ಮಾಡಬಾರದು ಎಂದರೆ, ಅವರ ಮೇಲೆ ಅಲಿಗೇಷನ್ ಮಾಡಿದಂತಹ ಸಂದರ್ಭದಲ್ಲಿ ಅವರ ಇಲ್ಲಿ ಇಲ್ಲದೇ ಇರುವುದರಿಂದ ಅವರಿಗೆ ಡಿಫೆಂಡ್ ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವ ಕಾರಣಕ್ಕೋಸ್ಕರ ಅವರ ಹೆಸರನ್ನು ಇಲ್ಲಿ ಪ್ರಸ್ತಾಪಿಸಬಾರದು. ಇಲ್ಲಿ ಮಾನ್ಯ ಶಿವಕುಮಾರ್‌ರವರು ಅವರ ಮೇಲೆ ಯಾವುದೇ ರೀತಿಯ ಅಲಿಗೇಷನ್ ಮಾಡಿಲ್ಲ. ಅವರು ಹೇಳಿದಂತಹ ಹೇಳಿಕೆಯನ್ನು ಓದಿ ಹೇಳುತ್ತಿದ್ದಾರೆ ಅಷ್ಟೆ. ಮಾನ್ಯ ಶಿವಕುಮಾರ್ ಏನಾದರೂ ಮಾನ್ಯ ಲೋಕಸಭಾ ಸದಸ್ಯರ ಮೇಲೆ ಅಲಿಗೇಷನ್ ಮಾಡಿದ್ದರೆ ನೀವು ಹಾಗೆ ಹೇಳುವುದರಲ್ಲಿ ಅರ್ಥ ಇತ್ತು.

MR. SPEAKER:- It is not an allegation. ಅವರು ಕಾಂಪ್ಲಿಮೆಂಟ್ ಮಾಡುತ್ತಿದ್ದಾರೆ ಅಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್:- ಇನ್ನೊಂದು ಹೇಳಿಕೆಯಲ್ಲಿ ಮತ್ತೆ ಅವರು ಏನು ಹೇಳುತ್ತಾರೆ ಎಂದರೆ, ನಾನು ಗೋಲಿಬಾರ್ ಮಾಡಬೇಡಿ, ಭಾನುವಾರ ಸಂಜೆ...

ಅಧ್ಯಕ್ಷರು:- ಮತ್ತೆ ಪತ್ರಿಕಾ ಹೇಳಿಕೆಯನ್ನೇ ಪ್ರಸ್ತಾಪಿಸಬೇಡಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೇ,... ದಯಮಾಡಿ ಇಲ್ಲಿ ಸ್ಟೇಟ್‌ಮೆಂಟ್ ವಿಷಯ ಬೇಕಾಗಿಲ್ಲ. ಸ್ಟೇಟ್‌ಮೆಂಟ್ ಕನ್‌ಫರ್ಮ್...

SRI D.K. SHIVA KUMAR:- It is a reference.

MR. SPEAKER:- No. You are not permitted to do. ದಯಮಾಡಿ ನಾನು ಹೇಳುವುದನ್ನು ಕೇಳಿ.

ಶ್ರೀ ಡಿ.ಕೆ. ಶಿವಕುಮಾರ:- ಮಾನ್ಯ ಅಧ್ಯಕ್ಷರೇ, ನಾವು ಇನ್ನಾವ ಮಾಹಿತಿ ಆಧರಿಸಿ ಇಲ್ಲಿ ಮಾತನಾಡಬೇಕು ಎಂಬುದನ್ನು ನೀವೇ ಹೇಳಿ. ಇಂತಹ ಮಾಹಿತಿಯನ್ನು ತೆಗೆದುಕೊಂಡು ಮಾತನಾಡಿ ಎಂದು ಸ್ಪಷ್ಟವಾಗಿ ನಿರ್ದೇಶಿಸಿ. ಈ ಬಗ್ಗೆ ಸರ್ಕಾರದವರೇನಾದರೂ ಮಾಹಿತಿ ಒದಗಿಸಲಿಕ್ಕೆ ಸಾಧ್ಯವೇ? ನಮಗೆ ಈ ಪತ್ರಿಕಾ ವರದಿಯಲ್ಲಿರತಕ್ಕದ್ದೇ ಆಧಾರ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಶಿವಕುಮಾರ್‌ರವರ ಬಗ್ಗೆ ಯಾರಾದರೂ ನಮ್ಮ ಪಾರ್ಟಿಯವರು, ಲೋಕಸಭಾ ಸದಸ್ಯರೋ ರಾಜ್ಯದ ಮಂತ್ರಿಗಳೋ ಅಥವಾ ಕೇಂದ್ರದ ಮಂತ್ರಿ- ಗಳೋ ಹೇಳಿದ್ದರೆ ಅದು ಪತ್ರಿಕೆಯಲ್ಲಿ ವರದಿ ಮಾಡಬಹುದು, ಆದರೆ not this House.

MR. SPEAKER:- Exactly.

ಶ್ರೀ ಡಿ.ಕೆ. ಶಿವಕುಮಾರ್:- ನಾನು ಮಾನ್ಯ ಲೋಕಸಭಾ ಸದಸ್ಯರು ಪತ್ರಿಕಾ ಹೇಳಿಕೆಯಲ್ಲಿ ಏನು ಹೇಳಿದ್ದಾರೋ ಅದನ್ನೇ ಇಲ್ಲಿ ಹೇಳುತ್ತಿದ್ದೆ.

ಅಧ್ಯಕ್ಷರು:- ಅದನ್ನು ನೀವು ಇಲ್ಲಿ ಹೇಳುವ ಅಗತ್ಯವಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ಗೋಲಿಬಾರ್ ವಿಚಾರದಲ್ಲಿ.... ಅವರು ಏನು ಹೇಳಿದ್ದಾರೆ ಎಂದರೆ, ಅವರು ಆ ಬಗ್ಗೆ ಎಸ್.ಪಿ.ಯವರೊಡನೆ ಮಾತನಾಡಿದ್ದಾರಂತೆ.

ಅಧ್ಯಕ್ಷರು:- ದಯಮಾಡಿ ನಾನು ಹೇಳುವುದನ್ನು ಕೇಳಿ. ಮಾನ್ಯ ಲೋಕಸಭಾ ಸದಸ್ಯರಿಗೆ ಏನೆಲ್ಲಾ ಉತ್ತರಗಳನ್ನು ನೀವು ಕೊಡಬೇಕೆಂದು ಇದ್ದೀರಿ ಆ ಬಗ್ಗೆ ದಯಮಾಡಿ ಒಂದು ಪ್ರೆಸ್ ಕಾನ್ಫರೆನ್ಸ್ ಕರೆದು ಅಲ್ಲಿ ಹೇಳಿ. ಆ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು:- ಉತ್ತರ ಇಲ್ಲಿ ಹೇಳುವುದು ಬೇಡ. ಇನ್ನೂ ಅಗತ್ಯ ಇದ್ದರೆ ನಿಮ್ಮ ಪಕ್ಷದ ಲೋಕಸಭಾ ಸದಸ್ಯರಿಗೆ ಹೇಳಿ, ಈ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪ ಮಾಡಿಸಿ.

ಶ್ರೀ ಡಿ.ಕೆ. ಶಿವಕುಮಾರ್:- ಆಯಿತು, ನಾನಿಲ್ಲಿ ಅವರಿಗೆ ಉತ್ತರ ಕೊಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪತ್ರಿಕೆಯಲ್ಲಿ ಬಂದಿದ್ದೆಲ್ಲವೂ ಸರಿಯೇ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅವರೇ ಸ್ವತಃ ಪ್ರೆಸ್ ಕಾನ್ಫರೆನ್ಸ್ ಮಾಡಿ ಹೇಳಿದ್ದಕ್ಕೂ ನೀವು ಪ್ರೂಫ್ ಬೇಕೆಂದರೆ ಬಹಳ ಕಷ್ಟವಾಗುತ್ತದೆ. ಯಾರೋ ಒಂದು ಪತ್ರಿಕೆಯಲ್ಲಿ ಅವರು ಹೇಳದೇ ಇರತಕ್ಕಂಥದ್ದು ಬಂದಿದ್ದರೆ ಅದನ್ನು ಅವರು ನಾನು ಹೇಳೇ ಇಲ್ಲ ಎಂದು ಹೇಳಬಹುದು. ಈಗ ನಾನು ಆ ಬಗ್ಗೆ ಉದಾಹರಣೆ ಕೊಡುವುದಾದರೆ, ಮಾನ್ಯ ಸಿಂಧ್ಯಾರವರು ನೀಡಿರುವ ಪತ್ರಿಕಾ ಹೇಳಿಕೆಯೊಂದು ದಿನಾಂಕ 5-2-97ರ 'ದಿ ಹಿಂದೂ' ಪತ್ರಿಕೆಯಲ್ಲಿ ಬಂದಿದೆ. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ, "Transport Minister Mr. P.G.R.Sindhia repudiated an allegation made by the PCC President that the firing took place in his presence and also that of V.Somanna, Varade Gowda, H.D. KumaraSwamy, Janata Dal MP and one of the sons of the Prime Minister. Mr. Sindhia asserted that at the time of the incident he was 30 Km. away from Hejjala and Mr. KumaraSwamy was 15 Kms. away."

ನಾನು ಈ ಹಿಂದೆ ಮಾತನಾಡಿ ಏನು ಪ್ರಸ್ತಾಪ ಮಾಡಿದ್ದೆ ಎಂದರೆ, ಮಾನ್ಯ ಸಿಂಧ್ಯಾರವರಿಗೂ ಮತ್ತು ಶ್ರೀ ಕುಮಾರಸ್ವಾಮಿಯವರಿಗೂ 15 ಕಿ.ಮೀ.ಗಳ ನಂತರ ಇತ್ತಲ್ಲಾ, ಹೀಗಿರುವಾಗ ಅವರನ್ನು ಮಾನ್ಯ ಸಿಂಧ್ಯಾರವರು ಹೇಗೆ ನೋಡಿದರು ಎಂದು ನಾನು ಅಗಲೇ ಪ್ರಸ್ತಾಪ ಮಾಡಿದ್ದೆ. ಅವರಿಬ್ಬರೂ ಬಹಳ ಕ್ಲೋಸ್ ಆಗಿ ಇದ್ದರು. ಈಗ ಅವರಿಬ್ಬರೂ 15 ಕಿ.ಮೀ.ಅಂತರ ಇರಬೇಕಾದ ಪರಿಸ್ಥಿತಿ ಬಂದಿದೆಯಲ್ಲಾ ಇದೇನು ಗ್ರಹಚಾರ ಬಂತು ಎಂದು ನಾನು ಪ್ರಸ್ತಾಪ ಮಾಡಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, I would like to clarify the position. ಘಟನೆ ನಡೆದ ಮಾರನೆಯ ದಿವಸ ಗೋಲಿಬಾರ್ ನಡೆದ ಪ್ರಕರಣದ ಬಗ್ಗೆ

ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ನಿರ್ಧರಿಸಿ ಆ ಬಗ್ಗೆ ಪತ್ರಿಕಾ ಮಿತ್ರರಿಗೆ ತಿಳಿಸಲು ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಗೋಷ್ಠಿಯೊಂದನ್ನು ಕರೆದಿದ್ದರು. ಆ ಪತ್ರಿಕಾ ಗೋಷ್ಠಿಯ ಸಂದರ್ಭದಲ್ಲಿ ನಾನೂ ಹಾಜರಿದ್ದೆ. ಅವತ್ತಿನ ಪತ್ರಿಕೆಯಲ್ಲಿ ಮಾನ್ಯ ಧರ್ಮಸಿಂಗ್, ಮಾನ್ಯ ಖರ್ಗೆ ಮತ್ತು ಮಾನ್ಯ ಹೆಚ್.ಕೆ. ಪಾಟೀಲರು ಒಂದು ಅಲಿಗೇಷನ್ ಅನ್ನು ನನ್ನ ಮೇಲೆ ಮಾಡಿದ್ದರು. ಆ ಒಂದು ಪ್ರೊಸೆಷನ್‌ನಲ್ಲಿ ಮಾನ್ಯ ಮಂತ್ರಿಗಳಾದ ಸಿಂಧ್ಯಾ, ವರದೇಗೌಡ, ಸೋಮಣ್ಣನವರು ಮತ್ತು ನಾಗೇಗೌಡರು ಇದ್ದರು ಎಂದು ಅವರು ಅಲಿಗೇಷನ್ ಮಾಡಿದ್ದರು. ನಾವ್ಯಾರೂ ಆ ಸಂದರ್ಭದಲ್ಲಿ ಅಲ್ಲಿ ಇರಲಿಲ್ಲ ಎಂಬುದನ್ನು ನಾನು ಮೊದಲನೇ ಸಂದರ್ಭದಲ್ಲೇ ಹೇಳಿದ್ದೆ. 10-45 ಗಂಟೆಗೆ ವೋಲ್ವೋ ಕಂಪನಿಯ ವೈಸ್ ಛೇರ್ಮನ್ ಜೊತೆಗೆ ಬಿ.ಟಿ.ಎಸ್. ಮತ್ತು ವೋಲ್ವೋ ಕಂಪನಿ ನಡುವೆ ಆದಂತಹ ಒಂದು ಒಪ್ಪಂದಕ್ಕೆ ನಾನು ಅವತ್ತು ವಿಧಾನಸೌಧದಲ್ಲಿ ಸಹಿ ಹಾಕುತ್ತಿದ್ದೆ. ಈ ಬಗ್ಗೆ ಅಧಿಕೃತ ದಾಖಲೆಗಳಿವೆ. ನನಗೆ ಘಟನೆ ನಡೆದ ವಿಚಾರ ಗೊತ್ತಾಗಿದ್ದು ಸಾಯಂಕಾಲ ಸುಮಾರು 3-30 ಗಂಟೆಗೆ. ನಾನು ಇಲ್ಲಿಂದ ಅದನ್ನು ಮುಗಿಸಿಕೊಂಡು ಹೋದ ಮೇಲೆ ಅದು ನನ್ನ ಗಮನಕ್ಕೆ ಬಂತು. ನಾನು ಆಗ ಹೆಜ್ಜಾಲದಿಂದ 30-40 ಕಿ.ಮೀ. ದೂರದಲ್ಲಿದ್ದೆ. ಹೀಗಿರುವಾಗ ನನ್ನ ಹೆಸರನ್ನು ಕೆ.ಪಿ.ಸಿ.ಸಿ. ಪ್ರೆಸಿಡೆಂಟ್ ಹಾಗೂ ಮಾನ್ಯ ಖರ್ಗೆಯವರು ಏಕೆ ಡ್ರ್ಯಾಗ್ ಮಾಡಿದರೋ ಗೊತ್ತಿಲ್ಲ. ಮಾನ್ಯ ವರದೇಗೌಡರಾಗಲೀ ಅಥವಾ ಮಾನ್ಯ ಸೋಮಣ್ಣನವರಾಗಲೀ ಅವತ್ತು ಅಲ್ಲಿ ಇರಲೇ ಇಲ್ಲ. ಅವತ್ತು ಅಲ್ಲಿ ರಸ್ತೆ ರೋಕೋ ಮಾಡುತ್ತಿದ್ದಾರೆ ಎಂದು ತಿಳಿದೇ ನಾವು ಬೇರೆ ಮಾರ್ಗದಲ್ಲಿ ಅಲ್ಲಿಗೆ ಹೋಗುತ್ತಿದ್ದೆವು. ಇವರು ರಾಜಕೀಯ ಉದ್ದೇಶದಿಂದ ನನ್ನ ಹೆಸರನ್ನು ಪ್ರಸ್ತಾಪಿಸಿದ್ದಾರೆ ಎಂದು ನಾನು ಹೇಳಿರತಕ್ಕದ್ದು ನಿಜ. ಆ ಲಾಜಿಕಲ್ ನಾನ್ಯಾಕೆ ಇಲ್ಲಿ ಹೇಳುತ್ತಿದ್ದೇನೆ ಎಂದರೆ ನಾನು ಹಿಂದೆ ವಿರೋಧ ಪಕ್ಷದ ಉಪನಾಯಕನಾಗಿದ್ದಾಗ ನಡೆದಂತಹ ಹಿಂದೂ ಮುಸಲ್ಮಾನ್ ಕ್ಲಾಷ್ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾಗ ಮಾನ್ಯ ಖರ್ಗೆಯವರು ಮಂತ್ರಿಗಳಾಗಿ ಆಡಳಿತ ಪಕ್ಷದ ಕಡೆಯಲ್ಲಿ ಕುಳಿತಿದ್ದರು. ಆಗ ನೀವೇನು ಹೇಳಿದಿರಿ, ನೀವು ಯಾವುದೇ ರಾಜ್ಯಸಭಾ ಅಥವಾ ಲೋಕಸಭಾ ಸದಸ್ಯರಾಗಲೀ ನೀಡಿದಂತಹ ಪತ್ರಿಕಾ ಹೇಳಿಕೆಯನ್ನು ಇಲ್ಲಿ ರೆಫರ್ ಮಾಡಬೇಡಿ ಎಂದು ಹೇಳಿದಿರಿ. ನಾನೂ ಸಹ ಆ ಸಂದರ್ಭದಲ್ಲಿ ಪ್ರೆಸ್ ಸ್ಟೇಟ್‌ಮೆಂಟ್ ಅನ್ನೇ ರೆಫರ್ ಮಾಡುತ್ತಿದ್ದೆ. ಅದನ್ನು ರೆಫರ್ ಮಾಡಲು ಆವಾಗ ನನಗೆ ಅಲೋ ಮಾಡಲಿಲ್ಲ. ಅದು ರೆಕಾರ್ಡ್‌ಗೆ ಹೋಗಲಿಕ್ಕೆ ಸಾಧ್ಯವಿಲ್ಲ, ತಾವು ಅದರ ರೆಫರನ್ಸ್ ಮಾಡಬಾರದು ಎಂದು ತಾವು ಆಗ ನನಗೆ ಹೇಳಿದ್ದೀರಿ. ಅದನ್ನೆ ನಾನೀಗ ಮಾನ್ಯ ಶಿವಕುಮಾರ್‌ರವರಿಗೆ ಹೇಳಿದ್ದುದು. ನೀವು ಅದನ್ನು ರೆಫರೆನ್ಸ್ ಮಾಡಲಿಕ್ಕೆ ಸಾಧ್ಯವಿಲ್ಲ, ಅದು ರೆಕಾರ್ಡ್‌ನಲ್ಲಿ ಹೋಗಲಿಕ್ಕೆ ಸಾಧ್ಯವಿಲ್ಲ. You cannot take the name of Sri KumaraSwamy here. Even indirect reference ಮಾಡಿದರೆ ಏನಾಗುತ್ತದೆ? He is not here to defend. ಬೇಕಾದರೆ ನನ್ನ ಮೇಲೆ ಮಾಡಿ, ಮಾನ್ಯ ವರದೇಗೌಡರ ಮೇಲೆ ಮಾಡಿ ಅಥವಾ ಮತ್ತೊಬ್ಬರ ಮೇಲೆ ಮಾಡಿ. ನಮ್ಮನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ, ಕರೆಕ್ಟ್ ಪೊಸಿಷನ್ ಏನು ಎಂದು ಹೇಳುವುದಕ್ಕೆ ನಾವು ಇಲ್ಲೇ ಇದ್ದೇವೆ. ಆದರೆ ನೀವು ಮಾನ್ಯ ಲೋಕಸಭಾ ಸದಸ್ಯರ ಹೆಸರನ್ನು ಇಲ್ಲಿ ಪ್ರಸ್ತಾಪಿಸಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್:- ಇಲ್ಲಿ ನಾನು ಏನು ಹೇಳುತ್ತೇನೆಂದರೆ, ನಾನು ಗೋಲಿಬಾರ್ ಮಾಡಬೇಡಿ ಎಂದು ಹೇಳಿದ್ದೆ, ಭಾನುವಾರ ಸಂಜೆ ಎಸ್‌ಪಿ ಅವರನ್ನು ಕರೆಸಿ...

ಶ್ರೀ ಎನ್.ಎಮ್. ನಬಿ:- ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಸಹಿ ಮಾಡಿ ಕೊಟ್ಟಿದ್ದಾರೆ ಆ ವಿಷಯದ ಬಗ್ಗೆ ಮಾತ್ರ ಮಾತನಾಡಲಿ, ಅದನ್ನು ಬಿಟ್ಟು ಅವರು ಹೀಗೆ ಹೇಳಿಕೆ ಕೊಟ್ಟಿದ್ದಾರೆ, ಇವರು ಹೀಗೆ ಹೇಳಿಕೆ ಕೊಟ್ಟಿದ್ದಾರೆ ಎಂದು ಹೇಳುವ ಅವಶ್ಯಕತೆ ಇಲ್ಲ. ಇವರು ಹೇಳತಕ್ಕಂಥದ್ದು ಏನು ಇದೆ, ಅದನ್ನು ದಯವಿಟ್ಟು ಹೇಳಲಿ.

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಸಭಾಧ್ಯಕ್ಷರೆ, ನೀವು ರೂಲಿಂಗ್ ಕೊಡುವಾಗ, ಅಥವಾ ಗೈಡ್‌ಲೈನ್ಸ್ ಹಾಕುವಾಗ ಸ್ವಲ್ಪ ಮಾರ್ಜಿನ್ ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ಯಾರೋ ಒಬ್ಬ ಲೋಕಸಭಾ ಸದಸ್ಯರನ್ನು ಅಪ್ರೀಷಿಯೇಟ್ ಮಾಡಬೇಕಾಗಿ ಬರಬಹುದು ಅಥವಾ ಅವರ ನೆನಪು ಕೋಟ್ ಮಾಡಬೇಕಾಗಿ ಬರಬಹುದು. Appreciating somebody and quoting him is not barred but alleging against a Lok Sabha Member or a colleague or MCA from other state.

MR. SPEAKER:- Allegation, incrimination...

ಶ್ರೀ ಹೆಚ್.ಎನ್. ನಂಜೇಗೌಡ:- ಅಲಿಗೇಷನ್ ಆದರೆ ಮಾಡುವ ಹಾಗಿಲ್ಲ, ಆದರೆ ಅಪ್ರೀಸಿಯೇಷನ್ ಮಾಡಬಹುದು.

ಶ್ರೀ ಡಿ.ಕೆ. ಶಿವಕುಮಾರ್:- ಭಾನುವಾರ ಸಂಜೆ ಎಸ್.ಪಿ.ಯವರನ್ನು ಸಂಪರ್ಕಿಸಿದೆ, ರಸ್ತೆ ತಡೆ ಸಂದರ್ಭದಲ್ಲಿ ಲಾಠಿ ಚಾರ್ಜ್ ಅಥವಾ ಗೋಲಿಬಾರ್ ಮಾಡಬಾರದು ಎಂದು ತಿಳಿಸಿದೆ.

MR. SPEAKER:- What are you trying to say?

ಶ್ರೀ ಡಿ.ಕೆ. ಶಿವಕುಮಾರ್:- ನೀವು ಮಾತನಾಡಬೇಡಿ ಎಂದು ಹೇಳಿದರೆ ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು:- ನೀವು ಮಾತನಾಡಬೇಡಿ ಎಂದು ನಾನು ಹೇಳುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ನಾನು ಮಾತನಾಡಿದರೆ ಅವರಿಗೆ ಬಹಳ ನೋವಾಗುತ್ತದೆ. ಇರುವ ವಿಚಾರ ಹೇಳುವುದಕ್ಕೆ ಹೋದರೆ ಇಲ್ಲಿ ಏನು ಬಂದಿದೆ ಅದನ್ನು ಹೇಳುವುದಕ್ಕೆ ಹೋದರೆ ಅವರಿಗೆ ನೋವಾದರೆ ನಾನು ಏನು ಮಾತನಾಡಲಿ, ಬೇಡ ಬಿಡಿ ನಾನು ಮಾತನಾಡುವುದಿಲ್ಲ. ನನ್ನ ರಾಮನಗರದಲ್ಲಿ ಎಲ್ಲಿ ಮಾತನಾಡಿ ಆಗಿದೆ. ನಮಸ್ಕಾರ.

+ ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ):- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ಮೂರನೇ ತಾರಿಖು ಮತ್ತು ಮುಳಬಾಗಿಲಿನಲ್ಲಿ ಡಿಸೆಂಬರ್ 14ನೇ ತಾರೀಖಿನಂದು ನಡೆದ ಪೋಲಿಸರ ಅತಿರೇಕದ ಬಗ್ಗೆ ನಮ್ಮ ನಾಯಕರು ಹಾಗೂ ಎಲ್ಲಾ ಪಕ್ಷಗಳ ಮುಖಂಡರು ಸಹ ಸರ್ಕಾರದ ಮೇಲೆ ತಮ್ಮ ಅಭಿಪ್ರಾಯವನ್ನು, ಒತ್ತಾಯವನ್ನು ತಂದಿದ್ದಾರೆ. ಹೆಜ್ಜಾಲದ ಬಗ್ಗೆ ಬಹುಶಃ ಅಲ್ಲಿ ನಡೆದಿರತಕ್ಕಂತಹ ಅನಾಹುತ ಎಲ್ಲರ ಅಭಿಪ್ರಾಯದ ಪ್ರಕಾರ ಯಾವುದೇ ತರಹದ ಪೋಲಿಸರಿಗೆ

ಗಾಯವಾಗಿಲ್ಲ, ಸಾರ್ವಜನಿಕರಿಗೆ ಗಾಯವಾಗಲಿಲ್ಲ, ಯಾವುದೇ ತರಹದ ಗೊಂದಲ ಅಥವಾ ಗಲಭೆ ಆಗಲಿಲ್ಲ. ಏನೂ ಇಲ್ಲದೇ ಗೋಲಿಬಾರ್ ಆಗತಕ್ಕಂತಹ ಪರಿಸ್ಥಿತಿ ನಿರ್ಮಾಣವಾಯಿತು. ಎನ್ನತಕ್ಕಂಥದ್ದು ಎಲ್ಲರ ಅಭಿಪ್ರಾಯ ಅಲ್ಲಿ ಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆ. ಅದು ಮೂರುನಾಲ್ಕು ವರ್ಷಗಳಿಂದ ಮಾಡತಕ್ಕಂತಹ ಮುಷ್ಕರ. ಸರ್ಕಾರ ಇದರ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳಬೇಕಾಗಿತ್ತು. ದುರಾದೃಷ್ಟ ಅವರು ಇದರ ಬಗ್ಗೆ ಎಷ್ಟು ಆಸಕ್ತಿ ವಹಿಸಿ ಕ್ರಮ ತೆಗೆದುಕೊಂಡು ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು, ಅವರು ಬಗೆಹರಿಸಲಿಲ್ಲ. ಆಗ ಕಾರ್ಮಿಕರು ಅನಿವಾರ್ಯವಾಗಿ ಚುನಾವಣೆ ಸಂದರ್ಭದಲ್ಲಿ ಸರ್ಕಾರದ ಗಮನೆ ಸಳೆಯಬೇಕು, ಬರತಕ್ಕಂತಹ ಎಲ್ಲಾ ಮುಖಂಡರ ಗಮನ ಸೆಳೆಯಬೇಕು, ತಮಗೆ ಒಂದು ಪರಿಹಾರ ಕಂಡುಕೊಳ್ಳಬೇಕು. ಎಂದು ರಸ್ತಾ ರೋಕೋ ಮಾಡುವುದಕ್ಕೆ ಕಾನೂನು ರೀತಿಯಲ್ಲಿ ಅವರು ಅನುಮತಿಯನ್ನು ಪಡೆದಿದ್ದಾರೆ. ಅದಕ್ಕೆ ಪೋಲಿಸರು ಅನುಮತಿ ಕೊಟ್ಟಿದ್ದಾರೆ. ಆ ರಸ್ತೆ ರೋಕೋ ಮಾಡತಕ್ಕಂತಹ ಸಂದರ್ಭದಲ್ಲಿ ಕೆಲವು ಪ್ರಮುಖರು ಆ ರಸ್ತೆಯಲ್ಲಿ ಬರುತ್ತಾರೆ. ಅವರ ಗಮನಕ್ಕೆ ತರಬೇಕೆಂದು ಅವರು ಒತ್ತಾಯ ತಂದಾಗ ಅವರು ಅದಕ್ಕೆ ಅವಕಾಶ ಕೊಡದೆ ಅವರ ಮೇಲೆ ಒತ್ತಾಯ ಪೂರ್ವಕವಾಗಿ ಗಲಭೆ ಮಾಡುವುದಕ್ಕೆ ಪೋಲಿಸರೇ ಮೂಲ ಕಾರಣ ಎಂದು ಅಲ್ಲಿ ಹೋಗಿ ಭೇಟಿ ಕೊಟ್ಟು ಸ್ಥಳೀಯರ ವಿಚಾರ ತಿಳಿದುಕೊಂಡಾಗ ಅಲ್ಲಿರುವ ಸುತ್ತಮುತ್ತಲ ಜನರನ್ನು ವಿಚಾರ ಮಾಡಿದಾಗ ತಿಳಿದ ವಿಚಾರ. ವಾಸ್ತವವಾಗಿ ಇದಕ್ಕೆ ಅಲ್ಲಿಯ ಸ್ಥಳೀಯ ಪೋಲಿಸರೇ ಮೂಲ ಕಾರಣ ಎಂಬುದು ಎಲ್ಲರಿಗೂ ಇರತಕ್ಕಂತಹ, ಸರ್ಕಾರಕ್ಕೂ ಇರತಕ್ಕಂತಹ ವರದಿ. ಇಷ್ಟೆಲ್ಲಾ ಅನಾಹುತ ಆಗಿ ಬಹುಶಃ ಅವಮಾನೀಯವಾಗಿ ಪ್ರತಿಷ್ಠಿತ ಚುನಾವಣಾ ಕ್ಷೇತ್ರದಲ್ಲಿ ಚುನಾವಣೆ ನಡೆಯತಕ್ಕಂತ ಸಂದರ್ಭದಲ್ಲಿ ಗೋಲಿಬಾರ್ ಮಾಡುವಷ್ಟು ಯಾವುದೇ ಒಂದು ಸಣ್ಣ ಅಹಿತಕರ ಘಟನೆ ನಡೆಯದಿದ್ದರೂ ಸಹ ಗೋಲಿಬಾರ್ ಮಾಡುವಷ್ಟು ಸಾಹಸಕ್ಕೆ ಕೈ ಹಾಕಿದ ಪೋಲಿಸ್ ಅಧಿಕಾರಿಗಳು ಏನಿದ್ದಾರೆ, ಇವರು ಪೋಲಿಸ್ ಇಲಾಖೆಗೆ ಬಹಳ ಅವಮಾನಕರವಾದ ಕೆಲಸ ಮಾಡಿದ್ದಾರೆ. ಬಹುಶಃ ಈ ರಾಜ್ಯದ ಜನತೆಗೆ ಬಹಳ ದ್ರೋಹ ಮಾಡಿದ್ದಾರೆ. ಅವರ ಮೇಲೆ ಈಗಾಗಲೇ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದಾರೆ. ಆದರೆ ಅದರ ಜೊತೆ ಸಂಬಂಧಪಟ್ಟ ನಿರ್ದಿಷ್ಟವಾಗಿ ಗೋಲಿಬಾರ್ ಮಾಡುವುದಕ್ಕೆ ಯಾವುದೇ ಕಾರಣ ಇಲ್ಲದೆ ಯಾವ ಅಧಿಕಾರಿಗಳು ಅತಿರೇಕ ಮಾಡಿದ್ದಾರೆ, ಅವರನ್ನು ಇಷ್ಟರಲ್ಲಿ ಸಸ್ಪೆಂಡ್ ಮಾಡಬೇಕಾಗಿತ್ತು. ಸಸ್ಪೆಂಡ್ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಬಹುಶಃ ಆ ಕ್ರಮ ತೆಗೆದುಕೊಂಡಿಲ್ಲ ಎಂದು ನನ್ನ ಗಮನಕ್ಕೆ ಬಂದಿರತಕ್ಕಂತಹ ವಿಚಾರ. ತತ್‌ಕ್ಷಣ ಸಂಬಂಧಪಟ್ಟ ಎಲ್ಲಾ ಪೋಲಿಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು. ಈ ರಾಜ್ಯದಲ್ಲಿ ಒಂದು ಪ್ರತಿಷ್ಠಿತ ಚುನಾವಣಾ ಕ್ಷೇತ್ರದಲ್ಲಿ ಆ ಚುನಾವಣೆಗೆ ನಮ್ಮ ಕಾರ್ಯಕರ್ತರನ್ನು ಬೆದರಿಸತಕ್ಕಂತಹ ಒಂದು ಹಿನ್ನೆಲೆ ಹಿಂದೆ ಒಂದು ರಾಜಕೀಯ ವ್ಯೂಹ ಇರಬಹುದು ಎಂದು ಅನೇಕ ಜನರ ಅಭಿಪ್ರಾಯ ಆಗಿದೆ. ಆ ರಾಜಕೀಯ ಪ್ರೋತ್ಸಾಹದಿಂದ ಅವರು ಅಧಿಕಾರಿಗಳು ಅಟ್ಟ ಹಾಸಕ್ಕೆ ಕೈ ಹಾಕಿದರು ಎನ್ನತಕ್ಕಂಥದ್ದು ಆ ಸ್ಥಳೀಯರ ಅಭಿಪ್ರಾಯವಾಗಿದೆ. ಅದೇ ಹಿನ್ನೆಲೆಯಲ್ಲಿ ಸನ್ಮಾನ್ಯ ನಮ್ಮ ಶಿವಕುಮಾರ್‌ರವರು ಹೇಳಿದ ಹಾಗೆ ಸುಮಾರು 2,000 ಜನರ ಮೇಲೆ ಎಫ್.ಐ.ಆರ್. ಹಾಕಿದ್ದಾರೆ. 2,000 ಜನ ಯಾರ್‍ಯಾರು ಅಲ್ಲಿ ಆ ಸ್ಥಳದಲ್ಲೇ ಇಲ್ಲದೇ

ಇರತಕ್ಕಂತಹವರು, ಅಲ್ಲಿ ಸ್ಥಳೀಯವಾಗಿ ಯಾರು ಪಕ್ಷಕ್ಕಾಗಿ ಕೆಲಸ ಮಾಡುತ್ತಿದ್ದರು, ಅವರನ್ನು ಹೆಚ್ಚಿಗೆ ಎಫ್.ಐ.ಆರ್.ನಲ್ಲಿ ಸೇರಿಸಿರತಕ್ಕಂತಹ ನಿದರ್ಶನ ನೀವು ಇನ್‌ವೆಸ್ಟಿಗೇಷನ್ ಮಾಡಿದಾಗ ಮುಂದೆ ನ್ಯಾಯಾಂಗ ತನಿಖೆಯಲ್ಲಿ ಬರುತ್ತದೆ. ಅದರ ಹಿನ್ನೆಲೆ ಏನೆಂದರೆ, ರಾಜಕೀಯವಾಗಿ ಸ್ಥಳೀಯವಾಗಿ ಇರತಕ್ಕಂತಹ ಜನರನ್ನು ಭಯಗ್ರಸ್ತರನ್ನಾಗಿ ಮಾಡುವುದು, ಚುನಾವಣೆಯಲ್ಲಿ ಅವರು ಹೆಚ್ಚಿಗೆ ಕೆಲಸ ಮಾಡದೆ ಅವರನ್ನು ಭಯಗ್ರಸ್ತರನ್ನಾಗಿ ಮಾಡಿ ಚುನಾವಣೆ ನಡೆಸಬೇಕೆಂಬ ಒಂದೇ ಗುರಿಯನ್ನು ಇಟ್ಟುಕೊಂಡು ಆದಂತಹ ಈ ಘಟನೆ ಅತಿರೇಖಕ್ಕೆ ಹೋಗಿದೆ. ಈ ಅತಿರೇಖಕ್ಕೆ ಹೋಗಿರತಕ್ಕಂತಹ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಒತ್ತಾಯ ಮಾಡಿದ್ದು ತಮಗೆ ಗೊತ್ತಿದೆ. ಮುಳಬಾಗಿಲಿನಲ್ಲಿ ಕಳೆದ 14ನೇ ತಾರೀಖು ನಡೆದ ಘಟನೆ ಏನು ಇದೆ ಅದು 100ಕ್ಕೆ 100 ರಷ್ಟು ಪೋಲಿಸರ ಒಂದು ಅತಿರೇಕ. ಅದರಲ್ಲಿ ಯಾವುದೇ ಸಂಶಯ ಇಲ್ಲ. ಅಮಾಯಕರು ಎಲ್ಲೋ ತಿರುಪತಿಗೆ ಹೋಗಿ ಬಂದು ಯಾವುದೋ ಮುಸಾಫಿರ್ ಖಾನದಲ್ಲಿ ಮಲಗಿದ್ದರೆ ಅವರನ್ನು ಕರೆದುಕೊಂಡು ಬಂದು ನೀವು ಕಳ್ಳರು ಇರಬಹುದು, ಎಂದು ಹೇಳಿ ಅವರನ್ನು ಪೋಲಿಸ್‌ನವರು ಚೆಕ್ ಮಾಡುತ್ತಾರೆ. ಕಳ್ಳರಾದರೆ, ದರೋಡೆ ಮಾಡತಕ್ಕಂತಹವರಾದರೆ ಕಪ್ಪು ಬಟ್ಟೆ ಮುಖವಾಡ, ಟೋಪಿ ಹಾಕಿಕೊಂಡು ಏನೇನೋ ಆಯಧಗಳನ್ನು ಸಮವಸ್ತ್ರಗಳನ್ನು ಇಟ್ಟುಕೊಂಡಿರುತ್ತಾರೆ. ಯಾವುದೇ ಸಮವಸ್ತ್ರಗಳು ಇಲ್ಲ, ಕಳ್ಳತನ ಮಾಡಬೇಕಾದರೆ ಅವರ ಹತ್ತಿರ ಯಾವುದೇ ಇಂಡಿಕೇಷನ್ಸ್ ಇಲ್ಲ. ಆದರೂ ಒಬ್ಬರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅವರಿಗೆ ಸಿಕ್ಕಾಪಟ್ಟೆ ಹೊಡೆಯುತ್ತಾರೆ. ಹೊಡೆದಾಗ ಅವನು ಲಾಕಪ್‌ನಲ್ಲಿ ಡೆತ್ ಆಗಿರತಕ್ಕಂಥದ್ದು, ನಿಮಗೆಲ್ಲಾ ಗೊತ್ತಿದೆ. ಅದನ್ನು ಬೆಳಿಗ್ಗೆ ಅವನು ತಾನೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಎಂದು ಹೇಳುತ್ತಾರೆ. ನೇಣು ಹಾಕತಕ್ಕಂತಹ ಹಗ್ಗ ಎಲ್ಲಿಂದ ಬಂದಿತು? ಆತ ಪ್ರಾಣ ಕಳೆದುಕೊಂಡ ಎಂದು ಸುಳ್ಳು ಸುದ್ದಿಯನ್ನು ಹಬ್ಬಿಸುತ್ತಾರೆ. ಹಬ್ಬಿಸಿ ಜನ ಇದನ್ನು ಅರ್ಥ ಮಾಡಿಕೊಂಡು ಅಮಾಯಕರಿಗೆ ಈ ತರಹ ಅನ್ಯಾಯವಾಗಿ ಅವರನ್ನು ಪೋಲಿಸ್ ಸ್ಟೇಷನ್‌ನಲ್ಲಿ ಕೊಲೆ ಮಾಡಿದ್ದಾರೆ. ಜನ ಪ್ರತಿಭಟನೆ ಮಾಡಿದರೆ ಆ ಜನರ ಮೇಲೆ ಅವರು ಲಾಟಿ ಛಾರ್ಜ್ ಮಾಡುತ್ತಾರೆ. ಟಿಯರ್ ಗ್ಯಾಸ್ ಹಾಕುತ್ತಾರೆ. ಮತ್ತು ಗೋಲಿಬಾರ್ ಮಾಡತಕ್ಕಂತಹ ಪರಿಸ್ಥಿತಿ ಬರುತ್ತದೆ. ಗೋಲಿಬಾರ್‌ನಲ್ಲಿ ಮೂರು ಜನ ಸಾಯುತ್ತಾರೆ. ಇದು ತಮಗೂ ಗೊತ್ತಿದೆ. ಆದರೆ ಇದನ್ನು ಮುಚ್ಚಿ ಹಾಕುವುದಕ್ಕೆ ಇನ್ನೊಂದು ದೊಡ್ಡ ಅನಾಹುತ ಮಾಡಿದರು. ಎಂತಹ ಅನಾಹುತ ಎಂದರೆ ಬಹುಶಃ ಯಾರೂ ಮಾನವರು ನಿರೀಕ್ಷೆ ಮಾಡದೆ ಇರತಕ್ಕಂತಹ ಒಂದು ಅನಾಹುತ. ಪೂಜಾ ಮಂದಿರ ಇದೆ, ಆ ಪೂಜಾ ಮಂದಿರಕ್ಕೆ ಮಾಂಸದ ತುಂಡುಗಳನ್ನು ತೆಗೆದುಕೊಂಡು ಹೋಗಿ ಹಾಕಿ ಆ ಇಡೀ ಘಟನೆಯನ್ನು ಬೇರೆ ರೀತಿಯಲ್ಲಿ ತಿರುಗಿಸತಕ್ಕಂತಹ ಒಂದು ವ್ಯೂಹವನ್ನು ಪೋಲಿಸರು ಮಾಡಿದ್ದಾರೆ; ಅಥವಾ ಸಂಚು ಮಾಡಿದ್ದಾರೆ ಎಂದರೆ ಬಹುಶಃ ಪೋಲಿಸರ ವ್ಯವಸ್ಥೆ, ಪೋಲಿಸರ ಉದ್ದೇಶ ಯಾವ ಮಟ್ಟಕ್ಕೆ ಹೋಗಿದೆ ಎಂದು ಸಾರ್ವಜನಿಕರ ಹಿತದೃಷ್ಟಿಯಲ್ಲಿ ನಾವು ಯೋಚನೆ ಮಾಡಬೇಕಾಗುತ್ತದೆ. ಆ ಪೋಲಿಸರು ಪೂಜಾ ಮಂದಿರಕ್ಕೆ ಮಾಂಸದ ತುಂಡುಗಳನ್ನು ತೆಗೆದುಕೊಂಡು ಹೋಗಿ ಹಾಕಿ ಅವರೇ ಬೆಳಿಗ್ಗೆ ಯಾರೋ ಹಿಂದುಗಳು ಎಲ್ಲಾ ಮಾಡಿದ್ದಾರೆಂದು ಸುದ್ದಿ ಹಬ್ಬಿಸುವುದು, ಅದೃಷ್ಟವಶಾತ್ ಸಮಯ ಪ್ರಜ್ಞೆಯಿಂದ ಅಲ್ಲಿರತಕ್ಕಂತಹ ಹಿಂದುಗಳು ಮುಸ್ಲೀಮರು ಬಹಳ ಸೌಜನ್ಯದಿಂದ ನಡೆದುಕೊಂಡು ಅವರೆಲ್ಲರೂ

ಒಟ್ಟಿಗೆ ಹೋಗಿ ಪೋಲಿಸರ ಮೇಲೆ ಮತ್ತು ಸರ್ಕಾರದ ಮೇಲೆ ಒತ್ತಾಯ ತರುತ್ತಾರೆ. ಈ ಘಟನೆಗೆ 100ಕ್ಕೆ 100 ಪೋಲಿಸರೇ ಕಾರಣ ಎನ್ನತಕ್ಕಂತಹ ವಿಚಾರ ನಿಮಗೆ ಗೊತ್ತಿದೆ. ಅಲ್ಲಿ ಅವರು ಒತ್ತಾಯ ತರುತ್ತಾರೆ, ಆದರಲ್ಲಿಯೂ ಸಹ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದಾರೆ. ಏಕೆ ನಾನು ಈ ಉದಾಹರಣೆಗೆ ಬರುತ್ತಿದ್ದೇನೆಂದರೆ ನ್ಯಾಯಾಂಗ ತನಿಖೆ ಆಗುತ್ತದೆ, ಅದರ ಪ್ರಕಾರ ಯಾರು ತಪ್ಪಿತಸ್ತರು ಇದ್ದಾರೆ, ಅವರಿಗೆ ಶಿಕ್ಷೆ ಕೊಡತಕ್ಕಂತಹ ಕಾರ್ಯಕ್ರಮ ಆಗುತ್ತದೆ. ಅಮಾಯಕರು ನಾಗರೀಕರು ಯಾರು ಅಲ್ಲಿ ಇದಕ್ಕೆ ಸಂಬಂಧಪಡದೆ ಇರತಕ್ಕಂತಹವರು ಸುಮಾರು 25 ಜನ ಪ್ರತಿ ನಿತ್ಯ ಪೋಲಿಸ್ ಸ್ಟೇಷನ್‌ಗೆ ಬರಬೇಕು. ಅವರು ಅಮಾಯಕರು, ಅಲ್ಲಿ ಆದಂತಹ ಅಹಿತಕರ ಘಟನೆಗೆ ಬಂದು ಸೌಜನ್ಯದಿಂದ ಎರಡು ಗುಂಪಿನವರು ಯಾರು ಇದರಲ್ಲಿ ಭಾಗವಹಿಸಿದರು, ಹಿಂದುಗಳು ಮುಸ್ಲೀಮರು ಅವರೆಲ್ಲರೂ ಸೇರಿ ಪ್ರತಿನಿತ್ಯ ಅಪರಾಧಿಗಳಾಗಿ ಪೋಲಿಸ್ ಸ್ಟೇಷನ್‌ಗೆ ಬಂದು ಸಹಿ ಮಾಡಿ ಹೋಗಬೇಕು. ಅಂತಹ ಕಡ್ಡಾಯವಾದ ಕ್ರಿಮಿನಲ್ ಸೆಕ್ಷನ್ ಅವರ ಮೇಲೆ ಹಾಕಿ ಇವತ್ತು ಪ್ರತಿ ದಿನ 25 ಜನ ನಿರಪರಾಧಿಗಳು ಅಪರಾಧಿಗಳಾಗಿ ಪೋಲಿಸ್ ಸ್ಟೇಷನ್‌ಗೆ ಬರತಕ್ಕಂತಹ ಪರಿಸ್ಥಿತಿ ಬಂದಿದೆ. ಯಾವುದೇ ವೈಯುಕ್ತಿಕ ಸಮಸ್ಯೆಗೆ ಸಂಬಂಧಪಟ್ಟ ವಿಚಾರವಲ್ಲ. ಅಥವಾ ಅವರದೇ ಆದ ಖಾಸಗಿಯಾದ ಯಾವುದೇ ಗಲಭೆಯಲ್ಲಿ ಭಾಗವಹಿಸಿರತಕ್ಕಂತಹ ವಿಚಾರವಲ್ಲ. ಸಾರ್ವಜನಿಕವಾಗಿ ಪೋಲಿಸರು ಮಾಡಿರತಕ್ಕಂತಹ ವಿಚಾರಕ್ಕೆ ಮಧ್ಯ ಪ್ರವೇಶ ಮಾಡಿ ಸೌಜನ್ಯದ ವಾತಾವರಣ ಉಂಟುಮಾಡತಕ್ಕಂತಹ ಕೆಲಸಕ್ಕೆ ಅವರು ಪ್ರೋತ್ಸಾಹ ಮಾಡಿದರು. ಪ್ರತಿ ನಿತ್ಯ 25 ಜನ ಪೋಲಿಸ್ ಸ್ಟೇಷನ್‌ಗೆ ಹೋಗಿ ಸಹಿ ಮಾಡತಕ್ಕಂತಹ ದುಸ್ಥಿತಿ ಇವತ್ತು ನಮ್ಮಲ್ಲಿ ಬಂದಿದೆ. ಸನ್ಮಾನ್ಯ ಸಭಾಧ್ಯಕ್ಷರೆ, ಬಂಗಾರಪೇಟೆ ಲಾಕಪ್ ಡೆತ್ ವಿಷಯ ನಿಮಗೆ ಗೊತ್ತಿದೆ. ಇದು ಯಾವುದೋ ಸಣ್ಣ ಟೊಮಾಟೋ ಹಣ್ಣಿನ ಕಳ್ಳತನ ಎಂದು ಹೇಳಿ, ಲಕ್ಷಾಂತರ ದರೋಡೆ ಮಾಡತಕ್ಕಂತಹ ಕಳ್ಳರನ್ನು ಹಿಡಿಯುವುದಕ್ಕೆ ಆಗುತ್ತಿಲ್ಲ ನಮ್ಮ ದುರಾದೃಷ್ಟ. ಆದರೆ ಯಾರೋ ಒಬ್ಬ ಟೊಮಾಟೋ ಕಳ್ಳನ ಮೇಲೆ ಇವರು ಬಲಪ್ರಯೋಗ ಮಾಡಿದಾಗ ಅವನು ಲಾಕಪ್‌ನಲ್ಲಿ ಸಾಯುತ್ತಾನೆ. ಇವತ್ತು ಅಂತಹ ಅಧಿಕಾರಿಗಳಿಗೆ ಏನು ಶಿಕ್ಷೆ ಕೊಟ್ಟಿದ್ದೀರಿ? ಎಂದು ಇವತ್ತು ಈ ಸದನದಲ್ಲಿ ಕೇಳಬೇಕಾಗುತ್ತದೆ. ಅವರಿಗೆ ರಿವಾರ್ಡ್ ಮಾಡಿದ್ದಾರೆ, ರಿ ಇನ್‌ಸ್ಟೇಟ್ ಮಾಡಿದ್ದೀರಿ. ಅವರಿಗೆ ಒಳ್ಳೆಯ ಜಾಗ ಎಲ್ಲಿ ಬೇಕೋ ಅಲ್ಲಿ ಕೊಟ್ಟಿದ್ದೀರಿ. ಈ ತರಹ ಆದರೆ ಪೋಲಿಸ್‌ನವರ ಬಗ್ಗೆ ಸಾರ್ವಜನಿಕರಲ್ಲಿ ಇರಕತಕ್ಕಂತಹ ಗೌರವ ಘನತೆ ಏನು ಇದೆ ಅದು ಸಂಪೂರ್ಣವಾಗಿ ನಾಶವಾಗಿ ಜನರಿಗೆ ಅದು ನಿರಾಶೆಯಾಗುತ್ತದೆ ಎಂದು ಹೇಳಿ...

ಶ್ರೀ ಜಿ.ಬಿ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ನನ್ನ ಒಂದು ಕೋರಿಕೆ, ಇವತ್ತು ಬಂದಿರತಕ್ಕಂತಹ ನಿಲುವಳಿ ಸೂಚನೆ ಬಗ್ಗೆ ಎಲ್ಲಾ ಅದೇ ರಾಗ ಅದೇ ಹಾಡು. ದಯವಿಟ್ಟು ಮುಕ್ತಾಯ ಮಾಡಿ ತಾವು ಏನಾದರೂ ತೀರ್ಪು ಕೊಡಬೇಕೆಂಬುದು ನನ್ನ ಕೋರಿಕೆ.

ಶ್ರೀ ವಿ. ಮುನಿಯಪ್ಪ:- ನಮಗೆ ಅವರು ಅವಕಾಶ ಕೊಟ್ಟಿದ್ದಾರೆ. ನಮ್ಮ ಅಭಿಪ್ರಾಯ ವ್ಯಕ್ತ ಮಾಡತಕ್ಕಂತಹ ವಿಷಯದಲ್ಲಿ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಾರೆ. ನಮಗೆ ಅವರು ಅವಕಾಶ ಕೊಟ್ಟಿದ್ದಾರೆ. ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೇವೆ.

ಶ್ರೀ ಜಿ.ಬಿ. ಶಿವಕುಮಾರ್:- ನಮ್ಮ ಅಭಿಪ್ರಾಯ ವ್ಯಕ್ತ ಮಾಡಬೇಕು ಎನ್ನತಕ್ಕಂಥದ್ದಕ್ಕೆ ಪವಿತ್ರವಾದ ಈ ಸದನದಲ್ಲಿ ಕಾಲದ ಪರಿಮಿತಿ ಇಲ್ಲವೇ? ಒಂದು ಸೆಕೆಂಡ್ ಈ ಸದನ ನಡೆಬೇಕಾದರೆ ಸರ್ಕಾರಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ಎಂಬುದರ ಬಗ್ಗೆ ತಾವು ಅಂಕಿಅಂಶ ನೋಡಿದ್ದೀರಿ...

(ಗೊಂದಲ)

ಶ್ರೀ ವಿ. ಮುನಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ನಾವು ಈಗ ಹೆಜ್ಜಾಲ ವಿಚಾರದ ಬಗ್ಗೆ ತೆಗೆದುಕೊಂಡಿದ್ದೇವೆ. ಅದೇ ರೀತಿ ಈ ರಾಜ್ಯದಲ್ಲಿ ನಡೆಯತಕ್ಕಂಥ ಪೋಲಿಸ್ ದೌರ್ಜನ್ಯದ ಬಗ್ಗೆ ಕೂಡ ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಇಂತಹ ಘಟನೆಗಳು ಆಗಿವೆ ಅವುಗಳನ್ನು ಸರ್ಕಾರದ ಗಮನಕ್ಕೆ ತರಬೇಕು. ಅದರ ಮೇಲೆ ಸೂಕ್ತವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಇವೊತ್ತು ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಅದರ ಗಂಭೀರತೆಯನ್ನು ಅರಿತು ತಾವು ನಮಗೆ ಇದನ್ನು ಬೇರೆ ನಿಯಮದ ರೂಪದಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ. ಬಹಳ ಸಂತೋಷ. ಎಲ್ಲೆಲ್ಲಿ ಅನ್ಯಾಯಗಳು ಆಗಿವೆ. ಎಲ್ಲೆಲ್ಲಿ ದೌರ್ಜನ್ಯಗಳು ಆಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ನಮಗೆ ಇರತಕ್ಕಂಥ ಅವಕಾಶಗಳಲ್ಲಿ ಇದೂ ಒಂದು ಅವಕಾಶ. ತಮಗೆ ಗೊತ್ತಿದೆ ಮಾನ್ಯ ಅಧ್ಯಕ್ಷರೆ, ಕಳೆದ ಲೋಕಸಭೆ ಚುನಾವಣೆಯಲ್ಲಿ ನನ್ನ ಮತಕ್ಷೇತ್ರದಲ್ಲಿ ಒಂದು ಮತಗಟ್ಟೆಯಲ್ಲಿ ಚುನಾವಣೆ ದಿವಸ ಒಂದು ಗಲಾಟೆಯಾಗಿತ್ತು. ಎರಡೂ ಕಡೆಯ ಗುಂಪಿನವರು ಗಲಾಟೆ ಮಾಡಿಕೊಂಡಿದ್ದರು. ಎರಡೂ ಗುಂಪಿನವರು ಪೋಲಿಸ್ ಠಾಣೆಯಲ್ಲಿ ಕಂಪ್ಲೇಂಟ್ ಕೊಡುತ್ತಾರೆ. ಎರಡು ಕೇಸ್ ರಿಜಿಸ್ಟರ್ ಆಗುತ್ತದೆ. ಎರಡೂ ಕೇಸ್‌ನಲ್ಲಿ ಒಂದೇ ತರಹದ ಸೆಕ್ಷನ್‌ಗಳನ್ನು ಹಾಕಿದ್ದಾರೆ. ಆ ಕೇಸ್‌ಗಳನ್ನು ಹಾಕಿದ ಎರಡು ತಿಂಗಳ ನಂತರ ಒಂದು ದಿನ ರಾತ್ರಿ ಹನ್ನೆರಡು ಗಂಟೆಗೆ ಒಂದು ಪೋಲಿಸ್ ಜೀಪು ಹಾಗೂ ಒಂದು ರಿಸರ್ವ್ ವ್ಯಾನ್‌ನಲ್ಲಿ ಪೋಲಿಸರು ಅಮಾಯಕ ರೈತರ ಮನೆಗಳಿಗೆ ನುಗ್ಗಿ ಮಲಗಿರುವವರ ಮನೆಯ ಬಾಗಿಲುಗಳನ್ನು ಒಡೆದು, ತೆಗೆದು ಸುಮಾರು ಹದಿನೇಳು ಜನ ರೈತರನ್ನು ಕರೆದುಕೊಂಡು ಹೋಗಿದ್ದಾರೆ. ಹಾಗೂ ಪೋಲಿಸ್ ಠಾಣೆಯಲ್ಲಿ ಲಾಠಿಗಳು ಮುರಿದು ಹೋಗುವವರೆಗೆ ಅವರನ್ನು ಹೊಡೆದಿದ್ದಾರೆ. ಅಲ್ಲಿ ರಕ್ತ ಸುರಿದುಹೋಯಿತು. ನಾವು ಕೋರ್ಟ್ ಹತ್ತಿರ ಕಾದುಕೊಂಡಿದ್ದರೆ ಬೆಳಿಗ್ಗೆ ನಾಲ್ಕು ಗಂಟೆಯವರೆಗೆ ಅಲ್ಲಿಗೆ ಬರಲಿಲ್ಲ. ನಾಲ್ಕು ಗಂಟೆಗೆ ಬಂದಂಥ ಸಂದರ್ಭದಲ್ಲಿ....

SRI H. SHIVAPPA:- I am on a point of order. This is not of recent occurrence.. ಚುನಾವಣೆ ಮುಗಿದು ಎರಡು ಮೂರು ವರ್ಷಗಳಾಯಿತು. ಈ ಮಧ್ಯೆ ಎರಡು ಮೂರು ಅಧಿವೇಶನಗಳು ಆಗಿವೆ. The matter is not of recent occurence. It is a sheer waste of time. ಯಾವುದೋ ಒಂದು ಹಳೆಯದು ತಂದು, how could it be narrated now.

ಶ್ರೀ ವಿ. ಮುನಿಯಪ್ಪ:- ಕಾನೂನು ಮತ್ತು ಸುವ್ಯವಸ್ಥೆ ಎಲ್ಲೆಲ್ಲಿ ಹದಗೆಟ್ಟಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇದೊಂದು ಅವಕಾಶ. ಆ ಹಿನ್ನಲೆಯಲ್ಲಿ ನಾನು ಇದನ್ನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಶಿವಪ್ಪ:- ಆ ಚುನಾವಣೆಯಾಗಿ ಎರಡು ವರ್ಷವಾಯಿತು.

ಶ್ರೀ ಸಿ.ಆರ್. ಸಗೀರ್ ಅಹಮದ್:- ಅವರು ಜಿಲ್ಲಾ ಪರಿಷತ್‌ನಲ್ಲಿ ಏನಾದರೂ ಅವಕಾಶ ಆಗಲಿ ಎಂದು ಈ ರೀತಿ ಮಾಡುತ್ತಿದ್ದಾರೆ.

ಶ್ರಿ ವಿ. ಮುನಿಯಪ್ಪ:- ಇರಲಿ ಪಾಪ ಮಾಡಲಿ ಶಿವಪ್ಪನವರು.

ಅಧ್ಯಕ್ಷರು:- ಮೇಲೆ ಮಾಡಿಕೊಂಡ ಹಾಗೆ ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಂಡು ನೀವೇ ಆಗಿ ನಮಗೇನಂತೆ.

(ಗೊಂದಲ)

ಶ್ರೀ ಎಸ್.ಆರ್. ಲಕ್ಷ್ಮಯ್ಯ:- ಸಗೀರ್‌ರವರು ಮಂತ್ರಿಗಳಾಗಿದ್ದಾಗ ನನ್ನ ಮೇಲೆ 18 ಕೇಸ್ ಹಾಕಿಸಿದ್ದಾರೆ.

ಅಧ್ಯಕ್ಷರು:- ಹಾಕಿಸಿರುತ್ತಾರೆ. ಹಾಕಿಸಿರುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಲಕ್ಷ್ಮಯ್ಯನವರು ಅಪಾದನೆ ಮಾಡಿದ ಮೇಲೆ ನಾನು ಹೇಳಲೇಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಒಂದು ವೇಳೆ ನಮ್ಮ ಸರ್ಕಾರ ಇದ್ದಂತ ಕಾಲದಲ್ಲಿ ಅವರ ಮೇಲಾಗಲಿ, ಅವರ ಪ್ರಕರಣದಲ್ಲಾಗಲಿ, ಅವರಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವಂಥ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡಿದ್ದೇವೆ ಎಂದು ಅವರು ಸಾಬೀತು ಪಡಿಸುವುದಾದರೆ ಸಾಬೀತು ಪಡಿಸಲು, ಸಂತೋಷ. ನನಗೇನೂ ಇಲ್ಲ. ಆದರೆ ಅವರು ಹೇಳುವಂಥ ಮಾತಿಗೆ ಅವರಿಗೆ ನಾಚಿಕೆ ಏಕೆ ಬರಲಿಲ್ಲ ನನಗೆ ಗೊತ್ತಿಲ್ಲ. ಇವರ ಸರ್ಕಾರ ಬಂದು ಎರಡು ವರ್ಷಗಳ ಕಾಲ ಆಯಿತು. ಇವೊತ್ತು ಇವರು ಅಪ್ಪ ಮಕ್ಕಳು ಇಬ್ಬರೂ ನ್ಯಾಯಾಲಯಕ್ಕೆ ತಿರುಗುತ್ತಿದ್ದಾರೆ. ಕೇಸ್ ಏಕೆ ವಾಪಸ್ಸು ಪಡೆಯಲಿಲ್ಲ ಎಂದು ನನಗೆ ಅದೇ ಆಶ್ಚರ್ಯ.

(ಗೊಂದಲ)

ಶ್ರೀ ಎಸ್.ಆರ್. ಲಕ್ಷ್ಮಯ್ಯ:- .....

ಶ್ರೀ ವಾಟಾಳ್ ನಾಗರಾಜ್:- ದಯವಿಟ್ಟು ಒಂದು ಕ್ರೀಯಾಲೋಪ. ಯಾರಾದರೂ ಮಾತನಾಡಬೇಕಾದರೆ ಬಹಳ ಸೌಜನ್ಯದಿಂದ ಮಾತನಾಡಬೇಕು. ಇದು ಸೌಜನ್ಯವೇ? ಈ ಸಭೆಗೆ ಒಂದು ಗಂಭೀರತೆ ಇಲ್ಲವೇನು? ಇಲ್ಲಿ ಈ ರಿತಿ ಮಾತನಾಡುವುದು ಸರಿಯಲ್ಲ. ಇದರಿಂದ ಈ ಸಭೆಯ ಘನತೆ ಹೋಗುತ್ತಿದೆ.

ಶ್ರೀ ಹೆಚ್. ಶಿವಪ್ಪ:- ಇವರೂ ಕೂಡ ಈ ಸದನದಲ್ಲಿ ಎನ್ನುವಂಥ ಪದವನ್ನು ಬಳಸಬಾರದು. It should be expunged. ಇದನ್ನು ಕಡತದಿಂದ ತೆಗೆಯಬೇಕು.

ಶ್ರೀ ಹೆಚ್. ಶಿವಪ್ಪ:- ಅವರಿಗೂ ಸೌಜನ್ಯ ಇರಬೇಕು. ದಯವಿಟ್ಟು ಮಾನ್ಯ ಅಧ್ಯಕ್ಷರೇ, ಆ ಶಬ್ದವನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು:- ನಾನು ಕಡತವನ್ನು ತರಿಸಿ ನೋಡುತ್ತೇನೆ. ಏನೇನು ಬೆಕು ಅದನ್ನು ಇಟ್ಟು ಬೇರೆ ತೆಗೆಸುತ್ತೇನೆ. ಒಂದು ಸತ್ಯ ಹೊರಗೆ ಬರುತ್ತಿದೆ ಎಂದರೆ ಏನು. turn by turn ಅವರು ಇದ್ದಾಗ

ಇವರು, ಇವರು ಬಂದ ಮೇಲೆ ಅವರು ಕೇಸ್‌ಗಳನ್ನು ಹಾಕುತ್ತಿದ್ದಾರೆ ಎನ್ನುವಂಥ ಸತ್ಯ ಹೊರಗೆ ಬರುತ್ತಿದೆ. Prima facie there is truth Alright.

ಶ್ರೀ ವಿ. ಮುನಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಅವರು ಅಂದು ಕೋರ್ಟಿಗೆ ಹದಿನೇಳು ಜನರನ್ನು ಕರತಂದು, ಅದರಲ್ಲಿ ಒಂಭತ್ತು ಜನರನ್ನು ವಾಪಸ್ಸು ಕಳುಹಿಸಿದ್ದಾರೆ. ಬರೀ ಎಂಟು ಜನರನ್ನು ಮಾತ್ರ...

ಅಧ್ಯಕ್ಷರು:- ಏನೋ ನಮ್ಮ ಕೋಲಾರ ಜಿಲ್ಲೆಯಲ್ಲಂತೂ ಹಾಳಾಗಿ ಹೋಗಿ ಬಿಟ್ಟಿದೆ. ಒಂದೈದಾರು ವರ್ಷದಿಂದ ಪೋಲೀಸ್‌ನವರು ಯಾವ ಪಾರ್ಟಿ ಅಧಿಕಾರದಲ್ಲಿರುತ್ತಾರೆ ಅವರ ಕಡೆ ಸೇರಿಕೊಂಡು ಬಿಡುತ್ತಾರೆ.

ಶ್ರೀ ವಿ. ಮುನಿಯಪ್ಪ:- ಅವರನ್ನು ಚೆನ್ನಾಗಿ ಹೊಡೆದು ಲಾಠಿ ಮುರಿದಿದ್ದೇ ಅಲ್ಲದೆ, ಅವರಿಗೆ ಕೋರ್ಟ್ ಹತ್ತಿರ ತಂದು, ನಿಮ್ಮನ್ನು ಕೇಸ್‌ದಿಂದ ಬಿಟ್ಟುಬಿಡುತ್ತೇವೆ, ನೀವು ಯಾರಿಗಾದರೂ ದೂರು ಕೊಟ್ಟರೆ ನಾಳೆ ಪುನಃ ನಿಮ್ಮನ್ನು ಕೇಸ್‌ನಲ್ಲಿ ಸೇರಿಸುತ್ತೇವೆ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ.

ಶ್ರೀ ಹೆಚ್. ಶಿವಪ್ಪ:- ಇದು ಇತ್ತೀಚಿನ ಘಟನೆ ಇಲ್ಲ. It is an individual case. It is a clear the rules of the business.

(ಗೊಂದಲ)

ಶ್ರೀ ಯು.ಆರ್. ಸಭಾಪತಿ:- ನಿಮಗೆ ಅವಕಾಶ ಸಿಕ್ಕಿದಾಗ ನೀವು ಮಾತನಾಡಿ. ಸುಮ್ಮನೆ ಏಕೆ ಮಧ್ಯದಲ್ಲಿ ಎದ್ದು ಮಾತನಾಡುತ್ತೀರಿ?

ಡಿ.ಕೆ. ಶಿವಕುಮಾರ್:- ಯಾರಾದರೂ ಮಾತನಾಡುತ್ತಿದ್ದರೆ ಮಧ್ಯದಲ್ಲಿ ಎದ್ದು ನಿಂತು ಮಾತನಾಡಬಾರದು. ನೀವೂ ಕೂಡ ಅದರ ಬಗ್ಗೆ ಚರ್ಚೆ ಮಾಡಿ ನಿಮಗೆ ಬೇಡ ಎಂದು ಹೇಳುವರು ಯಾರು, ಆದರೆ ಮಧ್ಯದಲ್ಲಿ ಎದ್ದುನಿಂತು ಮಾತನಾಡುವುದು ಸರಿಯಲ್ಲ.

SRI H. SHIVAPPA:- He has got every right to talk hours together but within the framework of rules and regulations', not flouting the rules and regulations,' he can speak two hours if permitted by the Speaker. Rule 69 says...

ಅಧ್ಯಕ್ಷರು:- ಶಿವಪ್ಪನವರೇ, ಅವರು ನನಗೆ ಬಹಳ ಹತ್ತಿರದಲ್ಲಿದ್ದಾರೆ. ನನಗೂ ಕೇಳಿಸುತ್ತದೆ. If there is something objectionable, ನಾನು ಸಲಹೆ ಮಾಡುತ್ತೇನೆ. ನನಗೆ ರೂಲ್ಸ್ ಪರಿಚಯ ಇದೆಯಲ್ಲಾ. ನೀವೇಕೆ ಪದೇ ಪದೇ ಹೇಳತಕ್ಕಂಥ ಶ್ರಮ ತೆಗೆದುಕೊಳ್ಳುತ್ತೀರಿ? ನಿಮ್ಮಷ್ಟಕ್ಕೆ ನೀವು ರೂಲ್ಸ್ ಹೇಳಿದರೆ ಅದೂ ಕುಡ ಒಂದು ತರಹದ ವಯಲೇಷನ್ ಆಗುತ್ತದೆ. You will have to take my permission and do it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬಂದಾಗಲೇ ಪದೇ ಪದೇ ಹೇಳುತ್ತಾರೆ.

ಅಧ್ಯಕ್ಷರು:- ಇದು ದೇವರಾಜ್ ಅರಸ್‌ರವರ ಕಾಲದಿಂದಲೂ ಇದ್ದದ್ದೇ ಅಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದರೆ ಇದು ಜಾಸ್ತಿ ಈಗ.

ಶ್ರೀ ಎಂ. ನಾರಾಯಣಸ್ವಾಮಿ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುನಿಯಪ್ಪನವರು ಈಗ ಸರ್ಕಾರದ ಬಗ್ಗೆ, ಪೋಲೀಸ್‌ನವರ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಅವರೂ ಕೂಡ ಮಂತ್ರಿಗಳಾಗಿದ್ದರು. ನಾನೂ ಅಲ್ಲಿ ಸದಸ್ಯನಾಗಿದ್ದೆ. ಇಷ್ಟು ನೀತಿ ನಿಯಮಗಳನ್ನು ಹೇಳತಕ್ಕಂಥವರು ನನ್ನನ್ನು ಪ್ರಿಸೈಡ್ ಮಾಡುವುದಕ್ಕೆ ಬಿಡಲಿಲ್ಲ. ಆಗ ನನ್ನ ಭಾಗಕ್ಕೆ ವಾಟಾಳ್ ನಾಗರಾಜ್‌ರವರು ಬೆಂಬಲ ನೀಡಿದರು. ಅವರ ನೈತಿಕ ಮೌಲ್ಯ ಆವೊತ್ತು ಎಲ್ಲಿ ಹೋಗಿತ್ತು? ಅವರ ಸರ್ಕಾರ ಬಂದಾಗ ಕೋಲಾರ್ ಜಿಲ್ಲೆಯಲ್ಲಿ ಎಷ್ಟೆಷ್ಟು ಕೇಸಸ್ ಹಾಕಿದರು. ಎಂದು ಅವರ ಬೆನ್ನು ಹಿಂದಕ್ಕೆ ತಿರುಗಿ ನೋಡಬೇಕು. ಅದನ್ನು ಬಿಟ್ಟು ಅವರ ಸರ್ಕಾರ ಇದೆ ನೀವು ರಾಜೀನಾಮೆ ಕೊಡಬೇಕು ಎಂದರೆ, ಗ್ರಾಮಪಂಚಾಯತ್ ಚುನಾವಣೆಯಲ್ಲಿ ಏಳು ಜನರ ಮೇಲೆ ಗೋಲಿಬಾರ್ ಮಾಡಿದರು ಅವರು ಯಾರೂ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಲಿಲ್ಲ. ಸರ್ಕಸ್ ದುರಂತದಲ್ಲಿ ಯಾರೂ ನೈತಿಕ ಹೊಣೆ ಹೊರಲಿಲ್ಲ. ಕಳ್ಳಬಟ್ಟಿ ದುರಂತ ನಡೆಯಿತು, ಒಂದು ಸಾವಿರ ಜನ ಸತ್ತರು. ಆವೊತ್ತು ಕೂಡ ರಾಜೀನಾಮೆ ಕೊಡಲಿಲ್ಲ. ಸರ್ಕಸ್ ದುರಂತದಲ್ಲಿ 350 ಜನ ಸತ್ತರು. ಆವಾಗಲೂ ಕೂಡ ರಾಜೀನಾಮೆ ಕೊಡಲಿಲ್ಲ. ರೈತರ ಮೇಲೆ ಗೋಲಿಬಾರ್ ಮಾಡಿದರು ಆವಾಗಲೂ ಯಾರೂ ರಾಜೀನಾಮೆ ಕೊಡಲಿಲ್ಲ. ಆದಕಾರಣ ಅವರೂ ಕೂಡ ಹಿಂದೆ ತಿರುಗಿ ನೋಡಬೇಕಾಗುತ್ತದೆ.

ಅಧ್ಯಕ್ಷರು:- ಆರು ತಿಂಗಳಾಗಿದೆ ಅಧಿವೇಶನ ಸೇರಿ, ಮಾತನಾಡಲಿ ಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ನಾನು ಮಾತನಾಡುವಾಗ ಆಗಲೀ ನನ್ನ ತೀರ್ಪು ಹೇಳಿದ್ದೇನಲ್ಲಾ ನಾರಾಯಣ ಸ್ವಾಮಿಯವರೇ.

ಅಧ್ಯಕ್ಷರು:- ಸಗೀರ್‌ಗೆ ಹಬ್ಬ ಆದಮೇಲೆ ಬಹಳ ಜೋಶ್‌ನಲ್ಲಿದ್ದಾರೆ. ಏನು ತಿಂದರೋ ಏನು ಗೊತ್ತಿಲ್ಲ.

ಶ್ರೀ ವಿ. ಮುನಿಯಪ್ಪ:- ಆ ಪೋಲೀಸ್ ಅಧಿಕಾರಿ ಮಾಡಿದಂಥ ಒಂದು ಅತಿರೇಕದ ಬಗ್ಗೆ ಸಂಬಂಧಪಟ್ಟಂಥ ಡಿ.ಐ.ಜಿ. ಸಂಬಂಧಪಟ್ಟಂಥ ಡಿ.ಜಿ.ಯವರಿಗೆ ಗಾಯಾಳುಗಳ ಸಮೇತ ಕರೆದುಕೊಂಡು ಬಂದು ಅವರನ್ನು ತೋರಿಸಿದಾಗ ಅವರು ಅವರ ಮೇಲೆ...

ಶ್ರೀ ಜೆ.ಹೆಚ್.ಪಟೇಲ್:- ಅವರು ಯಾವುದಾದರೂ ವಿಷಯ ಹೇಳಬಹುದು. ಅದಕ್ಕೆ ನನ್ನ ತಕರಾರು ಇಲ್ಲ. ಗೋಲಿಬಾರ್‌ದ್ದು ಇರಬಹುದು, ಹಿಂದೆ ಆಗಿರತಕ್ಕಂಥ ಘಟನೆಗಳದ್ದು ಹೇಳಬಹುದು. because it is wide open. ಆದರೆ ಈಗ ವಿಷಯ ಇರುವುದು ಚರ್ಚೆ ಮುಕ್ತಾಯಗೊಳಿಸುವುದು. ನಾನೇನಾದರೂ ಉತ್ತರ ಕೊಡಬೇಕೇ ಅಥವಾ ಕೊಡದೇನೇ ಇರಬಹುದು, ಕೊಡಲೇಬೇಕೆಂದೇನಿಲ್ಲ. ಎಲ್ಲಾ ರಾಮಾಯಣ ಮಹಾಭಾರತದಲ್ಲಿನದು ಹೇಳುತ್ತಾ ಹೋದರೆ ಅದಕ್ಕೆ ಉತ್ತರವನ್ನು ನಿರೀಕ್ಷೆ ಮಾಡಿದರೆ ಬಹಳ ಕಷ್ಟ. ಈಗಾಗಲೇ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಬೇರೆ ಪಕ್ಷಗಳ ನಾಯಕರೂ ಹೇಳಿದ್ದಾರೆ. ವಾಟಾಳರೂ ಹೇಳಿದ್ದಾರೆ.

ಕೆಲವು ವಿಷಯಗಳ ಬಗ್ಗೆ ನಾನು ಉತ್ತರ ಕೊಡಬಲ್ಲೆ. ಸೀಮಿತವಾಗಿ ಹೇಳದಿದ್ದರೆ ಸ್ವಲ್ಪ ಕಷ್ಟ. ನೀವು ಮಾತನಾಡುವುದರ ಬಗ್ಗೆ ನನ್ನ ಅಡ್ಡಿ ಇಲ್ಲ. ಮಾತನಾಡಿ.

ಅಧ್ಯಕ್ಷರು:- ಮುನಿಯಪ್ಪನವರೇ, ಹೆಜ್ಜಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಿಗ್ಗೆ ನೋಟಿಸ್ ಕೊಟ್ಟಿದ್ದಾರೆ ನಿಲುವಳಿ ಸೂಚನೆ ಪ್ರಕಾರ ತೆಗೆದುಕೊಳ್ಳಬೇಕೆಂದು. ನಿಲುವಳಿ ಸೂಚನೆ ಕೆಳಗಡೆ ಬೇಡ ನಿಯಮ 69ರ ಕೆಳಗಡೆ ತೆಗೆದುಕೊಳ್ಳೋಣ ಎಂದು ಹೇಳಿದೆ. ಅಲ್ಲೊಂದು ಇಲ್ಲೊಂದು ಘಟನೆ ಪ್ರಸ್ತಾಪ ಮಾಡಿದ್ದೀರಿ, ಮುಳಬಾಗಲ್ ಕೇಸ್ ಆದ ಮೇಲೆ ಅಧಿವೇಶನ ಸಮಾವೇಶಗೊಂಡಿರಲಿಲ್ಲ ಆದಕಾರಣ ಮಾನವೀಯತೆಯ ದೃಷ್ಟಿಯಿಂದ ಪರವಾಗಿ ಇಲ್ಲ. ಆದರೆ ಹಳೆಯದನ್ನೆಲ್ಲಾ ತೆಗೆದುಕೊಳ್ಳುವುದು ಬೇಡ. ಆಗುತ್ತದೆ, ಅವರೂ ಮಾಡುತ್ತಾರೆ, ನೀವೂ ಮಾಡುತ್ತೀರಿ, ನಾವು ಅದನ್ನೇ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಅದು ಬಿಟ್ಟು ಬೇರೆ ಏನಾದರೂ...

ಶ್ರೀ ಡಿ.ಕೆ. ಶಿವಕುಮಾರ್:- ನೀವು ಮಾಡಿದ್ದೀರಲ್ಲಾ ಎಂದು ನಮಗೆ ಕಮಿಟ್ ಮಾಡಿಸುತ್ತಿದ್ದೀರಲ್ಲಾ ಮಾನ್ಯ ಅಧ್ಯಕ್ಷರೇ...

ಶ್ರೀ ವಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಹೆಜ್ಜಾಲ ಘಟನೆ ನಡೆದ ಮೇಲೆ ಇದರ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದ ಮೇಲೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್ ಮಾಡುತ್ತಾರೆ. ಆದರೆ ಇದೇ ಅಧಿಕಾರಿಯನ್ನು 15 ದಿವಸಗಳ ನಂತರ ಮತ್ತೆ ಅಲ್ಲೇ ರೀ ಇನ್‌ಸ್ಟೇಟ್ ಮಾಡುತ್ತಾರೆ. ಯಾರು ತಪ್ಪಿತಸ್ಥರು ಎಂದು ನಾವು ಡಿ.ಸಿ.ಯವರಿಗೆ ಕನ್‌ವಿನ್ಸ್ ಮಾಡಿದಮೇಲೆ ಡಿ.ಸಿ.ಯವರು ಬಂದು ಅಲ್ಲಿ ಅಪರಾಧಿಗಳನ್ನು ನೋಡಿದ ಮೇಲೆ ಖಂಡಿತವಾಗಿಯೂ ಇಲ್ಲಿ ಅತಿರೇಕವಾಗಿದೆಯಾದ ಕಾರಣ ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು ಮತ್ತು ಈ ಬಗ್ಗೆ ವಿಚಾರಣೆಯಾಗಬೇಕು ಎಂದು ಹೇಳಿ ಏನು ಆರ್ಡರ್ ಮಾಡಿದ್ದರು, ಆದರೆ ಅದೇ ಅಧಿಕಾರಿಯನ್ನು 15 ದಿವಸದಲ್ಲಿ ಪುನಃ ಅದೇ ಸ್ಥಳಕ್ಕೆ ಹಾಕಿದ್ದಾರೆ. ಯಾವಾಗ ಈ ರಾಜಕೀಯ ಒತ್ತಡಗಳು ಬಂದು ಈ ಪೊಲೀಸ್‌ರಿಂದಲೇ ನಮ್ಮ ಪಕ್ಷಕ್ಕೆ ಬೆಂಬಲ ಸಿಗುತ್ತದೆ. ಪೋಲೀಸ್‌ರಿಂದಲೇ ಎಲ್ಲವೂ ಸರಿಹೋಗುತ್ತದೆ ಎಂದು ತಿಳಿದುಕೊಂಡು...

ಅಧ್ಯಕ್ಷರು:- ಅದನ್ನೇ ನಾರಾಯಣಸ್ವಾಮಿಯವರು ನಿಮಗೆ ಹೇಳಿದ್ದುದು. ನೀವು ಮಂತ್ರಿಗಳಾಗಿದ್ದಾಗ ಏನೇನು ನಡೆಯಿತು ಎಂದು ಅವರು ಹೇಳಿದರು. ನಾನೇನು ಹೇಳುವುದೇನೆಂದರೆ ನೀವಾಗಲಿ ಅಥವಾ ಅವರಾಗಲಿ ಅಧಿಕಾರದಲ್ಲಿರುವಾಗ ಇಂಥವುಗಳಿಗೆ ಅವಕಾಶ ಕೊಡಬಾರದು. ಏಕೆಂದರೆ ನೀವು ಹಿಂದೆ ಮಾಡಿದಿರಿ ಎಂದು ನೀವು ಅಧಿಕಾರ ಕಳೆದುಕೊಂಡಿರಿ, ಇವೊತ್ತು ಅವರು ಮಾಡಿದರು ಎಂದರೆ ಅವರಿಗೂ ನೈತಿಕವಾಗಿ ಬಲ ಇರುವುದಿಲ್ಲ.

ಶ್ರೀ ವಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮ ಕಾಲದಲ್ಲಿ ಮತ್ತು ನಮ್ಮ ಆಡಳಿತಾವಧಿಯಲ್ಲಿ ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಇಂಥ ಅತಿರೇಕಗಳಿಗೆ ಪ್ರೋತ್ಸಾಹ ಕೊಟ್ಟಿರಲಿಲ್ಲ.

ಅಧ್ಯಕ್ಷರು:- ನಾನು ಯಾವ ಜಿಲ್ಲೆಯವನು ಹೇಳಿ? ಇವೊತ್ತಿಗೂ ಹಿಂದಿನ ಗಾಯದ ಬರೆಗಳು ನನಗೆ ಹೋಗಿಲ್ಲ. ನಾನು ಆ ವಿಚಾರ ಎತ್ತುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾವು ಅದನ್ನು ನೆನಸಿಕೊಂಡರೆ ಭೂಮಿಯ ಒಳಕ್ಕೆ ಹೋಗಿಬಿಡುತ್ತೇವೆ. ದಯಮಾಡಿ ಮಾತನಾಡಬೇಡಿ. ಇದೇ ವಿರೋಧ ಪಕ್ಷದಲ್ಲಿ ಕುಳಿತಿರುವ ವಾಟಾಳ್‌ನಾಗರಾಜ್‌ರವರಿಗೆ ಅಂದು ಕಣ್ಣು ಕರಗಿಹೋಯಿತು. ನಾನು ಇಂದು ಅಧ್ಯಕ್ಷ ಸ್ಥಾನದಿಂದ ಆ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಬಾರದು. ಇಂದು ಈಗ ನಡೆಯುತ್ತಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ನೀವು ಮಾತನಾಡಿ.

ಶ್ರೀ ವಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಬೇರೆ ವಿಷಯಕ್ಕೆ ಸಂಬಂಧಪಟ್ಟದ್ದಲ್ಲ. ಪೋಲಿಸ್‌ರು ಏನು ದೌರ್ಜನ್ಯವನ್ನು ನಡೆಸಿದ್ದಾರೆ ಅದರ ಬಗ್ಗೆ ವಿಚಾರಣೆಗಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ರೈತರ ಮೇಲೆ ಗೋಲಿಬಾರ್ ಮಾಡಿದ್ದು ಯಾವ ಸರ್ಕಾರದಲ್ಲಿ ಮತ್ತು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಘಟನೆಯಲ್ಲಿ ಏನು ತಪ್ಪು ನಡೆಯಿತು ಎಂಬ ಬಗ್ಗೆ ಮಾನ್ಯ ಅಧ್ಯಕ್ಷರೇ ತಮಗೂ ಈ ವಿಷಯ ಗೊತ್ತಿದೆ.

ಅಧ್ಯಕ್ಷರು:- ನನಗೆ ಆ ದಿನಾಂಕಗಳು ನೆನಪಿಲ್ಲ ಶ್ರೀರಾಮರೆಡ್ಡಿಯವರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದನ್ನೇ ನೀವು ಸಮರ್ಥನೆ ಮಾಡಿಕೊಳ್ಳಿ. ಅವರು ಮಾಡಿದ್ದು ಕರೆಕ್ಟ್ ಇದೆ. ನಿಮ್ಮ ವರ್ಕರ್ಸ್ ಮೇಲೆ ನಿಮಗೆ ಒಂದು ವೇಳೆ ಸ್ಯಾಟಿಸಫೈ ಆಗಿದ್ದರೆ ನೀವು ಸುಮ್ಮನೆ ಕುಳಿತುಕೊಳ್ಳಿ. ಇದನ್ನೇ ಹೇಳಿಕೊಂಡು ನೀವು ಕಾಲ ಕಳೆಯಬೇಕು ಎಂದುಕೊಂಡಿದ್ದರೆ, ಹಾಗೇ ಕಾಲ ಕಳೆಯಿರಿ. ಮೊನ್ನೆ ನಡೆದ ಹೆಜ್ಜಾಲ ಘಟನೆಗೆ ಸಂಬಂಧಪಟ್ಟಂತೆ ಆರ್ಡರ್ಸ್ ಕೊಟ್ಟಿದ್ದು ಸರಿಯಿದೆ, ಆ ಜನರನ್ನು ಕೊಂದದ್ದು ಸರಿಯಿದೆ ಮತ್ತು ಅಲ್ಲಿ 72 ಜನರು ಗಾಯಗೊಂಡಿದ್ದು ಸರಿಯಿದೆ ಎನ್ನುವುದೇ ನಿಮ್ಮ ಅಭಿಪ್ರಾಯವಾಗಿದ್ದರೆ ಅದನ್ನೇ ಹೇಳಿ. ಯಾವುದೋ ಒಂದು ಎಕ್ಸಾಂಪಲ್‌ನ್ನು ತರುವುದು ಅದನ್ನು ನಿಮ್ಮ ಅಭಿಪ್ರಾಯವಾಗಿದ್ದರೆ ಅದನ್ನೇ ಹೇಳಿ. ನೀವು ಮಾಡಿದ್ದು ಎಂದು ಹೇಳುವುದು. ನಾವು ಮಾಡಿದ್ದಕ್ಕೆ ಇವೊತ್ತು ನಾವು ಕುಳಿತಿದ್ದೇವೆ. ನೀವು ಅದೇ ರೀತಿ ಮಾಡುತ್ತೀರೋ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ಆ ರೀತಿ ಹೇಳಿಲಿಲ್ಲ. ಹೆಜ್ಜಾಲದ ವಿಷಯವು ಈಗ ವಿಷಯಾಂತರವಾಗುತ್ತಿದೆ ಮತ್ತು ಅದರ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ ಎನ್ನತಕ್ಕಂಥದ್ದನ್ನು ನಾನು ಹೇಳಿದ್ದನ್ನು ಬಿಟ್ಟರೆ ಅವರು ಆ ರೀತಿಯಲ್ಲಿ ಮಾತನಾಡಬಾರದು ಎಂದು ನನ್ನ ಉದ್ದೇಶವಲ್ಲ. ಇವೊತ್ತು ಹೆಜ್ಜಾಲದ ಘಟನೆ ಬಗ್ಗೆ ಚರ್ಚೆಯಾಗದೇ ವಿಷಯಾಂತರವಾಗುತ್ತಿದೆಯಾದ ಕಾರಣ ಹೆಜ್ಜಾಲದ ವಿಷಯ ಇವೊತ್ತು ಚರ್ಚೆಯಾಗಬೇಕು. ಆದಕಾರಣ ಅದರ ಬಗ್ಗೆ ಚರ್ಚೆಯಾಗಬೇಕೆಂದಷ್ಟೇ ನಾನು ಹೇಳಿದ್ದುದು. ನಾನೇನೂ ಹಿಂದಿನ ಘಟನೆ ಬಗ್ಗೆ ಹೇಳಲಿಲ್ಲ.

ಅಧ್ಯಕ್ಷರು:- ತಮ್ಮ ಅಬ್ಸರ್ವೇಷನ್‌ನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನೂ ಕೂಡ ಅವರ ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೂಡ ಹೇಳಿದೆ. ನಿಮ್ಮ ಡಿ.ಜಿ.ಪಿ.ಯವರು ಈ ಘಟನೆ ಬಗ್ಗೆ ಕನ್‌ವಿನ್ಸ್ ಆಗಿದ್ದಾರೆ, ಹೋಮ್ ಸೆಕ್ರೆಟರಿಯವರು ಕನ್‌ವಿನ್ಸ್ ಆಗಿದ್ದಾರೆ ಮತ್ತು ಎಲ್ಲರೂ ಕನ್‌ವಿನ್ಸ್ ಆಗಿ ನೀವೇ ಟ್ರಾನ್ಸ್‌ಫರ್ ಮಾಡಿ ಪುನಃ 8 ದಿವಸದಲ್ಲೇ ಆತನನ್ನು ಅದೆ ಜಾಗಕ್ಕೆ ತರತಕ್ಕಂಥದ್ದು ಸರಿಯೇ. ಎಂದು. ಇದು ಯಾರ ತಪ್ಪು. ಜನರ ಕಚ್ಚಾಟವಲ್ಲ. ಅಲ್ಲಿ ಪೋಲಿಸ್‌ಗೆ ಸಂಬಂಧಪಟ್ಟಂತೆ ಜನ ಏನು ಹೇಳಿದರೋ ಅದನ್ನು ಕಂಪ್ಲೇಂಟ್‌ನಲ್ಲಿ ಅವರೇ ಮಾಡಿಕೊಂಡರು. ಆದರೆ ಹೊರಗಿನ ಕಾನ್ಸ್‌ಟ್ಯೂಟಿಯನ್ಸಿಯಿಂದ ಒತ್ತಡ ಬಂದಿದ್ದರಿಂದ ಮುಖ್ಯಮಂತ್ರಿಗಳು ಈಲ್ಡ್ ಆಗಬೇಕಾಗಿ ಬಂತು. ಒಂದು ಅದೆ ಕಾನ್ಸ್‌ಟ್ಯೂಟಿಯನ್ಸಿ ಜನರಿಂದ ಒತ್ತಡ ಬಂದಿದ್ದರೆ ಮತ್ತು ಇವರನ್ನು ತೆಗೆದಿದ್ದು ಅನ್ಯಾವಾಗಿದೆ ಎಂದು ಅವರು ಹೇಳಿದ್ದರೆ ಆಗ ನಾವು ಮತ್ತು ನೀವು ಅದನ್ನು ಒಪ್ಪಬಹುದಾಗಿತ್ತು. ಆದರೆ ಆ ರೀತಿಯಾಗದೆ ಹೊರಗಿನ ಕಾನ್ಸ್‌ಟ್ಯುಟಿಯೆನ್ಸಿಯವರು ಮತ್ತು ಮಂತ್ರಿಗಳು ಇನ್‌ಫ್ಲೊಯೆನ್ಸ್ ಮಾಡಿ ಈತನನ್ನು ಅದೇ ಸ್ಥಳದಲ್ಲಿಯೇ ಹಾಕುತ್ತೇನೆ ಎಂದು ಹೇಳಿ ಮಾಡಿದರೆ ಇದಕ್ಕೆ ನಾವೇನು ಮಾಡಬೇಕು?

ಅಧ್ಯಕ್ಷರು:- ನಾನು ಅದಕ್ಕೆ ಎರಡು ಅಬ್ಸರ್ವೇಷನ್ ಮಾಡಿದೆ. ದಯಮಾಡಿ ಯಾರೂ ಅನ್ಯಥಾ ಭಾವಿಸಬಾರದು. ಒಂದನೆಯದಾಗಿ ಈ ಪೋಲಿಸ್ ಇಲಾಖೆಯ ಬಗ್ಗೆ ಮಾತನಾಡುವಾಗ ಇಡೀ ಇಲಾಖೆಯ ನೈತಿಕ ಸ್ಥೈರ್ಯ ಕೊಡತಕ್ಕ ರೀತಿಯಲ್ಲಿ ನಾವು ಮಾತನಾಡುವುದು ಬೇಡ. ನಮಗೆ ಪರ್ಯಾಯವಾದ ವ್ಯವಸ್ಥೆ ಇಲ್ಲ. ನಾವು ಅವರ ಮೇಲೆಯೇ ಆಧಾರಪಡಬೇಕಾಗುತ್ತದೆ. ಆ ಇಲಾಖೆಯಲ್ಲಿರತಕ್ಕಂಥವರು ಯಾರು ತಪ್ಪಿತಸ್ಥರು ಇದ್ದಾರೆ ಅಂಥವರನ್ನು ಗುರುತಿಸಿ ಅವರು ಎಲ್ಲಿ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದಾರೆಯಾದ ಕಾರಣ ಅಂಥವರ ಮೇಲೆ ಶಿಕ್ಷೆಯಾಗಬೇಕು ಎನ್ನುವ ರೀತಿಯಲ್ಲಿ ಮಾತನಾಡಿದರೆ ಅದು ಸರಿಯಾಗುತ್ತದೆ. ಅದನ್ನು ಬಿಟ್ಟು ಪರಸ್ಪರ ಒಬ್ಬರ ಮೇಲೆ ಇನ್ನೊಬ್ಬರು ದೋಷಾರೋಪಣೆಗಳನ್ನು ಮಾಡುತ್ತಾ ಹೋದರೆ ಏನಾಗುತ್ತೆಂದರೆ ನೀವು ಇವೊತ್ತು ಇಲ್ಲಿ ಕುಳಿತುಕೊಂಡು ಇವರ ಮೇಲೆ ದೋಷಾರೋಪಣೆ ಮಾಡುವುದು ಮತ್ತು ಅವರು ನಿನ್ನೆ ನೀವು ಇಲ್ಲೇ ಇದ್ದಿರಲ್ಲಾ ಎಂದು ಹೇಳಿ ನಿಮಗೆ ದೋಷಾರೋಪಣೆ ಮಾಡತಕ್ಕಂಥದ್ದು ಸರಿಯಲ್ಲ. ಏಕೆಂದರೆ ಇಬ್ಬರೂ ಸೇರಿ ಒಂದೇ ರೀತಿಯಲ್ಲಿ ತಪ್ಪನ್ನು ಮಾಡಿದಂತಾಗುತ್ತದೆ. ಆ ರೀತಿ ಮಾಡುವುದನ್ನು ನಾವು ತಿದ್ದಿಕೊಂಡು ರಾಜಕೀಯ ಅಧಿಕಾರ ಯಾರೇ ನಡೆಸುತ್ತಿರಲಿ ಅವರು ಅಧಿಕಾರಿಗಳ ಜೊತೆ ಶಾಮೀಲಾಗಿದ್ದುಕೊಂಡು ಯಾವುದು ಅನೈತಿಕವೋ, ಯಾವುದು ಮಾಡಬಾರದೋ ಅಥವಾ ಯಾವುದು ಜನಹಿತಕ್ಕೆ ಮಾರಕವೋ ಅಂಥವುಗಳಿಗೆ ಪ್ರೋತ್ಸಾಹ ಕೊಡುವುದರಿಂದ ಈ ರೀತಿಯ ಘಟನೆಗಳು ಆಗುವ ಸಂಭವ ಇರುತ್ತದೆ. ಆದುದರಿಂದ ಅಂಥವುಗಳನ್ನು ಯಾರೇ ಅಧಿಕಾರದಲ್ಲಿದ್ದರೂ ಮಾಡಬಾರದು. ಈಗಾಗಲೇ ಹಿಂದೆಯೂ ಇಂಥವುಗಳು ಆಗಿವೆ, ಈಗಲೂ ಆಗುತ್ತಿದೇ ಎಂದು ಏನು ನೀವು ಹೇಳುತ್ತೀರಿ ಅದನ್ನು ನಾವು ತಡೆಯಬೇಕು ಎನ್ನುವ ಜನರಲ್ ಅಬ್ಸರ್ವೇಷನ್ ನಾನು ಮಾಡಿದ್ದು ಅಷ್ಟೆ ಯಾರೂ ಕೂಡ ಇಂಥ ಘಟನೆಗಳಿಗೆ ಪ್ರೋತ್ಸಾಹ ಕೊಡಬಾರದು.

ಶ್ರೀ ಎ. ಮುನಿಯಪ್ಪ:- ಈ ರಾಜ್ಯದಲ್ಲಿ ಈಗಾಗಲೇ ಆಗಿರತಕ್ಕಂಥ ಅತಿರೇಕಗಳು ಮತ್ತು ಇತ್ತೀಚೆಗೆ ನಡೆದಂಥ ಅಮಾನವೀಯ ಘಟನೆ ನಮ್ಮ ರಾಮನಗರದ ಹೆಜ್ಜಾಲದಲ್ಲಿ ನಡೆದಿದೆ. ಅದೇ ರೀತಿ ಇತ್ತೀಚೆಗೆ ಮುಳುಬಾಗಿಲಿನಲ್ಲಿ ಪೋಲಿಸರಿಂದಲೇ ನೂರಕ್ಕೆ ನೂರರಷ್ಟು ಅತಿರೇಕ ಏನು ಆಗಿದೆ. ಇವೆಲ್ಲಕ್ಕೂ ಸಹ ಸರ್ಕಾರ ತನ್ನ ಜವಾಬ್ದಾರಿಯನ್ನು ಹೊತ್ತುಕೊಂಡು ಬಹುಶಃ ಈಗಾಗಲೇ ವಿರೋದ ಪಕ್ಷದ ನಾಯಕರು ಈ ನಿಟ್ಟಿನಲ್ಲಿ ಸರ್ಕಾರ ಜವಾಬ್ದಾರಿ ಹೊತ್ತು ರಾಜೀನಾಮೆಯನ್ನು ಏನು ಕೇಳಿದ್ದಾರೆ ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ವಂದನೆಗಳು.

ಶ್ರೀ ಸಯ್ಯದ್ ಜುಲ್ಫೀಕರ್ ಹಶ್ಮಿ:- ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:- ಹಶ್ಮಿಯವರೇ, ನೀವು ಮಾತನಾಡುವ ಬಗ್ಗೆ ನೋಟಿಸ್‌ನ್ನು ಈ ಹಿಂದೆಯೇ ಕೊಟ್ಟಿಲ್ಲ. ನಿಮ್ಮ ಸಮಸ್ಯೆ ಏನು ಎಂಬುದು ನನಗೆ ಗೊತ್ತಿದೆ.

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆ ಮುಖೇನ ಈ ರಾಜ್ಯದ ರಾಮನಗರ ಮತ್ತು ಇತರಡೆಯಲ್ಲಿ ಕಾನೂನು ಮತ್ತು ಶಾಂತಿಪಾಲನೆ ಸಂಪೂರ್ಣವಾಗಿ ಹದಗೆಟ್ಟಿರುವ ವಿಷಯವನ್ನು ಚರ್ಚಿಸುವ ಸಲುವಾಗಿ ನಿಲುವಳಿ ಸೂಚನೆ ಮುಖೇನ ತಮ್ಮ ಗಮನಕ್ಕೆ ತಂದಾಗ ಇದು ಸರ್ಕಾರದ ಪರವಾಗಿ ಒಂದು ಆಕ್ಷೇಪಣೆ ಎತ್ತಿದಂಥ ಸಂದರ್ಭದಲ್ಲಿ ಅದಕ್ಕೆ ನಿಯಮಾವಳಿ ಬದಲಾಯಿಸಿ ಇವೊತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದೊಂದು ಪ್ರಾಮುಖ್ಯವಾದಂಥ ವಿಷಯವಾಗಿದೆ. ಹೆಜ್ಜಾಲದಲ್ಲಿ ಘಟನೆ ನಡೆದಿರುವುದು ಮೂರನೇ ತಾರೀಖು. ಅದೂ ಚುನಾವಣೆ 8ನೇ ತಾರೀಖು ನಡೆಯತಕ್ಕಂಥ ಹಿನ್ನೆಲೆಯಲ್ಲಿ ನಡೆದಿರತಕ್ಕಂಥ ಘಟನೆಯಾಗಿರುವುದರಿಂದ ಇದು ಬಹಳ ಪ್ರಾಮುಖ್ಯವಾದ ವಿಷಯವಾಗಿತ್ತು. ಅದಕ್ಕೋಸ್ಕರ ಸಾರ್ವಜನಿಕವಾಗಿ ಸರ್ಕಾರದ ವೈಫಲ್ಯ ಈ ಘಟನೆಯ ಹಿನ್ನೆಲೆಯಲ್ಲಿರುವುದರಿಂದ ಈ ನಿಯಮಾವಳಿಯಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ಪ್ರಯತ್ನಪಟ್ಟೆವು. ಇದರಲ್ಲಿ ಘಟನೆಯಾದ ಮೂರನೇ ದಿವಸವೇ ನ್ಯಾಯಾಂಗ ತನಿಖೆಗೆ ಒಳಪಡಿಸಿರತಕ್ಕಂಥ ವಿಚಾರ ನಾವು ಮತ್ತು ನೀವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ ಜನರಿಗೆ ಮತ್ತು ನಮಗೆ ಈ ನ್ಯಾಯಾಂಗ ತನಿಖೆ ಬಗ್ಗೆ ಹೆಚ್ಚು ವಿಶ್ವಾಸವಿಲ್ಲದಿರುವುದನ್ನು ನೋಡುತ್ತಿದ್ದೇವೆ. ಏಕೆಂದರೆ ನ್ಯಾಯಾಂಗ ತನಿಖೆಯಾಗಬೇಕೆಂದು ಇವೊತ್ತು ತೀರ್ಮಾನವಾದರೆ ಅದರ ತೀರ್ಪು ಬರುವುದು ಇನ್ನು ಎಷ್ಟು ವರ್ಷದಲ್ಲೋ ಆಗುತ್ತದೆ. ಇದಕ್ಕೆ ಕಾಲಮಿತಿಯೇನೂ ಇರುವುದಿಲ್ಲ. ಅದೂ ಅಲ್ಲದೇ ಈ ಹಿಂದೆ ಹಲವಾರು ಘಟನೆಗಳಲ್ಲಿ ನ್ಯಾಯಾಂಗ ತನಿಖೆಯಾಗಿ ವರದಿ ಬಂದಮೇಲೂ ತಪ್ಪಿತಸ್ಥರ ಮೇಲೆ ಪನಿಷ್‌ಮೆಂಟ್ ಆಗಿರುವುದನ್ನು ನಾವು ನೋಡಿಯೇ ಇಲ್ಲವೆಂದು ಹೇಳಬಹುದು. ಏಕೆಂದರೆ ವರದಿ ಬಂದಾಗ ಆ ತಪ್ಪಿತಸ್ಥ ಅಧಿಕಾರಿ ನಿವೃತ್ತಿ ಹೊಂದಿರಬಹುದು ಅಥವಾ ಬಿಡ್ತಿ ಮೇಲೆ ಬೇರೆ ಕಡೆ ಹೋಗಿರಬಹುದು. ಆದುದರಿಂದ ಇಂಥವರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದಿರುವ ಕಾರಣಕ್ಕೋಸ್ಕರ ಮತ್ತು ಈ ನ್ಯಾಯಾಂಗ ತನಿಖೆ ಮೇಲೆ ಸಾರ್ವಜನಿಕರಿಗೆ

ಹೆಚ್ಚು ವಿಶ್ವಾಸವಿಲ್ಲದಿರುವುದರಿಂದ ನಾನು ಈ ನಿಯಮಾವಳಿಯಡಿಯಲ್ಲಿ ಚರ್ಚೆ ಮಾಡುವುದಕ್ಕೆ ಪ್ರಯತ್ನ ಪಟ್ಟೆವು. ಆದರೂ ಕೂಡ ತಾವು ನಿಯಮವನ್ನು ಬದಲಾವಣೆ ಮಾಡಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ಅವರುಗಳು ಮಾತನಾಡಬೇಕಾದರೆ ರಾಮನಗರದಲ್ಲಿ ಆಗಿರತಕ್ಕಂಥ, ಮುಳುಬಾಗಿಲಿನಲ್ಲಾಗಿರತಕ್ಕಂಥ ಮತ್ತು ಮಂಡ್ಯದಲ್ಲಾಗಿರತಕ್ಕಂಥ ಎಲ್ಲಾ ಇನ್ಸಿಡೆಂಟ್ಸ್ ಬಗ್ಗೆ ವಿವರವಾಗಿ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಮಾನ್ಯ ಶಿವಕುಮಾರ್‌ರವರು ನೀವು ಹೇಳಿದ್ದೇ ರಾಗ ಹೇಳುತ್ತೀರಿ ಎಂದು ಹೇಳಿದರು. ನಾನು ಯಾವ ರಾಗವನ್ನೂ ಕೂಡ ಹೇಳುವುದಿಲ್ಲ.

5.50 ಪಿ.ಎಂ.

ಇವತ್ತು ಸರ್ಕಾರದ ವೈಫಲ್ಯದ ಪಾತ್ರ ಇದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎಂಟನೇ ತಾರೀಖು ಬಹಳ ಪ್ರತಿಷ್ಠಿತವಾದಂತಹ ಚುನಾವಣೆ ಅದು ರಾಮನಗರದಲ್ಲಿ ನಡೆಯಿತು. ಆ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದಂಥವರು ಮುಖ್ಯಮಂತ್ರಿಗಳು ಆಗಿದ್ದರು, ಪ್ರಧಾನ ಮಂತ್ರಿಗಳು ಆಗಿರುವಂತಹ ಸಂದರ್ಭದಲ್ಲಿ ಆ ಸ್ಥಾನವನ್ನು ಉಳಿಸಿಕೊಳ್ಳಬೇಕು ಎನ್ನುವಂತಹ ದೃಷ್ಟಿ ಇವತ್ತು ಯಾವುದೇ ರಾಜಕೀಯ ಪಕ್ಷಗಳಿಗಾದರೂ ಕೂಡ ಇದ್ದೇ ಇರುತ್ತದೆ. ಅವರಿಗೆ ಎಷ್ಟು ಆಸಕ್ತಿ ಇರುತ್ತದೋ ಅಷ್ಟೇ ಆಸಕ್ತಿ ನಮಗೂ ಇರುತ್ತದೆ. ಆದರೆ ಅದನ್ನು ಉಳಿಸಿಕೊಳ್ಳಬೇಕು ಎನ್ನುವಂತಹ ಸಂದರ್ಭದಲ್ಲಿ ವೆಳ್ಳಿಯಪ್ಪ ಕಾರ್ಖಾನೆ ಸಂದರ್ಭ ಒಂದು ಇಷ್ಯೂ. ಅದು ಬಹಳ ವರ್ಷದಿಂದ ಇದ್ದಿದ್ದೇ ಆದರೂ ಕೂಡ ಮೂರನೇ ತಾರೀಖು ಅವರು ರಸ್ತೆ ತಡೆ ಮಾಡತಕ್ಕಂಥ ಸಂದರ್ಭವನ್ನು ಉಪಯೋಗಿಸಿಕೊಂಡು ಈ ರೀತಿಯಾಗಿದೆ. ಅಲ್ಲಿ ಪೋಲೀಸ್ ಇಲಾಖೆ ಕೂಡ ಇದ್ದು, ಅವರಿಗೆ ಆಗಲೇ ಇದರ ಬಗ್ಗೆ ಮಾಹಿತಿ ಕೂಡ ಗೊತ್ತಾಗಿತ್ತು. ಈ ಚುನಾವಣೆಯಲ್ಲಿ ನಾವು ಗೆಲ್ಲತಕ್ಕಂಥಾದ್ದು ಬಹಳ ಕಷ್ಟವೆಂದು ಮನಗಂಡಿದ್ದರಿಂದ, ಏನಾದರೂ ಮಾಡಿ ಇವತ್ತು ಗಲಭೆಯನ್ನು ಎಬ್ಬಿಸಿ ಜನರಿಗೆ ಹೆದರಿಕೆ ಬರತಕ್ಕಂಥ ಒಂದು ಪರಿಸ್ಥಿತಿಯನ್ನು ಸೃಷ್ಟಿ ಮಾಡಿ ಚುನಾವಣೆಯನ್ನು ಗೆಲ್ಲಲೇಬೇಕು ಎನ್ನುವ ನಿರ್ಧಾರ ಏನು ಇತ್ತು ಆ ನಿರ್ಧಾರಕ್ಕೋಸ್ಕರ ಇವತ್ತು ಅನೇಕ ಅಮಾಯಕರನ್ನು ಬಲಿ ಕೊಡತಕ್ಕಂಥ ವಾತಾವರಣವಾಗಿದೆ. ಈ ವೆಳ್ಳಿಯಪ್ಪ ಫ್ಯಾಕ್ಟರಿ ಇರತಕ್ಕಂಥಾದ್ದು ಎಲ್ಲಿ? ರಾಮನಗರದಿಂದ 10 ಕಿಲೋಮೀಟರ್ ದೂರ ಮತ್ತು ಬಿಡದಿಯಿಂದ 10 ಕಿಲೋಮಿಟರ್ ದೂರ. ಅಲ್ಲಿ ಊರು ಇಲ್ಲ, ಕೇರಿ ಇಲ್ಲ. ಆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರತಕ್ಕಂಥವರು ಸುಮಾರು 300-400 ಜನ ಇದ್ದಾರೆ. ಆದರೆ ಎರಡು ಸಾವಿರ ಜನರ ಮೇಲೆ ಕೇಸ್ ಹಾಕತಕ್ಕಂಥ, ಎಫ್ಐ ಆರ್‌ನಲ್ಲಿ ಸೇರಿಸತಕ್ಕಂಥ ಒಂದು ಪ್ರಯತ್ನವನ್ನು ಮಾಡಿದಾಗ ಏನು ಅಭಿಪ್ರಾಯ ಬರುತ್ತದೆ ಎನ್ನುವುದನ್ನು ಊಹಿಸಬಹುದು. ಜಿಲ್ಲೆಗೆ ಸಂಬಂಧಪಟ್ಟ ನನ್ನ ಒಬ್ಬ ಭಕ್ತ ಇವತ್ತು ಮುಳಬಾಗಿಲು ಮುಖೀನ ತಿರುಪತಿಗೆ ಹೋಗಬೇಕಾದರೆ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಆ ಅಮಾಯಕನ ಪೋಲೀಸ್ ಲಾಕಪ್ ಡೆತ್ ಆದಂತಹ ಸಂದರ್ಭದಲ್ಲಿ ಅದಕ್ಕೆ ತಿರುವು ಕೊಡುವುದಕ್ಕೋಸ್ಕರ ಪೋಲೀಸ್ ಇಲಾಖೆ ಮೇಲೆ ಜನ ಬೀಳಬಹುದು ಎನ್ನುವ ಭಾವನೆ ಪೋಲೀಸ್‌ವರಿಗೆ ಬಂದತಕ್ಷಣ

ಮಸೀದಿಯವರಗೆ ಹೋಗಿ ಹಂದಿ ಮಾಂಸವನ್ನು ಎಸೆದು ಅಲ್ಲಿ ಜಗಳವನ್ನು ಸೃಷ್ಟಿ ಮಾಡುತ್ತಿರುವುದನ್ನು ನೋಡಿದರೆ ನನಗೆ ಏನು ಭಾವನೆ ಬರುತ್ತದೆ ಎಂದರೆ ಆ ರಾಜ್ಯದಲ್ಲಿ ಸರ್ಕಾರ ಇದೆಯೇ? ಅದರಲ್ಲಿ ಮುಖ್ಯಮಂತ್ರಿ ಇದ್ದಾರೆಯೇ; ಗೃಹಮಂತ್ರಿಗಳು ಇದ್ದಾರೆಯೇ ಎನ್ನುವ ಭಾವನೆ ಬರುತ್ತದೆ. ಇದು ನಡೆಯುತ್ತಿರುವುದನ್ನು ನೋಡಿದಾಗ ಇದು ಪೋಲೀಸ್ ರಾಜ್ಯವಾಗಿದೆ. ಸರ್ಕಾರದ ವೈಫಲ್ಯವನ್ನು ಏನಿದೆ ಅದನ್ನು ಲಘುವಾಗಿ ತೆಗೆದುಕೊಳ್ಳತಕ್ಕಂಥಾದ್ದು ಅಲ್ಲ. ಒಂದು ಘಟನೆಯಾಯಿತು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಇವತ್ತು ನಿಜವಾಗಿಯೂ ನಿಮಗೆ ಜನಗಳ ಮೇಲೆ ವಿಶ್ವಾಸ ಇದ್ದಿದ್ದರೆ, ಮುಳಬಾಗಿಲಿನಲ್ಲಿ ಏನು ಲಾಕಪ್‌ಡೆತ್ ಆಯಿತು, ಹಾಗೂ ಗೋಲಿಬಾರ್ ಏನಾಯಿತು, ಬೇರೆ ಕಡೆ ಸಹ ಈ ಘಟನೆಗಳು ಆಗಿರುವಂತಹ ಸಂದರ್ಭದಲ್ಲಿ ನಿಮ್ಮ ಅಧಿಕಾರಿಗಳು ಏನಿದ್ದರು ಡಿ.ಜಿ.ಪಿ.ಗಳು ಇದ್ದರು, ನಿಮ್ಮ ಹೋಮ್ ಸೆಕ್ರಟರಿಗಳು ಇದ್ದಂತಹ ಸಂದರ್ಭದಲ್ಲಿ ಅದರ ಬಗ್ಗೆ ನೀವು ಎನ್‌ಕ್ವೈಯರಿ ಮಾಡಿ ಕೆಲವು ತಪ್ಪಿತಸ್ಥರು ಯಾರು ಇದ್ದಾರೆ ಅವರಿಗೆ ಶಿಕ್ಷೆ ಕೊಟ್ಟು ಸಸ್ಪೆಂಡ್ ಮಾಡಿ ಡಿಸ್‌ಮಿಸ್ ಮಾಡಿ, ಅವರ ಮೇಲೆ ಕೇಸ್ ಹಾಕತಕ್ಕಂಥ ಕೆಲಸವನ್ನು ಮಾಡಿದ್ದರೆ ನಿಮ್ಮ ಮೇಲಿನ ವಿಶ್ವಾಸ ಉಳಿಯುತ್ತಿತ್ತು. ಇವತ್ತು ಆ ಕೆಲಸವನ್ನು ಮಾಡಿಲ್ಲ. ಎಲ್ಲಿ ತಪ್ಪಿದೆ ಎಂದರೆ ಸರ್ಕಾರ ನಿಜವಾಗಲೂ ಕೂಡ ಕಾರ್ಯಭಾರ ನಡೆಸತಕ್ಕಂಥಾದ್ದರಲ್ಲಿ, ಮತ್ತು ಈ ರೀತಿಯಾಗಿ ಕಾರ್ಯವೈಖರಿಯನ್ನು ನಡೆಯುತ್ತಿರತಕ್ಕಂಥ ದೃಷ್ಟಿಯನ್ನು ನೋಡಿ ನಮ್ಮ ಆರೋಪ ಇರತಕ್ಕದ್ದು ತಮ್ಮ ಸರ್ಕಾರದ ಮೇಲೆ, ಸರ್ಕಾರದ ವೈಫಲ್ಯವನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಚುನಾವಣೆ ನಡೆದಂತಹ ಸಂದರ್ಭದಲ್ಲಿ ಅಂತಿಮವಾಗಿ ತಾವು ಏನೇ ಮಾಡಿರಬಹುದು, ಏನೇ ಮಾಡಿದ್ದರೂ ಕೂಡ ಪ್ರಜಾಪ್ರಭುತ್ವದಲ್ಲಿ ಮಾಲೀಕರಿಗಿರತಕ್ಕಂಥ ಜನರು ಕೊಟ್ಟಂತಹ ತೀರ್ಪನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ತಾವು ಪ್ರತಿಜ್ಞೆಯಾಗಿ ತೆಗೆದುಕೊಂಡಿರತಕ್ಕಂಥ ಚುನಾವಣೆಗಳು, ಅದು ಚಿಕ್ಕನಾಯಕನಹಳ್ಳಿ ಅಥವಾ ರಾಮನಗರದ್ದು ಆಗಿರಬಹುದು. ನಾವೂ ಕೂಡ ಅಷ್ಟೆ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು ಸರ್ಕಾರದ ವೈಫಲ್ಯವನ್ನು ಏನು ಎಂದು ಹೇಳುವುದಕ್ಕೆ ಪ್ರಯತ್ನ ಪಟ್ಟಾಗ ಜನ ಕೊಟ್ಟಂತಹ ತೀರ್ಪು ಏನು ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳ-ಬೇಕಾಗುತ್ತದೆ. ಈ ಕ್ಷೇತ್ರದಲ್ಲಿ ಒಬ್ಬರು ಮುಖ್ಯಮಂತ್ರಿಯಾಗಿ, ಒಬ್ಬರು ಪ್ರಧಾನಮಂತ್ರಿಯಾಗಿರ-ತಕ್ಕಂಥವರು ಪ್ರತಿನಿಧಿಸಿಗತಕ್ಕಂಥ ಈ ಕ್ಷೇತ್ರದಲ್ಲಿ ಇವತ್ತು ಒಂಬತ್ತು ಸಾವಿರಕ್ಕಿಂತ ಹಚ್ಚಿನ ಮತದಿಂದ ತಮ್ಮ ಅಭ್ಯರ್ಥಿಗೆ ಸೋಲು ಆಗಬೇಕಾದರೆ ಕಾರಣವೇನು? ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್.ಪಟೇಲ್‌ರ ಬಗ್ಗೆ ವಿಶೇಷವಾದಂತಹ ಗೌರವವಿದ್ದು, ನಿಮಗೆ ನಿಮ್ಮದೇ ಆದಂತಹ ತತ್ವ, ಸಿದ್ಧಾಂತಕ್ಕೆ ಹೆಸರಾಗಿರತಕ್ಕಂಥವರು. ತಾವು ಯೋಚನೆ ಮಾಡಬೇಕು, ಇವತ್ತು ತಮ್ಮ ಮಾತಿಗೆ ಗೌರವವನ್ನು ಕೊಡದ ರೀತಿಯಲ್ಲಿ ತೀರ್ಪನ್ನು ಕೊಟ್ಟಿರಬೇಕಾದರೆ ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ, ನಿಮಗೆ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೆ ಆಗಲಿ, ಖುರ್ಚಿಗೆ ಅಂಟಿಕೊಳ್ಳುವುದಕ್ಕೆ ಆಗಲಿ ನಿಮಗೆ ಯಾವ ಶಕ್ತಿ ಇದೆ ಎನ್ನುವ ಮಾತನ್ನು ಕೇಳುತ್ತಾ, ಈಗಾಗಲೇ ನಮ್ಮ ನಾಯಕರು ಮಾತನಾಡುತ್ತಾ ತಮ್ಮ ಸರ್ಕಾರದ ರಾಜೀನಾಮೇಯನ್ನು ಕೂಡ ಕೇಳಿದ್ದಾರೆ. ಅದಕ್ಕೋಸ್ಕರ ಅವರು ಹೇಳಿರತಕ್ಕಂಥ ವಿಷಯಗಳಿಗೆ ನಾನು ಪುರಸ್ಕಾರವನ್ನು ಕೊಡುತ್ತಾ, ಅವರ ಮಾತಿಗೆ ಸಹಮತವನ್ನು ವ್ಯಕ್ತಪಡಿಸುತ್ತಾ ಇವತ್ತು ಸರ್ಕಾರ ಅಧಿಕಾರದಲ್ಲಿ

ಉಳಿಯತಕ್ಕಂಥ ಶಕ್ತಿ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಒಂದು ಮಾತು ಸತ್ಯ. Prevention is better than cure ಎಂದು ಹೇಳಿ. ಖಾಯಿಲೆ ವಾಸಿ ಮಾಡುವುದರ ಬದಲು ಮೊದಲೇ ಆ ಖಾಯಿಲೆಗೆ ಮದ್ದು ಮಾಡುವಂಥಾದ್ದು ಸೂಕ್ತ ಎಂದು ನನಗೆ ಅನಿಸುತ್ತದೆ. ಬೆಳಗಿನಿಂದ ಇವತ್ತಿನವರೆಗೂ ಎಲ್ಲಾ ಸಂದರ್ಭದಲ್ಲಿ ಆಡಳಿತ ಪಕ್ಷದವರೂ ಹಾಗೂ ವಿರೋಧಪಕ್ಷದವರು ಆರೋಪ ಪ್ರತ್ಯಾರೋಪಗಳನ್ನು ಮಾಡುವುದರಲ್ಲೇ ಕಾಲ ಕಳೆದರೋ ಹೊರತು ನೇರವಾಗಿ ಈ ಸಮಸ್ಯೆಗೆ ಪರಿಹಾರ ಏನು ಎಂದು ಯಾರೂ ಇಷ್ಟರವರೆಗೆ ಇಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡಲಿಲ್ಲ ಎಂಬುದು ನನ್ನ ಭಾವನೆ. ನಾವು ಎರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಆಲೋಚನೆ ಮಾಡಬೇಕಾಗಿದೆ. ಒಂದು ಗೋಲಿಬಾರ್ ಏನು ನಡೆದಿದೆ. ಇದು ರಾಜಕೀಯ ಪ್ರೇರಿತವಾಗಿ ನಡೆದಿದೆಯೇ ಎನ್ನುವುದನ್ನು ನಾವು ನೋಡಬೇಕಾಗಿದೆ. ಅಥವಾ ಅಧಿಕಾರಿಗಳು ರಾಜಕೀಯ ವ್ಯಕ್ತಿಗಳನ್ನು ಓಲೈಸುವುದಕ್ಕಾಗಿ ನಡೆದಿದೆಯೇ ಎನ್ನುವುದನ್ನು ನೋಡುವ ಅವಶ್ಯಕತೆ ಇದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಕೂಡ ಸರ್ಕಾರದಲ್ಲಿ ಇರುವಂತಹ ಅಧಿಕಾರಿಗಳ ಅವರ ಎಲ್ಲಾ ಹೆಚ್ಚುಕಡಿಮೆಗಳನ್ನು ಮುಚ್ಚಿಟ್ಟುಕೊಂಡು ನಮ್ಮ ಸರ್ಕಾರ ನೇರವಾದ ನೀತಿಯಲ್ಲಿ ನಡೆದಿದೆ ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಕಂಡುಕೊಂಡಂತಹ ಒಂದು ನಗ್ನ ಸತ್ಯ ಏನೆಂದರೆ ಕಳೆದ ಒಂದು ಚುನಾವಣೆ ಸಂದರ್ಭದಲ್ಲಿ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಂತಹ ಒಂದು ಸಮಸ್ಯೆಯನ್ನು ಈ ಸಂದರ್ಭದಲ್ಲಿ ಪರಿಹಾರ ಮಾಡಿಕೊಳ್ಳಬೇಕು ಎಂದು ಅಲ್ಲಿರತಕ್ಕಂಥ ಎಲ್ಲಾ ಕಾರ್ಮಿಕರು ಮನಸ್ಸಿನಲ್ಲಿ ಆಲೋಚನೆ ಮಾಡಿ ಆ ಕೆಲಸವನ್ನು ಮಾಡಿದಾಗ, ನನಗೆ ಅನಿಸುತ್ತದೆ, ಕೇವಲ ಒಂದು ರಾಜಕೀಯ ಪಕ್ಷ ಅಲ್ಲ ಇಲ್ಲಿ ಎರಡು ರಾಜಕೀಯ ಪಕ್ಷಗಳೂ ಕೂಡ ತಮ್ಮ ರಾಜಕೀಯ ಸ್ವಾರ್ಥವನ್ನು ಬೇಯಿಸಲಿಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿರಲಿಕ್ಕೂ ಸಾಧ್ಯತೆ ಇದೆ ಎನ್ನುವ ಒಂದು ದೊಡ್ಡ ಸಂಶಯ ನನ್ನಲ್ಲಿ ಇದೆ. ಕೇವಲ ಆರೋಪಗಳು, ಪ್ರತ್ಯಾರೋಪಗಳು ಪತ್ರಿಕೆಗಳಲ್ಲಿ ಅಥವಾ ರಾಜಕೀಯವ ಭಾಷಣಗಳಲ್ಲಿ ಮಾಡಿಕೊಂಡಿದ್ದಾರೆ....

ಅಧ್ಯಕ್ಷರು:- ಆ ಎರಡು ರಾಜಕೀಯ ಪಕ್ಷಗಳು ಯಾವುವು ಎಂದು ಹೇಳಬೇಕಲ್ಲಾ.

ಶ್ರೀ ಡಿ.ವಿ. ಸದಾನಂದಗೌಡ:- ಒಂದು ಆಡಳಿತ ಮಾಡುತ್ತಿರುವಂತಹ ಜನತಾದಳ ಇನ್ನೊಂದು ಕಾಂಗ್ರೆಸ್ ಪಕ್ಷ ಯಾರು ಅಲ್ಲಿ ಇವತ್ತು ಗೆದ್ದಿದ್ದಾರೆ ಅವರು. ಇವರಿಬ್ಬರೂ ಕೂಡ ಸ್ವಾರ್ಥ ಸಾಧನೆಗೋಸ್ಕರ ಸಾಮಾನ್ಯ ಕಾರ್ಮಿಕರನ್ನು ಬಲಿ ಕೊಟ್ಟಿದ್ದಾರೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಶ್ರೀ ಮಂಜುನಾಥ ಸಿ. ಕುನ್ನೂರು:- ಇವರು ಈಗ ಮೂರನೇ ಸ್ಥಾನಕ್ಕೆ ಹೋಗಿದ್ದಾರೆ, ಅದಕ್ಕೆ ಇಬ್ಬರ ಬಗ್ಗೆ ಬಹಳ ಸಿಟ್ಟಿನಿಂದ ಇದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ:- ದಯವಿಟ್ಟು ನೀವಿಬ್ಬರು ಮಾಡಿದ ತಪ್ಪನ್ನು ನಾವು ಇನ್ನು ಮುಂದೆ ಮಾಡಬಾರದು ಎಂದು ಹೇಳಿ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ ನಾವು ಇಷ್ಟಪಡುವುದಿಲ್ಲ. ಅದಕ್ಕೋಸ್ಕರ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನನಗೆ ನೇರವಾಗಿ ಸಂಶಯ ಇದೆ, ಈ ಗೋಲಿಬಾರ್ ಏನಾಗಿದೆ, ಅದಕ್ಕೆ ಆಡಳಿತ ಪಕ್ಷದ ಕುಮ್ಮಕ್ಕು ಎಷ್ಟು ಇದೆಯೋ ಅಷ್ಟೇ ದೊಡ್ಡದಾಗಿ ಕಾಂಗ್ರೆಸ್ ಪಕ್ಷದ್ದು ಇದೆ, ಇದರದ್ದೂ ಕೂಡ ಒಂದು ಸಹಕಾರ ಇದೆ ಎಂದು ನನಗನ್ನಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಈ ರೀತಿಯಾಗಿ ಪ್ರಚೋದನಕಾರಿಯಾಗಿ ಮಾತನಾಡಿದರೆ we are not going to tolerate. ಅದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅದಕ್ಕೆ ಜ್ಯುಡಿಷಿಯಲ್ ಪ್ರೊಬ್ ಮಾಡಿ ಎಂದು ನಾವೇ ಕೇಳಿದ್ದುದು. ಆದರೆ ಇಲ್ಲಿ ಕುಳಿತು ಕಾಂಗ್ರೆಸ್‌ನವರೇ ಮಾಡುತ್ತಿದ್ದಾರೆ; ಇವರೇ ಜವಾಬ್ದಾರಿ ಇದ್ದಾರೆ ಎನ್ನುವ ಮಾತನ್ನು ಹೇಳಿದರೆ ಇದರಲ್ಲಿ ಏನಿದೆ ಎಂದರೆ it is just to divert the attention. ನಾವು ಸರ್ಕಾರದ ಮೇಲೆ ಏನು ಅಲಿಗೇಷನ್ ಮಾಡಿದ್ದೇವೆ, ಇದನ್ನು ಡೈಲ್ಯೂಟ್ ಮಾಡುವುದಕ್ಕೆ ಬಿ.ಜೆ.ಪಿ ಯವರು ಸರ್ಕಾರದ ಜೊತೆಯಲ್ಲಿ ಶಾಮೀಲಾಗಿ ಈ ಮಾತನ್ನು ಹೇಳುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. I have to tell this. Otherwise, what is the necessity?

ಶ್ರೀ ಅರಗ ಜ್ಞಾನೇಂದ್ರ:- ನಾನೂ ಕೂಡ ರಾಮನಗರದಲ್ಲಿ 5-6 ಬಾರಿ ಪ್ರವಾಸ ಮಾಡಿದ್ದೇನೆ. ಅಲ್ಲಿ ನಡೆದಂತಹ ವರ್ತನೆ ನಾಚಿಕೆಗೇಡಿನ ರೀತಿಯಲ್ಲಿ ನಡೆಯಿತು. ಎರಡೂ ಪಕ್ಷಗಳು ಕೂಡ ರಾಜಕೀಯವಾಗಿ ದುರ್ಲಭವನ್ನು ಪಡೆಯುವುದಕ್ಕೆ ಏನೆಲ್ಲಾ ಮಾಡಬೇಕೋ ಅದನ್ನು ಮಾಡಿದವು. ಆ ಜನರ ಹೆಣದ ಮೇಲೆ ನಾವು ರಾಜಕೀಯ ಮಾಡುವುದಾದರೆ ಇದು ಖಂಡಿತ ತಪ್ಪಾಗುತ್ತದೆ. ಆ ಜನ ಕಣ್ಣೀರು ಸುರಿಸುತ್ತಿದ್ದಾರೆ. ಆದರೆ ಇಲ್ಲಿ ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳುತ್ತಿದ್ದಾರೆ. ಆ ಸಮಸ್ಯೆಯನ್ನು ಯಾವುತ್ತೋ ಬಗೆಹರಿಸಬಹುದಾಗಿತ್ತು. ರಾಮನಗರದಲ್ಲಿ ಇವತ್ತು ಇಂತಹ ಒಂದು ದುಷ್ಕೃತ್ಯ ನಡೆದು ಹೋಯಿತು. ಇವತ್ತು ಏನು ಸದಾನಂದಗೌಡರು ಹೇಳಿದ್ದಾರೆ ಅದು ಸರಿ ಇದೆ ಎಂದೇ ಹೇಳುತ್ತೇನೆ. ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ಯಾರನ್ನೋ ಆಹುತಿ ಕೊಡುವಂಥಾದ್ದು ಸಾರ್ವಜನಿಕ ಜೀವನದಲ್ಲಿ ಸರಿಯಾಗುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಸ್ಪಷ್ಟವಾದ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ರಾಜಕೀಯ ಮಾಡಬೇಕು ಎಂದು ನಾನು ಇಷ್ಟಪಡುವುದಿಲ್ಲ. ನಾನೂ ಕೂಡ ಚುನಾವಣಾ ಸಂದರ್ಭದಲ್ಲಿ ರಾಮನಗರಕ್ಕೆ ಹೋಗಿದ್ದೆ. ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಯಾರು ಕೆಲಸ ಮಾಡುತ್ತಿದ್ದರೋ, ಆಡಳಿತ ಪಕ್ಷ ಮಾಡಿದೆ ಎಂದು ಹೇಳುವಂತಹ ಭರವಸೆ ನಮ್ಮಲ್ಲಿ ಇತ್ತು. ರಾಜಕೀಯ ಹಿನ್ನೆಲೆ ಇವತ್ತು ಆಡಳಿತ ಮಾಡುತ್ತಿರುವಂತಹ ಜನತಾ ದಳ ಇದನ್ನು ಮಾಡಿದೆ ಎನ್ನುವ ಒಂದು ಅಂದಾಜು ನಮ್ಮ ಗಮನಕ್ಕೆ ಬರುತ್ತಿತ್ತು. ಆದರೆ ಕಾಂಗ್ರೆಸ್‌ನವರು ಅಲ್ಲಿ ಮಾಡುತ್ತಿರುವಂತಹ ನಾಟಕವನ್ನು ನೋಡಿದಾಗ ನಮಗೆ ಅನಿಸಿದ್ದು, ಇವರೂ ಕೂಡ ಪರೋಕ್ಷವಾಗಿ ಶಾಮೀಲಾಗಿದ್ದಾರೆ ಎಂದು ಒಂದು ಸ್ಪಷ್ಟ ಭಾವನೆ ನಾವು ಅಲ್ಲಿ ಹೋದಾಗ ಕಂಡುಬಂದಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾನು ಆಕ್ಷೇಪ ವ್ಯಕ್ತಪಡಿಸಬೇಕಾಗುತ್ತದೆ. ಏಕೆಂದರೆ ಈ ರೀತಿಯಾಗಿ ಅವರು ಅಲಿಗೇಷನ್ ಮಾಡಿದರೆ ನಾವು ಇದಕ್ಕೆ ರಿಟಾರ್ಟ್ ಮಾಡಬೇಕಾಗುತ್ತದೆ. ಏಕೆಂದರೆ ಇವರು ಆಡಳಿತ ಪಕ್ಷಕ್ಕೆ ಬೆಂಬಲ ನೀಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಅವರು ಭಾಷಣದ ಮಾಡಿದರೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಅದೇ ಉದ್ದೇಶದಿಂದ ಮಾಡಿದರೆ ಮಾಡಿ, ನನಗೆ ಗೊತ್ತಿದೆ. ಏಕೆಂದರೆ ನಿಮ್ಮದೂ ಇವರದೂ ದೋಸ್ತಿ ರಾಮನಗರದಲ್ಲಿ ಆಗಿದೆ. ಬಿ.ಜೆ.ಪಿಯವರೇ ನೇರವಾಗಿ ಜನತಾದಳದ ಕೌನ್ಸಿಲರ್‌ಗೆ ಸಪೋರ್ಟ್ ಮಾಡಿ ಅಲ್ಲಿ ಜನತಾದಳದವರಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಮಾಡಿದಿರಿ. ನಿಮ್ಮ 6-7 ಕೌನ್ಸಿಲರ್ಸ್‌ಗಳನ್ನು ಅವರಿಗೆ ಮಾರಿಬಿಟ್ಟಿದ್ದೀರಿ. ಮಾರಿಕೊಳ್ಳಿ. ಆ ಹೊಂದಾಣಿಕೆಯ ರಾಜಕಾರಣ ಅಲ್ಲಿ ನಡೆದಿದೆ. ಆದರೆ ಆ ಹೊಂದಾಣಿಕೆಯನ್ನು ಇಲ್ಲಿ ಮಾಡುವುದಕ್ಕೆ ಹೋಗಬೇಡಿ. ಇಲ್ಲಿ ಎಂದರೆ ರಾಮನಗರದಲ್ಲೂ ಕೂಡ ಹೊಂದಾಣಿಕೆ ಮಾಡಿದಿರಿ; ಚಿಕ್ಕನಾಯಕನಹಳ್ಳಿಯಲ್ಲಿಯೂ ಕೂಡ ಹೊಂದಾಣಿಕೆ ಮಾಡಿಕೊಂಡಿದ್ದೀರಿ. ಅದರ ಬಗ್ಗೆ ನಾನು ಇಲ್ಲಿ ಹೇಳಬೇಕಾಗಿಲ್ಲ, ಅದಕ್ಕಾಗಿ ನೀವು ಸುಮ್ಮನೆ ಕೈಮುಚ್ಚಿದ್ದನ್ನು ತೆರೆದು ತೋರಿಸಿ ಅವಲಕ್ಷಣ ಮಾಡಿಕೊಳ್ಳಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರೆ, ಯಾರ ಜೊತೆ ಯಾರು ಶಾಮೀಲಾಗಿದ್ದಾರೆ ಎಂದರೆ ಕರ್ನಾಟಕ ರಾಜ್ಯದ ಎಲ್ಲಾ ಪುರಸಭೆ, ನಗರಸಭೆ ಕಾರ್ಪೊರೇಷನ್‌ನ ಮೇಯರ್, ಉಪಮೇಯರ್ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಯಲ್ಲಿನ ಅಂಕಿಅಂಶಗಳನ್ನು ಒಂದುಸಾರಿ ತೆರೆದರು ಸ್ಪಷ್ಟವಾಗುತ್ತದೆ. ಉದಾಹರಣೆಗೆ ಶಿವಮೊಗ್ಗ ನಗರಸಭೆ, ಪುತ್ತೂರು ನಗರಸಭೆ, ಮೈಸೂರು, ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್, ಯಾವುದು ಹೇಳಲಿ ಯಾವುದು ಬಿಡಲಿ; ಮಂಗಳೂರು ಜಿಲ್ಲಾಪರಿಷತ್ ಚುನಾವಣೆ ಅಧ್ಯಕ್ಷರು ಯಾರು, ಉಪಾಧ್ಯಕ್ಷರು ಯಾರು? ಶಿವಮೊಗ್ಗ ಜಿಲ್ಲಾ ಪರಿಷತ್ ಚುನಾವಣೆ ಅಧ್ಯಕ್ಷರು ಯಾರು ಉಪಾಧ್ಯಕ್ಷರು ಯಾರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ನ್ಯಾಷನಲ್ ಮಟ್ಟದಲ್ಲಿ ಸಪೋರ್ಟ್ ಕೊಟ್ಟಿದ್ದೇವೆ. ನಿಮ್ಮ ರೀತಿ ಶಾಮೀಲಾಗಿ ಮಾರಿಕೊಂಡು ಮಾಡುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರೆ, ಇದರ ಜೊತೆಗೆ ಇವೊತ್ತು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಾ ಇರುವವರು ಯಾರು? ಪ್ರಧಾನಮಂತ್ರಿಯವರಿಗೆ ಬೆಂಬಲ ಕೊಡುತ್ತಾ ಇರುವಂತಹವರು ಕಾಂಗ್ರೆಸ್‌ನವರು. ಇವೊತ್ತು ಇಡೀ ದೇಶದಲ್ಲಿ ಒಂದು ಪಾರ್ಟಿಯಾಗಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮಂಥ ಕಮ್ಯೂನಲ್ ಫೋರ್ಸಸ್‌ಗಳಿಗೆ ನಾವು ಬೆಂಬಲ ನೀಡಬಾರದು, ಈ ದೇಶದಲ್ಲಿ ಜಾತ್ಯಾತೀತೆಯನ್ನು ಉಳಿಸಬೇಕು ಎಂಬ ದೃಷ್ಟಿಯಿಂದ ಬೆಂಬಲ ಕೊಟ್ಟಿದ್ದೇವೆಯೇ ಹೊರತಾಗಿ ನಮ್ಮ ಸ್ವಾಭಿಮಾನವನ್ನು ಅವರಿಗೆ ಮಾರಿಕೊಂಡು ಅಥವಾ ನಿಮ್ಮ ರೀತಿ ಗಿರವಿ ಇಟ್ಟುಕೊಂಡು ಮಾಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಈಗ ಸ್ಪಷ್ಟವಾಗಿ ನಮ್ಮ ಸದಾನಂದಗೌಡರು ಹೇಳುತ್ತಿದ್ದಾರೆ. ಮೊನ್ನೆ ನಡೆದಂಥ ಹೆಜ್ಜಾಲ ಕೊಲೆ ಪ್ರಕರಣಕ್ಕೆ ಎಷ್ಟರಮಟ್ಟಿಗೆ ಜನತಾದಳದ ಆಡಳಿತ ನಡೆಸುತ್ತಿರುವಂಥ ವ್ಯಕ್ತಿಗಳು ಕಾರಣವೋ, ಇವರು ಅದರ ರಾಜಕೀಯ ದುರ್ಲಾಭವನ್ನು ಪಡೆದು

ಮೊನ್ನೆ ನಡೆದಂಥ ರಾಮನಗರ ಚುನಾವಣೆಯಲ್ಲಿ ಗೆದ್ದಿದ್ದಾರೆ. ಅವರದೂ ದುರಾಡಳಿತ, ಎರಡೂ ಸೇರಿದೆ. ಎಷ್ಟರಮಟ್ಟಿಗೆ ಗೋಲಿಬಾರ್ ಪ್ರಕರಣಕ್ಕೆ ಈ ಆಡಳಿತ ಪಕ್ಷ ಕಾರಣವೋ, ಅದರ ದುರ್ಲಾಭವನ್ನು ಪಡೆದು ಹೆಣವನ್ನೇ ಇಟ್ಟುಕೊಂಡು ಹೆಣದ ಮೇಲೆ ರಾಜಕೀಯ ಮಾಡಿ ಚುನಾವಣೆಯಲ್ಲಿ ಇವರು ಗೆದ್ದಿದ್ದಾರೆ. ಒಂದುಕಡೆ ರಾಜ್ಯದಲ್ಲಿ ಜನತೆಗೆ ದ್ರೋಹ ಅವರು ಮಾಡಿದರು. ಜೊತೆಗೆ ಇವರು ಹೆಣದ ಮೇಲೆ ರಾಜಕೀಯ ಮಾಡಿದರು. ಇವೊತ್ತು ಇದನ್ನು ಮಾಡಬಾರದಾಗಿತ್ತು. ಇಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ ಹಿಂದೆ ಏನು ಮಾಡಿದ್ದರು, ಈಗ ಏನು ಮಾಡಿದರು ಎಂಬ ಅಂಶವನ್ನು ಸ್ವತಃ ವಿರೋಧಪಕ್ಷದ ನಾಯಕರು ಒಪ್ಪಿಕೊಂಡರು. ನಾವು ಇಲ್ಲಿ ಈ ರೀತಿ ಅನ್ಯಾಯಗಳನ್ನು ಮಾಡಿದ್ದೆವು, ಈ ರೀತಿ ಕೊಲೆಗಳನ್ನು ನಾವು ಮಾಡಿದ್ದೆವು ಕೊಲೆಗಳನ್ನು ಮಾಡಿದ್ದಕ್ಕೋಸ್ಕರ ವಿರೋಧಪಕ್ಷದ ಸ್ಥಾನಕ್ಕೆ ಬಂದು ಕುಳಿತಿದ್ದೇವೆ ಎಂದು ತುಂಬಾ ಸ್ಪಷ್ಟವಾಗಿ ಅವರು ಒಪ್ಪಿಕೊಂಡಿದ್ದಾರೆ, ಅದಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಏಕೆಂದರೆ ಕೆಟ್ಟಮೇಲಾದರೂ ಬುದ್ಧಿ ಬಂತಲ್ಲಾ ಎಂದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಈ ರೀತಿ ಈಶ್ವರಪ್ಪನವರು ಮಾತನಾಡಿದರೆ ಹೇಗೆ? ನಿಮಗೆ ಏನು ಹೇಳಬೇಕಾಗಿದೆಯೋ ಅದನ್ನು ನೇರವಾಗಿ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ನೇರವಾಗಿಯೇ ಹೇಳುತ್ತಿದ್ದೇನೆ, ಇನ್ನೂ ನೇರವಾಗಿ ಹೇಳಬೇಕಾಗಿದಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇನ್ನೊಬ್ಬರ ಮೇಲೆ ಅಲಿಗೇಷನ್ ಮಾಡುವುದಕ್ಕೆ ತಾವು ಹೋಗಬೇಡಿ. ನಮ್ಮ ನಮ್ಮಲ್ಲಿ ಏನಾದರೂ ಡಿಫೆಕ್ಟ್ ಇತ್ತು, ಆಯಿತು ಸೋತು ಕುಳಿತಿದ್ದೇವೆ ಎಂದು ಹೇಳಿದ್ದೇವೆ. ನೀವು ಏನು ಮಾಡುತ್ತಿದ್ದೀರಿ ಎಂಬುವುದು ಒಂದೆರಡು ವರ್ಷದಲ್ಲಿ ಬಯಲಿಗೆ ಬಂದು ಸಾಕಾಗಿದೆ....

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿರಬೇಕಾದರೆ ಮಧ್ಯೆ ಮಧ್ಯೆ ತಾವು ಮಾತನಾಡಿದರೆ ನಾನು ಏನು ಮಾಡಲಿ ಹೇಳಿ. ಹಾಗಾಗಿ ಅಧ್ಯಕ್ಷರೆ, ಸ್ಪಷ್ಟವಾಗಿ ಯಾರ ಜೊತೆಗೆ ಯಾರು ಶಾಮೀಲಾಗಿದ್ದಾರೆ ಎಂಬುದು ಮೈಸೂರು, ಹುಬ್ಬಳ್ಳಿ, ಮಂಗಳೂರು, ಶಿವಮೊಗ್ಗ ಎಲ್ಲಾ ನಗರಸಭೆ, ಪುರಸಭೆ, ಜಿಲ್ಲಾಪರಿಷತ್, ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಸ್ಪಷ್ಟವಾಗಿದೆ. ಅಧ್ಯಕ್ಷ ಉಪಾಧ್ಯಕ್ಷರ ಅಂಕಿಅಂಶಗಳನ್ನು ತೆಗೆದು ನೋಡಲಿ. ಕಾಂಗ್ರೆಸ್‌ನ ನಾಯಕರು, ವಿರೋಧಪಕ್ಷದ ಸ್ನೇಹಿತರು ಸ್ಪಷ್ಟವಾಗಿ ನಾವು ಅವರ ಜೊತೆ ಶಾಮೀಲಾಗಿದ್ದೇವೆ ಎಂದು ಒಪ್ಪಿಕೊಂಡು ಬಿಡಲಿ. ಸುಮ್ಮನೆ ನಮ್ಮ ಮೇಲೆ ಏಕೆ ಎರೆಗುತ್ತೀರಿ? ದೆಹಲಿಯಿಂದ ಮೈಸೂರಿನ ತನಕ ಕೂಡ ಕಾಂಗ್ರೆಸ್ ಜನತಾದಳ ಶಾಮೀಲಾಗಿದೆ ಎಂದು ಸ್ಪಷ್ಟವಾಗಿ ದೇಶದಲ್ಲಿ ಹೇಳುತ್ತಿರಬೇಕಾದರೆ ನಮ್ಮ ಮೇಲೆ ಆರೋಪ ಮಾಡುವುದಕ್ಕೆ ಅರ್ಥವೇ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಅಧ್ಯಕ್ಷರೇ, ನಾನು ಏತಕ್ಕೆ ಟೀಕೆ ಮಾಡುತ್ತೇನೆ ಎಂದು ಹೇಳಿದರೆ ಇವೊತ್ತು ಈ ಸದನದಲ್ಲಿ ಏನು ಚರ್ಚೆಯಾಗುತ್ತಿದೆ ಇದು ಮುಂದಿನ ಸಮಾಜಕ್ಕೆ ಒಂದು

ಮಾರ್ಗದರ್ಶಿ ಸೂತ್ರವಾಗಿರಬೇಕು ಅದಕ್ಕಾಗಿ ಸ್ಪಷ್ಟ ವಿಚಾರಗಳನ್ನು, ಸತ್ಯಸಂಗತಿಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ ಕೇವಲ ರಾಜಕೀಯವಾಗಿ ನಾವು ಒಂದುಕಡೆ ಕುಳಿತಿದ್ದೇವೆ ಎಂದು ಹೇಳುವುದಕ್ಕೆ, ಯಾವುದೋ ನಿಲುವಳಿಗಳನ್ನು ನಾವು ಮಂಡಿಸಿದ್ದೇವೆ ಎಂದು ಹೇಳಿದ ತಕ್ಷಣ ಸತ್ಯಸಂಗತಿಗಳನ್ನು ಮರೆ ಮಾಡುವುದು ಖಂಡಿತ ಈ ರಾಜಕೀಯಕ್ಕೆ ಶೋಭೆ ತರುವಂಥ ವ್ಯವಸ್ಥೆ ಅಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ರಾಮನಗರದ ಈ ಒಂದು ದೊಡ್ಡ ಘಟನೆ ಇದು ಖಂಡಿತವಾಗಿ ಆಡಳಿತ ಪಕ್ಷದ ಅವರ ವೈಫಲ್ಯಕ್ಕೆ ಮತ್ತು ಅವರ ರಾಜಕೀಯ ತಂತ್ರಗಾರಿಕೆಗೆ ಖಂಡಿತ ಕೈಗನ್ನಡಿ ಎಂದು ನಾನು ಈ ಸದನದಲ್ಲಿ ಉಲ್ಲೇಖ ಮಾಡುತ್ತಿದ್ದೇವೆ. ಆದರೆ ಅದರ ನಂತರ ನಡೆದ ಘಟನೆ ಕೂಡ ಜನರ ಮನಸ್ಸಿನಿಂದ ಹೋಗಲಿಲ್ಲ. ಆದಕಾರಣ ನಾನು ಈಗ ಹೇಳುವಂಥದ್ದು ಇಷ್ಟೆ. ಇವೊತ್ತು ನ್ಯಾಯಾಂಗ ತನಿಖೆ ಆಗಬೇಕು ಎಂದು ಹಿಂದೆ ಮುಖ್ಯಮಂತ್ರಿಗಳು ಹೇಳಿದ್ದಾರೆ ಅದು ಖಂಡಿತ ಸ್ವಾಗತಾರ್ಹ ಅದರಲ್ಲಿ ಎರಡು ಮಾತಿಲ್ಲ. ಆದರೆ ಇನ್ನಷ್ಟು ಶೀಘ್ರವಾಗಿ ಸತ್ಯಗಳನ್ನು ಹೊರಗೆತರುವಂಥ ಪ್ರಯತ್ನ ಮತ್ತು ಎಲ್ಲಾ ಸತ್ಯಗಳು ಸದನದ ಮುಂದೆ ಬಂದು ಮುಂದಿನ ದಿನಗಳಲ್ಲಿ ಈ ರೀತಿ ಆಗದಂಥ ವ್ಯವಸ್ಥೆ ಆಗಬೇಕಾದರೆ ನಮ್ಮ ವೈ.ರಾಮಕೃಷ್ಣರವರು ಉಲ್ಲೇಖ ಮಾಡಿದ ರೀತಿಯಲ್ಲಿ ಸದನ ಸಮಿತಿಯನ್ನು ರಚನೆ ಮಾಡಬೇಕು. ಅತ್ಯಂತ ಶೀಘ್ರವಾಗಿ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಆಗಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು)**:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಪ್ರಾರಂಭ ಮಾಡಿ ರಾಮನಗರ ಕ್ಷೇತ್ರದಲ್ಲಿ ನಡೆದ ಗೋಲಿಬಾರ್‌ನ ಉಲ್ಲೇಖದಿಂದ ಹಿಡಿದು ರಾಜ್ಯದ ಬೇರೆಲ್ಲಿ ಆಡಳಿತ ವೈಫಲ್ಯವಾಗಿದೆ, ಲಾಕಪ್‌ಡೆತ್ ಹಾಗೂ 2-3 ಕಡೆ ಗೋಲಿಬಾರ್ ಆಗಿರುವುದನ್ನು ಎಲ್ಲಾ ಸನ್ಮಾನ್ಯ ವಿರೋಧಪಕ್ಷದ ನಾಯಕರು, ಉಳಿದ ಪಕ್ಷದ ನಾಯಕರುಗಳು ಹೇಳಿದ್ದಾರೆ. ಇದು ನಿಯಮ 69ರ ಅಡಿಯಲ್ಲಿನ ಚರ್ಚೆಯಾಗಿರುವುದರಿಂದ ಈಗ ನಾನು ಅವರು ಎತ್ತಿರತಕ್ಕಂಥ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತೇನೆ. ಮುಳಬಾಗಿಲಿನಲ್ಲಿ ಆದಂಥ ಗೋಲಿಬಾರ್‌ನಲ್ಲಿ ಯಾವ ಅಧಿಕಾರಿ ಏನು ಮಾಡಿದ, ಯಾರು ಟ್ರಾನ್ಸ್‌ಫರ್ ಆದರು, ಏನು ಬಿಟ್ಟಿತು, ಅಲ್ಲೂ ನ್ಯಾಯಾಂಗ ತನಿಖೆ ಇದೆ, ಇಲ್ಲಿಯೂ ಏನು ಇವೊತ್ತು ಯಾರು ಜನ ಕರೆದುಕೊಂಡು ಬಂದರು, ಅಲ್ಲೆಲ್ಲೋ ನಾನು ಭಾಷಣ ಮಾಡಿದೆ ಎಂದು, ಕಾಂಗ್ರೆಸ್ ಕಾರಣ ಇರಬಹುದು ಇದರೊಳಗೆ ಭಾಗವಹಿಸಿರಬಹುದು ಎಂದು ಪತ್ರಿಕೆಯಲ್ಲಿ ಎಲ್ಲೋ ಸಾರ್ವಜನಿಕ ಸಭೆಯಲ್ಲಿ ನಾನು ಭಾಷಣ ಮಾಡುವಾಗ ನಾನು ಹೇಳಿದೆ ಎಂದು ಉಲ್ಲೇಖ ಮಾಡಿ ಯಾರೋ ಶ್ರೀರಾಮರೆಡ್ಡಿಯವರೋ ಯಾರೋ ಹೇಳಿದರು. ಈಗ ಸಾರ್ವಜನಿಕ ಸಭೆಯಲ್ಲಿ ಚುನಾವಣಾ ಪ್ರಚಾರದಲ್ಲಿ ನಾವು ಬಹಳ ಪ್ರೀತಿಯಿಂದ ಮಾತನಾಡುವುದಿಲ್ಲ. ನಮಗೂ ಕಾಂಗ್ರೆಸ್‌ಗೂ ಇರತಕ್ಕಂಥ ಸಂಬಂಧ ಏನು ಎಂಬುದು ನನಗೆ ಗೊತ್ತಿದೆ. ಖರ್ಗೆಯವರು ಅವರಿಗೆ ಉತ್ತರ ಕೊಡುವುದ, ರಾಮಕೃಷ್ಣರವರು ಖರ್ಗೆಯವರಿಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಇವೊತ್ತು ದೇಶದಲ್ಲಿ ಬಹಳ ವಿಚಿತ್ರವಾದ ಸ್ಥಿತಿ ಇದೆ. ಎಷ್ಟು ಅದರ ಗಂಭೀರತೆ ಇದೆ, ಎಷ್ಟು ಸೂಕ್ಷ್ಮತೆ ಇದೆ

ಎನ್ನುವುದನ್ನು ಬರುವ ದಿನಗಳಲ್ಲಿ ನಾವೆಲ್ಲರೂ ನೋಡಬಹುದಾದಂಥ ಅವಕಾಶ ಇದೆ. ಅದಕ್ಕೆ ನಾನು ಇವೊತ್ತು ಸಮಗ್ರ ರಾಜಕೀಯ ಪರಿಸ್ಥಿತಿ ರಾಷ್ಟ್ರದಲ್ಲಿ ಏನು ಇದೆ ಅದನ್ನು ಹೇಳುವುದಕ್ಕೆ ಹೋದರೆ ಈ ವಿಷಯ ಬಹಳ ಡೈಲ್ಯೂಟ್ ಆಗುತ್ತದೆ. ಈಗ ನ್ಯಾಯಾಂಗ ತನಿಖೆಗೆ ನಾವು ಆರ್ಡರ್ ಮಾಡಿದಾಗ ನಾನು ನಮ್ಮ ಹಿರಿಯ ಸಹೋದ್ಯೋಗಿಗಳನ್ನು ಕೇಳಿದ ತಕ್ಷಣ, ಇನ್ನೂ ಸುದ್ದಿ ಬಂದ ತಕ್ಷಣ ಕೇಳಿದೆ ಏಕೆಂದರೆ ನಾವು ತಡ ಮಾಡುವುದಿಲ್ಲ. ಒಂದು ಮಾನ್ಯ ಖರ್ಗೆಯವರೇ, ನೀವು ಮಂತ್ರಿಗಳಾಗಿದ್ದವರು, ಸರ್ಕಾರ ನಡೆಸಿದವರು. ಸರ್ಕಾರ ಯಾವುದೇ ಕಾರಣಕ್ಕಾಗಿ ತನ್ನ ಪೋಲೀಸನ್ನು ತಾನು ಸಂಶಯ ಪಡುವುದಿಲ್ಲ. ನಾನೂ ಅಷ್ಟೇ ನನ್ನ ಪೋಲೀಸನ್ನು ನಾನು ಸಂಶಯ ಪಡುವುದಿಲ್ಲ. ಅಲ್ಲಿ ಒಬ್ಬ ಕೆಟ್ಟವನಿರಬಹುದು ಇಲ್ಲ ಎಂದು ಹೇಳುವುದಿಲ್ಲ. ಈಗ ನ್ಯಾಯಾಂಗ ತನಿಖೆ ಯಾವಾಗ ಅಂದರೆ ನಮ್ಮ ಪೋಲಿಸ್ ಅಧಿಕಾರಿಗಳು ಏನು ತಪ್ಪು ಮಾಡಿರಬಹುದೆನೋ ಎಂದು ಅನುಮಾನ ಬಂದಾಗ ನಾವು ನ್ಯಾಯಾಂಗ ತನಿಖೆಗೆ ಆರ್ಡರ್ ಮಾಡುತ್ತೇವೆ. ಇಲ್ಲದಿದ್ದರೆ ನಾವು ಏಕೆ ಮಾಡುತ್ತೇವೆ? We could have defended it on that. We have enough strength here. ನ್ಯಾಯಾಂಗ ತನಿಖೆಗೆ ಆರ್ಡರ್ ಮಾಡಿದೆ; ಏಕೆ ಮಾಡಿದೆ ಎಂಬುದನ್ನು ತಾವು ಮೊದಲು ತಿಳಿದುಕೊಳ್ಳಿ, ಅರ್ಥಮಾಡಿಕೊಳ್ಳಿ. ಇದರಲ್ಲಿ ಏನೇನೋ ಸಂದರ್ಭಗಳು ಇರುತ್ತವೆ...

ಮಾನ್ಯ ಸದಸ್ಯರೊಬ್ಬರು ಜ್ಯುಡಿಷಿಯಲ್ ಎನ್‌ಕ್ವೈರಿಯಿಂದ ಯಾವತ್ತು ಸತ್ಯವೇನು ಹೊರಗಡೆ ಬಂದಿಲ್ಲವೆಂದು ಹೇಳಿದರು. ಆದರೆ ಜ್ಯುಡಿಷಿಯಲ್ ಎನ್‌ಕ್ವೈರಿಯಾಗುತ್ತದೆ ಎಂದರೆ ತಪ್ಪು ಮಾಡಿದಂಥ ಅಧಿಕಾರಿಗಳು ಹೆದರುತ್ತಾರೆ. ನಾವು ಕೋರ್ಟಿನ ಮುಂದೆ ಹಾಜರಾಗಿ ಸಾಕ್ಷ್ಯ ಹೇಳಬೇಕಾದಂತಹ ಸಂದರ್ಭ ಬರುತ್ತದೆ, ಎಂದು ಪೋಲೀಸ್ ಅಧಿಕಾರಿಯಾಗಿ ನಾವು ತಪ್ಪು ಮಾಡಬಾರದು ಇಲ್ಲದಿದ್ದರೆ ನಾವು ಕೋರ್ಟಿನ ಎದುರು ಹೋಗಿ ನಿಂತು ಕೊಳ್ಳಬೇಕಾಗುತ್ತದೆನ್ನುವ ಸಂದರ್ಭ ಹಾಗೂ ಭಯ ಬರಲಿ ಎಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆಯೇ ಹೊರತು ಬೇರೆ ಇಲ್ಲ. ಇದು ಮಾನ್ಯ ಜಯಚಂದ್ರರವರಿಗೆ. ಗೊತ್ತು, ಎಷ್ಟು ದೇಶದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿಯಾಗಿದೆ, ಯಾರಿಗೆ ಶಿಕ್ಷೆಯಾಗಿದೆ; ಆಗಿಲ್ಲ, ನಾವು ನ್ಯಾಯಾಲಯದ ಕಾನೂನು ಓದಿ ಸ್ವಲ್ಪ ಪ್ರಾಕ್ಟೀಸ್ ಮಾಡಿರುವ ಅನುಭವ ಇರುವುದರಿಂದ ಇವತ್ತು ನಾವು ನ್ಯಾಯಾಲಯದ ಮುಂದೆ ನಿಲ್ಲುತ್ತೇವೆನ್ನುವ ಭಯ ಬರಬೇಕು. ನ್ಯಾಯಾಲಯದಿಂದ ಏನು ಶಿಕ್ಷೆ ಸಿಕ್ಕುತ್ತದೆಂದು ಅಲ್ಲ. I have to stand before the Judge.

ಎರಡನೆಯದಾಗಿ, ಮುಳಬಾಗಿಲು ಲಾಕಪ್‌ಡೆತ್ ಬಗ್ಗೆಯೂ ನಾವು ಇಮ್ಮಿಡಿಯೇಟಾಗಿ ಆ್ಯಕ್ಷನ್ ತೆಗೆದುಕೊಂಡಿದ್ದೇವೆ. I am glad to say my senior Police Officers found something wrong there. ಅದಕ್ಕೇ ನಾನು ತಕ್ಷಣ ಮುಳಬಾಗಿಲಿನ ಬಗ್ಗೆ ಜ್ಯುಡಿಷಿಯಲ್‌ಎನ್‌ಕ್ವೈರಿಯನ್ನು ಮಾಡಲು ಕ್ರಮ ತೆಗೆದುಕೊಂಡೆ; ಇದನ್ನು ಯಾರು ಮಾಡಿದರು? ಪೋಲಿಟಿಕಲಿ ಏನು? ಲಾಕಪ್ ಡೆತ್ ಏಕೆ ಆಯಿತು? ಅದನ್ನು ಮುಚ್ಚುವುದಕ್ಕೆ ಪೊಲೀಸರು ಹೀಗೆ ಮಾಡಿದರು, ಇಂತಹ ಸಂಶಯಗಳಲ್ಲಿ ಅರ್ಧ ಸುಳ್ಳು ಅರ್ಧ ಸತ್ಯ ಇರಬಹುದು.

ಅದು ಗೊತ್ತಾಗಬೇಕಾದರೆ ಇನ್ನು ಏನು ಮಾಡಬೇಕು? ನಾವು ಯಾರನ್ನೇ ಶಿಕ್ಷೆಗೆ ಗುರಿ ಮಾಡಿ ಮಾಡದೇ ಇರಲಿ, ಕೊನೆಯ ಪಕ್ಷ ವಿಷಯ ಗೊತ್ತಾಗಬೇಕು. ನಾವು ಸಿಓಡಿ ತನಿಖೆ ಮಾಡಬಹುದು. ರೆಗ್ಯೂಲರ್ ಪೋಲೀಸ್‌ರವರದೇ ತನಿಖೆ ಮಾಡಿಸಬಹುದು. ಅವುಗಳ ಬಗ್ಗೆ, ಆ ಸಂಸ್ಥೆಗಳ ಬಗ್ಗೆ ನಮಗೆ ಒಂದು ಆಳವಾದ ಸಂಶಯವಿದೆ. ಅದಕ್ಕೆ ಮಾತು ಎತ್ತಿದ ಕೂಡಲೇ ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಹೇಳುತ್ತೇವೆ. ವಿರೋಧಪಕ್ಷದವರು ಅದನ್ನೇ ಹೇಳುತ್ತಾರೆ, ನಾವೂ ಅದನ್ನ ಹೇಳುತ್ತೇವೆ. ಹೊಸದಾಗಿ ಇದರಲ್ಲಿ ಏನೂ ಇಲ್ಲ. You have never invented anything new. If you had suggested such an invention, I would have certainly agreed. ಇವತ್ತು ಇಂತಹ ಅಪರಾಧಗಳು, ಗೋಲಿಬಾರ್ ಆಗಬಾರದು ಎಂದು ಆತ್ಮ ವಿಶ್ವಾಸವನ್ನು ನಾವು ಹೊಂದಿರುವವನು. ಗೋಲಿಬಾರ್‌ನಿಂದ ಈ ರಾಜ್ಯ ಆಳುವಂತಹ ಸ್ಥಿತಿ ಯಾವುದೇ ಪ್ರಜಾತಂತ್ರಕ್ಕೆ ಬರಬಾರದು. ಆದರೆ ಸಾಮಾನ್ಯ ಜನರ ಮಾನ, ಪ್ರಾಣ, ರಕ್ಷಣೆ ಮಾಡುವುದಕ್ಕೆ ನಾವು ಕೈ ಕಟ್ಟಿಕುಳುತುಕೊಳ್ಳಬಾರದು. ಅಲ್ಲಿ ಸೇರಿದಂತಹ ಜನರು ಬಸ್ಸುಗಳಿಗೆ ಕಲ್ಲು ಹೊಡೆದವರು ಯಾರು? ಏಕೆ ಬಂದಿದ್ದರು ಅದನ್ನು ನಾವು ಸುಮ್ಮನೆ ಊಹಾಪೋಹ ಮಾಡಿಕೊಂಡು ಮಾತನಾಡುವುದಕ್ಕೆ ಹೋದರೆ, ಮಾನ್ಯ ಶಿವಕುಮಾರ್‌ರವರು ಅದನ್ನೇ ಹೇಳಿದರು. ಮಾನ್ಯ ಕುಮಾರಸ್ವಾಮಿಯವರು ಏನು ಹೇಳಬಹುದು, ನಾನೇ ಪ್ರೆಸ್ ಸ್ಟೇಟಮೆಂಟ್‌ನಲ್ಲಿ ಏನು ಹೇಳಿರಬಹುದು. ಈ ಸ್ಟೇಟಮೆಂಟ್‌ಗಳಿಂದ ನಾವು ಸುಮ್ಮನೆ ಪರಸ್ಪರ ದೋಷಾರೋಪಣೆಯನ್ನು ಮಾಡಿಕೊಂಡು ಒಬ್ಬರ ಮುಖಕ್ಕೆ ಒಬ್ಬರು ಕೆಸರನ್ನು ಎರಚಬಹುದೇ ಹೊರತು ಸತ್ಯಾಂಶಗಳು ಗೊತ್ತಾಗುವುದಿಲ್ಲ. ಅದಕ್ಕೋಸ್ಕರ ಅದು ಗೊತ್ತಾಗಲಿ, ಅದು ನಮ್ಮ ಪಕ್ಷ ತಪ್ಪು ಮಾಡಿದ್ದರೆ ಗೊತ್ತಾಗಲಿ, ಕಾಂಗ್ರೆಸ್ ತಪ್ಪು ಮಾಡಿದರೆ ಗೊತ್ತಾಗಲಿ, ಬಿ.ಜೆ.ಪಿ.ಯವರು ತಪ್ಪು ಮಾಡಿದ್ದರೆ ಗೊತ್ತಾಗಲಿ, ನಾವು ಇದಕ್ಕೆ ಹಿಂಜರಿಯಬಾರದು. ತಪ್ಪು ಮಾಡಿರುವುದು ಗೊತ್ತಾಗಬೇಕು. ಇಂಥದ್ದಕ್ಕೆ ಹಿಂಜರಿಯಬಾರದು, ಧೈರ್ಯವಾಗಿ ನಾವು ಮುಂದಕ್ಕೆ ಹೋಗದಿದ್ದರೆ ಕ್ರಮೇಣ ರಸಾತಳಕ್ಕೆ ಹೋಗುತ್ತೇವೆ. ಅದನ್ನು ತಪ್ಪಿಸಬೇಕು. ಈ ರೀತಿಯಾಗಿ ನಾನು ಹೇಳುವುದು ನಾನು ಯಾರನ್ನೋ ಉಳಿಸಿಕೊಳ್ಳುವುದಕ್ಕೆ ಅಥವಾ ಚುನಾವಣೆಯಲ್ಲಿ ಜನರು ಭಯಭೀತರಾಗಿ ಜನರು ಬರದ ಹಾಗೆ ಮಾಡುವುದು ಆ ಭಾಷೆ ಗೊತ್ತಿಲ್ಲ. ಆ ವಿಚಾರಗಳು ನಮ್ಮ ತಲೆಗೆ ಬಂದಿಲ್ಲ. ಅದನ್ನು ಕೆಲವರು ಅನುಭವದಲ್ಲಿ ಹೇಳಬಹುದು. ನನಗಂತೂ ಆ ಅನುಭವ ಇಲ್ಲ. ಜನರನ್ನು ಭಯ ಭೀತರನ್ನಾಗಿ ಮಾಡಿ ಪೋಲೀಸರು ಜನರು ಓಟು ಮಾಡಲಿಕ್ಕೆ ಬರದ ಹಾಗೆ ಮಾಡುವುದಕ್ಕೆ ಎಲ್ಲರಿಗೂ ಸಾಧ್ಯವಿಲ್ಲ. ನನಗೆ ಅತ್ಯಂತ ಕ್ರೂರ ಶಿಕ್ಷೆ ಆಗಿರುವುದು ರಾಮನಗರದ ಜನರಿಂದ; ಇವರಿಂದ ಅಲ್ಲ. ನನ್ನ ಪಾರ್ಟಿ ಸೋತಿರುವುದು ನನಗೆ ದುಃಖವಾಗಿದೆ. ಆ ಸೋಲಿನ ಜವಾಬ್ದಾರಿಯನ್ನು ಹೋರುವುದಕ್ಕೆ ನಾನು ತಯಾರಿದ್ದೇನೆ. ನಾವೆಲ್ಲರೂ ಹೊರುವುದಕ್ಕೆ ತಯಾರಿದ್ದೇವೆ. ನಮ್ಮ ಸರ್ಕಾರ ತಯಾರಿದೆ. ಅದು ಸಂಖ್ಯೆಯ ದೃಷ್ಟಿಯಿಂದ ಆಗದೇ ಇರಬಹುದು. But morelly, the entire team here we own the responsibility. We feel hurt, we are pained by this punishment by the people. ನಮಗೆ ಅವರು ಏಕೆ ಶಿಕ್ಷೆ ಕೊಟ್ಟರು ಎಂಬುದನ್ನು ನಾವು ಆಲೋಚನೆಯನ್ನು ಮಾಡಬೇಕೇ ಹೊರತು ನಿಮ್ಮ

ನಿಲುವಳಿ ಸೂಚನೆಗೆ ಅಲ್ಲ; ನಾವು ಏಕೆ ಶಿಕ್ಷೆ ಅನುಭವಿಸಿದೆವು. ಯಾವುದೇ ಕಾರಣವಿಲ್ಲದೆ ಈ ಶಿಕ್ಷೆ ಅನುಭವಿಸಿದೆವು. ಅದಕ್ಕೆ ನಾನು ಪಕ್ಷದ ರಾಜಕಾರಣವನ್ನು ಬಿಟ್ಟು ಮಾನ್ಯ ನಂಜೇಗೌಡರೇ ಇನ್ನು ಸ್ವಲ್ಪ ಮುಂದಕ್ಕೆ ಹೋಗಿ ಏಕೆ ಹೀಗೆ ಆಯಿತು. ಏನು ತಪ್ಪು ಮಾಡಿದ್ದೇವೆಂಬುದನ್ನು ನಾವು ತಿಳಿದುಕೊಳ್ಳಬೇಕು. ಏನು ಆಯಿತು? ಏಕೆ ಆಯಿತು ಎಂಬುದನ್ನು ತಿಳಿದುಕೊಳ್ಳಬೇಕು. ಇವತ್ತು ರಾಜ್ಯ ನಮ್ಮ ಕೈಯಲ್ಲಿದೆ. ನಾವು ತಪ್ಪು ಮಾಡಿದ್ದರೆ ತಿದ್ದುಕೊಳ್ಳುವುದಕ್ಕೆ ಅವಕಾಶವಿದೆ. ಕೆಡಿಸಿಕೊಳ್ಳುವುದಕ್ಕೂ ಇದೆ. ಆ ಜನರ ಮನಸ್ಸಿಗೆ ಏಕೆ ನೋವಾಯಿತು ಎಂಬುದನ್ನು ತಿಳಿದುಕೊಳ್ಳಬೇಕು. ಚಿಕ್ಕನಾಯಕನ ಹಳ್ಳಿಯಲ್ಲಿ ಏಕೆ ಹಾಗೆ ಆಯಿತು? ಎಲ್ಲಾ ಪಾರ್ಟಿಯವರೂ ಧುಮುಕಿ ಹೊಡೆದರು. ಒಬ್ಬ ಪಕ್ಷೇತ್ರ ಅಭ್ಯರ್ಥಿ ಗೆದ್ದರು. ಅದನ್ನೂ ನಾವು ಯೋಚನೆ ಮಾಡಬೇಕು. ವಿಧಾನಪರಿಷತ್ತಿನಲ್ಲಿ ಬಿ.ಜೆ.ಪಿ.ಯವರು ಏಕೆ ಬಂದರು? ಅದು ಅವರ ಸೀಟು ಇತ್ತು ಅವರು ಗೆದ್ದರು. ಅದಕ್ಕೆ ಇವುಗಳನ್ನು ನಿರ್ವಿಕಾರ ಮನಸ್ಸಿನಿಂದ ಸಮಾಧಾನ ಪಟ್ಟುಕೊಳ್ಳುವುದು, ನಮಗೆ ನಾವೇ ಸಮಾಧಾನವನ್ನು ಹೇಳಿಕೊಳ್ಳುವುದು ಅಲ್ಲ. ಸುಮ್ಮನೆ ಅವನು ಹಾಗೆ ಮಾಡಿ ಬಿಟ್ಟ, ಹೀಗೆ ಮಾಡಿಬಿಟ್ಟ ಎಂದು ಏಕೆ? ಇವತ್ತು ರಾಷ್ಟ್ರದಲ್ಲಿ ಬಿ.ಜೆ.ಪಿ.ಯ ವಿರುದ್ಧವೇ ಒಂದು ರಾಜಕೀಯ ಶಕ್ತಿ ಏಕೆ ಬೆಳೆಯುತ್ತಿದೆ; ಕಾರಣಗಳು ಬೇರೆ ಬೇರೆ, ನಾನು ಮೊನ್ನೆ ಯು.ಎಫ್.ನ ಸ್ಟೇರಿಂಗ್ ಕಮಿಟಿಗೆ ಹೋಗಿದ್ದಾಗ ಅಲ್ಲಿ ಎಲ್ಲಾ ಪಾರ್ಟಿಗಳು ಇತ್ತು. ಅಲ್ಲಿ ವಯಸ್ಸಾದವರು, ಅನುಭವಸ್ಥ ಮುಖ್ಯಮಂತ್ರಿಗಳು ಎಲ್ಲಾ ಹೇಳಿದರು. ಇವತ್ತು ಮಾನ್ಯ ದೇವೇಗೌಡರು ಪ್ರಧಾನಮಂತ್ರಿಯಾಗಿ ಇದ್ದಾರೆ. ದೇಶ ಯಾವ ಗಂಡಾಂತರದಲ್ಲಿದೆ, ನಾವು ಎಲ್ಲಾ ಈ ಗಂಡಾಂತರವನ್ನು ತಪ್ಪಿಸುವುದಕ್ಕೆ ಕೆಲಸ ಮಾಡಬೇಕೆಂದು ಹೇಳಿದರು. ಎಲ್ಲರೂ ಕಾಂಗ್ರೆಸ್ ಸಪೋರ್ಟ್ ಮಾಡಿದರು. ಕೆಲವು ಸಾರಿ ಇವರು ವಾಕ್ ಔಟ್ ಮಾಡುವಾಗ ನಮಗೆ ನಗೆ ಬರುತ್ತದೆ. ಬ್ಯಾಕ್‌ಗ್ರೌಂಡ್‌ನಲ್ಲಿ ಮಾನ್ಯ ಸೀತಾರಾಂ ಕೇಸರಿಯವರು, ಮಾನ್ಯ ನರಸಿಂಹರಾವ್‌ರವರು, ಇಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಾಕ್ ಔಟ್, ಅವರು ವಾಕ್ ಇನ್, ಅವರು ಸಪೋರ್ಟ್ ಇವರು ಅಪೋಸ್ ಇದು ಏನು? ಇಲ್ಲಿ ಯಾವುದಾದರೂ ತರ್ಕಬದ್ಧರಾಗಿ ಈಗ ನಿಮ್ಮ ಪಾರ್ಟಿ ಬಗ್ಗೆ ಗೌಡರೇ, ನನ್ನದು ಏನು ಆರ್ಗ್ಯುಮೆಂಟ್, Logically you are there where you are and you will continue to be here where you are and we will continue to be there where we are. But about these friends I have failed to understand what is there...

MR. SPEAKER:- Very uncharitable;

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಇಲ್ಲಿ ನೀವು ನೂರು ತಪ್ಪು ಮಾಡಿದರೂ ಕಣ್ಣು ಮುಚ್ಚಿ ಕುಳಿತುಕೊಳ್ಳಬೇಕೆಂದು ಏನೂ ಇಲ್ಲ. ನಾವು ನಿಮ್ಮ ಗುಲಾಮರು ಅಲ್ಲ, ನೀವು ತಪ್ಪು ಮಾಡಿದಂತಹ ಸಂದರ್ಭದಲ್ಲಿ ನಿಮ್ಮ ಕಿವಿ ಹಿಂಡಿ ಹೇಳುವಂತಹ ಶಕ್ತಿಯನ್ನು ನಮಗೆ ಜನರು ಕೊಟ್ಟಿದ್ದಾರೆ. ಅದಕ್ಕಾಗಿ ನಾವು ಯಾವಾಗ ಏನು ಹೇಳಬೇಕು, ಯಾವಾಗ ವಾಕ್ ಔಟ್ ಮಾಡಬೇಕು, ಅದನ್ನು ಮಾಡುತ್ತಿದ್ದೇವೆ. ಎಷ್ಟು ಹೇಳಿದರೂ ನಿಮ್ಮ ಕಿವಿಯಲ್ಲಿ ದಪ್ಪ ಚರ್ಮವಿ ಎಂದರೆ ನಾವು ಏನು

ಹೇಳಿದರೂ ನಿಮಗೆ ನಾಟುವುದೇ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್:- ನಾವು ವಾಸ್ತವಿಕ ಸ್ಥಿತಿಯನ್ನು ಹೇಳುತ್ತಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ:- ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನನ್ನ ಲಾಜಿಕ್ ಹೇಳುತ್ತೇನೆ. ನಿಮ್ಮ ಲಾಜಿಕ್ ಯುನೈಟೆಡ್ ಫ್ರಂಟ್ ಆ ಲಾಜಿಕ್ ನಾನು ಹೇಳುತ್ತೇನೆ. ಆವತ್ತು ನೀವು ಇರಬೇಕು.

ಶ್ರೀ ಜೆ.ಹೆಚ್. ಪಟೇಲ್:- ಆಯಿತು,

ಅಧ್ಯಕ್ಷರು:- ಅವರು ಹೇಳಿದ್ದು, ಒಂದು ಸರಿ ಹೋಗಲಿಲ್ಲ. ನೀವು ಪರ್ಮನೆಂಟ್ ಆಗಿ ಮಾನ್ಯ ನಂಜೇಗೌಡರನ್ನು ಅಲ್ಲೆ ಫಿಕ್ಸ್ ಮಾಡಿ ಬಿಟ್ಟರಿ.

ಶ್ರೀ ಜೆ.ಹೆಚ್. ಪಟೇಲ್:- ನಾನು ಮಾನ್ಯ ನಂಜೇಗೌಡರಿಗೆ ಅಲ್ಲ ಹೇಳಿದ್ದುದು, ಅವರ ಪಾರ್ಟಿಗೆ ಮಾನ್ಯ ಈಶ್ವರಪ್ಪನವರಿಗೆ ಮತ್ತು ಮಾನ್ಯ ರಾಮಕೃಷ್ಣರವರಿಗೆ,

ಶ್ರೀ ವಾಟಾಳ್ ನಾಗರಾಜ್:- ಇತ್ತೀಚೆಗೆ ಮಾನ್ಯ ನಂಜೇಗೌಡರ ಮೇಲೆ ಏನಾದರೂ ಅನುಮಾನ ಬಂದಿದೆಯೇ?

ಅಧ್ಯಕ್ಷರು:- ಬಂದರೆ ನಿಮ್ಮ ಇಬ್ಬರ ಬಗ್ಗೆ ಒಟ್ಟಿಗೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಬಹಳ ನಂಬಿಕೆ ಏನೋ ಇದೆ, ಅನುಮಾನ ಬಂದಿದೆಯೋ?

ಶ್ರೀ ಜೆ.ಹೆಚ್. ಪಟೇಲ್:- ನನಗೂ ಅವರು ಅಲ್ಲಿ ಇರಬಾರದು ಎಂದು ಆಸೆ, ಆದರೆ ಏನು ಮಾಡೋಣ ಅವರು ಅಲ್ಲೇ ಇದ್ದಾರೆ. ಅದು ಏನೇ ಇರಲಿ, ಇವತ್ತು ಸೀಮಿತವಾಗಿ ಹೆಜ್ಜಾಲ ಫೈರಿಂಗ್ ಮತ್ತು ಮುಳಬಾಗಿಲು ಫೈರಿಂಗ್ ಲಾಕಪ್ ಡೆತ್ ಈ ಕೇಸ್‌ಗಳ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎಂದರೆ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಎರಡು ಕೇಸ್‌ಗೆ ಮಾಡಿದ್ದೇವೆ. ಇನ್ನೊಂದು ಸಿಓಡಿ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ. ಇನ್ನು ಜನರಲ್ ಲಾ ಆರ್ಡರ್ ಸಿಚ್ಯೂಯೆಷನ್ ಬಗ್ಗೆ ಹೇಳುವಾಗ ಕೆಲವು ಪೊಲೀಸ್ ಆಫೀಸರ್‌ಗಳ ಬಗ್ಗೆ ನಮ್ಮ ಶ್ರೀರಾಮು ರೆಡ್ಡಿಯವರು ಅಮಾನುಷವಾದಂತಹ, ಭಯಂಕರವಾದಂತಹ ಎಂದು ಕಾರ್ಮಿಕರ ಮೇಲೆ ಇವೆಲ್ಲಾ ಭಾಷೆಗಳು ನಮಗೆ ಗೊತ್ತು. ಮಾನ್ಯ ಶ್ರೀರಾಮರೆಡ್ಡಿಯವರೇ, ಕಾರ್ಮಿಕರದ್ದು If you are a real friend of them, there is a way to solve. Velliyappa is not my relative. He may be an industrialist; he may be crooked or anything. I don't want to say anything about him. He is not a Member of this House.

6.20 ಪಿ.ಎಂ.

ಅಲ್ಲಿಯ ಕಾರ್ಮಿಕರ ಪರಿಸ್ಥಿತಿ ಹೇಗಾಯಿತು ಎಂದು ನಮ್ಮ ಲೇಬರ್ ಕಮೀಷನರನ್ನು, ಕಾರ್ಮಿಕ ಮಂತ್ರಿಗಳನ್ನು ಕೇಳಿದೆ. ಇದು ಇವತ್ತಿನದು ಏನು ಅಲ್ಲ. ನಾಲ್ಕು ವರ್ಷಗಳ ಸಮಸ್ಯೆ. ಅವರ ಹತ್ತಿರ ಮಾತುಕತೆ ಆಡಿದ್ದು ಬಿಟ್ಟಿದ್ದು ಅವರು ಏನೋ ಹೇಳಿದ್ದು ಇವರು ಏನೋ ಹೇಳಿದ್ದು ಹೀಗೆ ಮಾಡಿಕೊಂಡು ಮಾಡಿಕೊಂಡು ನನಗೆ ಆಶ್ಚರ್ಯ ಆಗಿದ್ದು ಏನು ಏನೆಂದರೆ 6ನೇ ತಾರೀಖು ನಮ್ಮ ಚುನಾವಣೆಯ ಪ್ರಚಾರ ಕ್ಲೋಸ್ ಮಾಡಬೇಕು. 3ನೇ ತಾರೀಖು ನಮ್ಮ ಪೋಲೀಸ್ ಆಫೀಸರನ್ನು ಸುಮ್ಮನೆ 10- 15 ನಿಮಿಷ ರಸ್ತಾ ರೋಕೋ ಅದರೊಳಗೆ ಜೆನಿಯಸ್ ಆಗಿ ಹೇಳುವುದಾದರೆ, ಚುನಾವಣೆ ಬಂದಿದೆ. ಇವೊತ್ತು ಮನುಷ್ಯನಿಗೆ ಆಸೆ ಇರಬೇಕು, ಆಸೆ ಇದ್ದರೆ ಅದು ತಪ್ಪು ಅಲ್ಲ. ಆದ್ದರೆ ಆಸೆಯನ್ನು ಈಡೇರಿಸಿಕೊಳ್ಳುವುದಕ್ಕೆ ನಾವು 15 ನಿಮಿಷಗಳ ಕಾಲ ರಸ್ತೆಯಲ್ಲಿ ಕುಳಿತು ಎದ್ದು ಬಿಡುತ್ತೇವೆಂದು ಪೋಲೀಸ್‌ನವರನ್ನು ಕೇಳಿದರು. ಪೋಲೀಸ್‌ನವರು ಆಯಿತು ಎಂದು ಹೇಳಿದರು. ಆದರೆ 15 ನಿಮಿಷಗಳು ಹೋಗಿ ಗಂಟೆಯಾಯಿತು. ಇದರಿಂದ ನೂರಾರು ವಾಹನಗಳು ಜಮಾಯಿಸಿತು. ಯಾವಾಗ ಇಂತಹ ಕಂಜೆಷನ್ ಆಗುತ್ತದೆ ಕ್ರೌಡ ಆಗುತ್ತದೆ ಆಗ there will be tension and violence and there will be potential for violence. ನಾನು ಅವತ್ತೇ ಪೋಲೀಸ್‌ನವರಿಗೆ ಹೇಳಿದೆ ನಿಮಗೆ ಏನಾದರೂ ಬುದ್ಧಿ ಇದೆಯೇ ಎಂದು ಅದಕ್ಕೆ ಪೋಲೀಸ್‌ನವರು 15 ನಿಮಿಷ ಕುಳಿತು ಎದ್ದು ಬಿಡುತ್ತೇವೆಂದು ಹೇಳಿದರು. ಲಾ ಅಂಡ್ ಆರ್ಡರ್ ಮೈನ್‌ಟೈನ್ ಮಾಡಬೇಕಾದರೆ, ಕಾರ್ಮಿಕರ ಸಮಸ್ಯೆಯನ್ನು ಅರ್ಥಮಾಡಿಕೊಂಡು ಹೇಗೆ ಬಗೆಹರಿಸಬೇಕೆಂಬುದು ಒಂದು ಅಥವಾ ಈ ಸಂದರ್ಭವನ್ನು ಯಾರಾದರೂ ಮಿಸ್‌ಯೂಸ್ ಮಾಡಿಕೊಂಡರೆ ಏನು ಅನಾಹುತವಾಗುತ್ತದೆ ಎನ್ನುವುದು ಅಷ್ಟು ತಲೆ ಇಲ್ವಾ ಅವರಿಗೆ? ಅದಕ್ಕೇ ನಾನು ಅವರಿಗೆ ಹೇಳಿದೆ ಇದು ಸರಿಯಾಗಿ ಇದಯೇ ಎಂದು. ಆದಕ್ಕೂ ನಾಳೆ ಅವರಿಗೆ ಏನು ಫೈಂಡಿಂಗ್ ಅಗುತ್ತದೆಯೇ ಆಗಲಿ ಆ ಮಾತು ಬೇರೆ. ಮಾನ್ಯ ಅಧ್ಯಕ್ಷರೆ, ತಾವು ವಿಚಾರ ಮಾಡಿ ಬಹಳ ಸಣ್ಣ ಸಣ್ಣ ಹಿಂಸೆಗೆ ಜನ ತೊಡಗಿದ್ದಾರೆ. ಒಬ್ಬ ವೈಸ್ ಛಾನ್ಸಲರ್ ಗಲಾಟೆ ಮಾಡಿದ ವಿದ್ಯಾರ್ಥಿಗಳು ನುಗ್ಗಿದರು ಪೋಲೀಸಿನವರುಬೇಕು. ಆಸ್ಪತ್ರೆಯಲ್ಲಿ ಪೋಸ್ಟ್‌ಮಾರ್ಟ್ಯಮ್ ಸರಿಯಾಗಿ ಮಾಡದೆ ಇದ್ದರೆ, ಒಬ್ಬ ಡಾಕ್ಟರ್‌ಗೆ ಹೊಡೆಯುವುದಕ್ಕೆ ಹೋದರೆ, ಕೃಷಿ ಇಲಾಖೆಯಲ್ಲಿ ಗೊಬ್ಬರವನ್ನು ಸರಿಯಾಗಿ ಮಾರಾಟವನ್ನು ಮಾಡಲಿಲ್ಲವೆಂದು ಜನರು ಹೋಗಿ ಅಲ್ಲಿ ಗಲಾಟೆ ಮಾಡಿದರೆ, ಕೆ.ಇ.ಬಿ. ಬಿಲ್ ಕಟ್ಟಿಲ್ಲ, ಇಂಜಿನಿಯರ್ ಏನೋ ಅಲ್ಲಿ ಕೇಳಿದ ಇದಕ್ಕೆಲ್ಲಾ ಪೋಲೀಸ್‌ನವರು ಬೇಕು. ಏಕೆ ಹೀಗಾಗಿದೆ? ಪ್ರತಿಯೊಂದನ್ನು ಪೊಲೀಸ್ ತರಬೇಕು. ಆದರೆ ಅವನು ಒಬ್ಬ ನೃತದೃಷ್ಟ ಅವನನ್ನು ನೋಡಿದರೆ ಜನರಿಗೆ ಅಸಹ್ಯ ಆಗುತ್ತದೆ. ಪೋಲೀಸ್ ಎಂದರೆ ಕೆಲಸಕ್ಕೆ ಬಾರದವ ಅವನಿಗಿಂತಲೂ ಹೆಚ್ಚು ಲಕ್ಷಗಟ್ಟಲೆ ದುಡ್ಡು ಹೊಡೆದ ಇಂಜಿನಿಯರ್ ತ್ರೀ ಪೀಸ್ ಶೂಟ್ ಹಾಕಿಕೊಂಡವನು ಚೆನ್ನಾಗಿ ಕಾಣುತ್ತೇನೆ. ಇವನು ಇಡೀ ಸಮಾಜದ ಎಲ್ಲಾ ಕಷ್ಟದಲ್ಲಿ ಭಾಗಿ ಆಗತಕ್ಕಂತಹವನು ಅಷ್ಟೇ ಕಷ್ಟಗಳನ್ನು ನಿರ್ಮಾಣ ಮಾಡತಕ್ಕವನು. ಎರಡೂ ಇದೆ. They not only solve the problem they create problems. ಇದಕ್ಕೆ ಇದನ್ನು ನಾವು ಆ ದೃಷ್ಟಿಯಿಂದ ನೋಡಿದ್ದೇವೆ. ಯಾವನೋ ಒಬ್ಬ ಪೊಲೀಸ್ ಕಾರಣ, ಇವನೇ ಕಾರಣವೆಂದು ಹೇಳುವುದಕ್ಕೆ ಹೋಗಬೇಡಿ. ಇದು ಹೇಗೆ ಎನ್ನುವುದನ್ನು ಎಲ್ಲರೂ ಯೋಚಿಸಬೇಕು, ಆಲೋಚನೆ ಮಾಡಬೇಕು.

6ನೇ ತಾರೀಖು ಚುನಾವಣೆಯ ಪ್ರಚಾರ ಮುಗಿಯುತ್ತದೆ. 3ನೇ ತಾರೀಖು ಫೈರಿಂಗ್. ನನಗೆ ಫೈರಿಂಗ್ ಎಂದರೆ instinctively I don't like firing. ಇನ್ನೂ ಬೇಕಾದರೆ 10,000 ಜನರನ್ನು ಅರೆಸ್ಟ್ ಮಾಡಿ, ಜೈಲಿಗೆ ಹಾಕಿ. ಆದರೆ ಗುಂಡು ಹಾಕಿ ಕೊಲ್ಲಬೇಡಿ. ಏಕೆಂದರೆ ಒಂದೇ ಒಂದು ಪ್ರಾಣವನ್ನು ನಾವು ವಾಪಸ್ಸು ಕೊಡುವುದಕ್ಕಾಗುವುದಿಲ್ಲ. ಎಷ್ಟೇ ಪರಿಹಾರವನ್ನು ಕೊಡಬಹುದು. We have no right to kill a man because we have no authority to create a man. Who are you to kill when you have never created him? ಸರ್ಕಾರ ಏನು ಎಂದರೆ You can only protect him. If he errs you can punish him and you keep him away from the society.

ಆ ದೃಷ್ಟಿಯಿಂದ ಈ ಗೋಲಿಬಾರ್ ಆದದ್ದು ನಿಜವಾಗಿಯೂ ನನ್ನ ಮನಸ್ಸಿಗೆ ದುಃಖವಾಗಿದೆ. ಅದು ಆಗಬಾರದಿತ್ತು ಆದರೆ ಅಲ್ಲಿಯ ವಾತಾವರಣವನ್ನು ಕೇಳಿದರೆ ಅದನ್ನು ಅವರ ಮಾಡುವುದು ಅನಿವಾರ್ಯ ಬೇರೆ ಏನು ಮಾಡುವುದಕ್ಕೆ ಸಾಧ್ಯವಿರಲಿಲ್ಲ. ಇನ್ನು ಹೆಚ್ಚಿನ ಹಿಂಸೆ ಆಗುವುದಕ್ಕೆ ಸಾಧ್ಯತೆ ಇತ್ತು. ಅದರಿಂದ ಅದಕ್ಕೆ ನಾನು who am I to judge? ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಆಜ್ಞೆ ಮಾಡಿದೆ. ಆಮೇಲೆ ಇನ್ನು ಅವರು ಪ್ರಸ್ತಾಪ ಮಾಡಿದ ಸದನ ಸಮಿತಿ. ಇಂತಹ ವಿಷಯಗಳಲ್ಲಿ, ನಾನು ಲೋಕಸಭೆಯ ಸದನ ಸಮಿತಿಯಲ್ಲಿ ಹಿಂದೆ ಇದ್ದು ಇಲ್ಲಿಯೂ ಕೂಡ ಸದನ ಸಮಿತಿಯಲ್ಲಿ ಇದ್ದು ನೋಡಿದ್ದೇನೆ. ಸದನ ಸಮಿತಿ ರಚನೆಯನ್ನು ಯಾವುದಕ್ಕೆ ಎಂದರೆ ಯಾವುದಾದರೂ ಒಂದು ಇಲಾಖೆಯಲ್ಲಿಯೋ, ಮತ್ತೊಂದು ಕಡೆಗಳಲ್ಲಿಯೋ ರೆಕಾರ್ಡ್ಸ್ ಮೇಲೆ ಆಫೀಸರ್ಸ್‌ಗಳನ್ನು ಸಮನ್ಸ್ ಮಾಡಿ, ವಿಚಾರ ಮಾಡಿ ತಪ್ಪು ಯಾರದು ಇದೆ ಎಂದು ಪಾಯಿಂಟ್ ಔಟ್ ಮಾಡುವುದಕ್ಕೆ ಸದನ ಸಮಿತಿಯು ರೆಲವೆಂಟ್ ಆಗುತ್ತದೆಯೇ ಹೊರತು ಬೇರೆದಕ್ಕೆ ಅಲ್ಲ. ಗೋಲಿಬಾರ್‌ಗೆ ಸದನ ಸಮಿತಿ ಎಂದು ಶ್ರೀ ವೈ. ರಾಮಕೃಷ್ಣರವರು ಅಲ್ಲ.

ಶ್ರೀ ವೈ. ರಾಮಕೃಷ್ಣ:- ಮಾನ್ಯ ಅಧ್ಯಕ್ಷರೆ, ಇದರಲ್ಲಿ ರಾಜಕೀಯ ಇದೆಯೋ, ಇಲ್ಲವೋ ಎಂದು ತಿಳಿದುಕೊಳ್ಳಬೇಕು. ಅದಕ್ಕೋಸ್ಕರವಾಗಿ ನಾನು ಹೇಳಿದೆ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಈಗ ನನ್ನ ಉತ್ತರ ಮುಗಿದ ಮೇಲೆ ನೀವಿಬ್ಬರು ಇನ್ನೂ ಒಂದು ಗಂಟೆ ಕುಳಿತುಕೊಂಡು ಸರಿಯಾಗಿ ಉತ್ತರವನ್ನು ಕೊಟ್ಟು ಯಾರು ಎಲ್ಲಿ ಇದ್ದಿರಿ ಎಂದು ಸ್ವಲ್ಪ ಕನ್ವಿನ್ಸ್ ಮಾಡಿಕೊಂಡು ಮನೆಗೆ ಹೋಗಿ. ಆದರೆ ಇವತ್ತು ಮಾನ್ಯ ಅಧ್ಯಕ್ಷರೆ ತಮ್ಮ ಎದುರಿಗೆ ನನ್ನ ಕರ್ತವ್ಯ ಏನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಸ್ವಲ್ಪ ಈ ವಿಷಯ ಸಿರಿಯಸ್ ಆಗಿದೆ ದಯವಿಟ್ಟು ವಿಷಯಾಂತರವನ್ನು ಮಾಡಬೇಡಿ.

ಶ್ರೀ ಜೆ.ಹೆಚ್. ಪಟೇಲ್:- ಮುಖವನ್ನು ಕೆಡಿಸಿಕೊಂಡು ಹೇಳಿದರೆ ಭಾರೀ ವಿಷಯ ಸೀರಿಯಸ್ ಆಗುವುದಿಲ್ಲ. ನನಗೆ ಗೊತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಮುಖವನ್ನು ಕೆಡಿಸಿಕೊಂಡು ಹೇಳಿ ಎಂದು ಹೇಳುತ್ತಿಲ್ಲ. ಸೀರಿಯಸ್‌ಲಿ ಹೇಳಿ ವಿಷಯಾಂತರವನ್ನು ಮಾಡಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್:- ವಿಷಯವನ್ನು ವಿಷಯಾಂತರ ಮಾಡುತ್ತಿಲ್ಲ. ಅನವಶ್ಯಕವಾಗಿ ಎಗ್ಸಾಜರೇಟ್ ಮಾಡಿದ್ಧ ಕೂಡಲೇ ಗಾಬರಿಯೂ ಕೂಡ ಆಗುವುದಿಲ್ಲ.

ಅಧ್ಯಕ್ಷರು:- ಮಾನ್ಯ ಮುಖ್ಯ ಮಂತ್ರಿಗಳು ಗಾಬರೀನೇ ಆಗುವುದಿಲ್ಲ ನನಗೆ ಗೊತ್ತಿದೆ.

ಶ್ರೀ ಜೆ.ಹೆಚ್. ಪಟೇಲ್:- ನೀವು ಇರುವುದರಿಂದ ನನಗೆ ಆ ರೀತಿಯಾಗುವುದಿಲ್ಲ. ಕೊನೆಯ ಪಕ್ಷ ನೀವು ಅರ್ಥವಾದರೂ ಮಾಡಿಕೊಳ್ಳುತ್ತೀರಿ. ನಾವು ಬಹಳ ಸಾರಿ ಅಳಬೇಕಾದಂತಹ ಸಮಯದಲ್ಲಿ ನಾವು ನಗಬೇಕಾಗುತ್ತದೆ. ಅಳುವುದನ್ನು ಮರೆಯುವದಕೋಸ್ಕರವಾಗಿ ಮಾನ್ಯ ವಿರೊಧ ಪಕ್ಷದ ನಾಯಕರಿಗೆ ಆ ಸ್ವಭಾವ ಇಲ್ಲದೇ ಇರಬಹುದು. ನಗಬೇಕಾದರೆ ಅವರು ಅಳುತ್ತಿದ್ದರೆ ನಾನೇನು ಮಾಡುವುದಕ್ಕೆ ಆಗುತ್ತದೆ? ಅದರಿಂದ ಗೋಲಿಬಾರ್ ಲಾ ಅಂಡ್ ಆರ್ಡರ್ ಇದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡುವುದು ನಾನೇನು ಹೊಸದಾಗಿ ಮಾಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಆದಷ್ಟು ಬೇಗ ಮಾಡಿ ಎಂದು; ಅದು ಬೇಗ ಆಗುವಂತೆ ನೋಡಿಕೊಳ್ಳುತ್ತೇನೆ. ಏಕೆಂದರೆ ಜ್ಯುಡಿಷಿಯಲ್ ಎನ್‌ಕ್ವೈರಿಗಳು ವರ್ಷಾನುಗಟ್ಟಲೆ ಸುಮ್ಮನೆ ನಡೆಯುತ್ತದೆ. ಮೊದಲನೆಯದಾಗಿ ಹೈಕೋರ್ಟ್‌ನವರು ನಮಗೆ ನ್ಯಾಯಾಧೀಶರನ್ನು ಸ್ಪೇರ್ ಮಾಡಬೇಕು. ಇದನ್ನು ನಾವು ಮಾಡುವುದಕ್ಕೆ ಆಗುವುದಿಲ್ಲ. ಅವರು ಸ್ಪೇರ್ ಮಾಡಿದ ಮೇಲೆ ಅವರಿಗೆ ಆಫೀಸ್ ಮಾಡುವಂಥದ್ದು ಪ್ರೊಸಿಜರ್ ಇದೆಯಲ್ಲಾ ಅದು ಏನೇ ಇರಲಿ ಇದಕ್ಕೆ ಎಲ್ಲಾ ನಾವು ಗಮನ ಕೊಡಬೇಕಾಗುತ್ತದೆ. ಯಾವುದೇ ಕಾರಣದಿಂದ ಮಾನ್ಯ ಸದಸ್ಯರುಗಳು, ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಸದಸ್ಯರುಗಳು ಸ್ವಲ್ಪ ಜ್ಯುಡಿಷಿಯಲ್ ಎನ್‌ಕ್ವೈರಿಯ ರಿಪೋರ್ಟ್ ಬರುವವರೆಗೆ ತೆಗೆದುಕೊಳ್ಳಿ. ಈ ಮಧ್ಯೆ ಉಳಿದಿದ್ದು ಎಲ್ಲಾ ರಾಜ್ಯದಲ್ಲಿ ಬೇರೆ ಬೇರೆ ಅನಾಹುತಗಳು ಆಗಿದೆ ಅದನ್ನೆಲ್ಲಾ ರಾಜ್ಯಪಾಲರ ಭಾಷಣದ ಮೇಲೆ ಹೇಳಿ. ಆದರ ಮೇಲೆ ಉತ್ತರವನ್ನು ಕೊಡುತ್ತೇವೆ. ಸಮಾಧಾನವಾದರೆ ಸಮಾಧಾನ ಪಟ್ಟುಕೊಳ್ಳಿ. ಇಲ್ಲದೇ ಹೋದರೆ ಬೈದು ಹೋಗುವುದಾದರೆ ಬೈದು ಹೋಗಿ. ಆದರೆ ನಾವು ಇರುವಂತೆ ಇರುತ್ತೇವೆಯೇ ಹೊರತು ನಿಮ್ಮ ಹೆದರಿಕೆ ಅಥವಾ ನಿಮ್ಮ ಥ್ರೆಟ್ಸ್‌ಗೆ ಸರ್ಕಾರ ಯಾವುದೇ ರೀತಿಯಲ್ಲಿ ಜಗ್ಗುವುದಿಲ್ಲ. ಜಗ್ಗುವುದಕ್ಕೆ ಸಮಯವೂ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಎಷ್ಟು ಮನನೊಂದು ಹೇಳಿದ್ದಾರೋ ಅಷ್ಟೇ ಜವಾಬ್ದಾರಿಯಿಂದ ಹೇಳುತ್ತೇನೆ. ಈ ವಿಷಯದ ಬಗ್ಗೆ ಸರ್ಕಾರ ಸಂಪೂರ್ಣ ಪ್ರಾಮಾಣಿಕವಾಗಿ ತೀರ್ಮಾನವನ್ನು ಮಾಡುತ್ತದೆ. ಪಕ್ಷದ ರಾಜಕೀಯ ಬೇಡವೆಂದು ನಾನು ಹೇಳಿದ್ದೇನೆ. Cruelest punishment has been given to my party. ಕಾಂಗ್ರೆಸ್ ಪಕ್ಷ ಗೆದ್ದಿದೆ, ಬಿ.ಜೆ.ಪಿ.ಗೊಂದಿದೆ ಎಂದು ಅಲ್ಲ. ನನ್ನ ಪಕ್ಷ ಹೋಗಿದೆ ಅದರ ಜವಾಬ್ದಾರಿ ಬಗ್ಗೆ ಗೊತ್ತಿದೆ ಅದು ಹೇಗೆ I own it and all of us own it. We own. ಸುಮ್ಮನೆ ಶ್ರೀ ಶಿವಕುಮಾರ್‌ರವರು ಅವರ ಇವರ ಹೆಸರನ್ನು ಹೇಳುವುದು ಬೇಕಾಗಿಲ್ಲ. We will try to amend ourselves and try to prove that our defeat will be rectified. ನಮಸ್ಕಾರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ನಾವು ಎತ್ತಿದಂತಹ ಒಂದು ಚರ್ಚೆಗೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಕೆಲವು ಗಂಭೀರವಾಗಿರುವಂಥದ್ದಕ್ಕೆ ರಿಸರ್ವ್ ಇಟ್ಟುಕೊಂಡಿದ್ದಾರೆ. ಏಕೆಂದರೆ ನಾನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದೆ ಅದರಲ್ಲಿ ಮುಳುಬಾಗಿಲು, ಸಕಲೇಶಪುರ ಇರಬಹುದು, ಬೇರೆ ಕಡೆ ಮಂಡ್ಯ ಜಿಲ್ಲೆದೇ ಇರಬಹುದು. ಜಗಳೂರು ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಹೀಗೆ ಅನೇಕ ಇದೆ. ಫೈರಿಂಗ್ ಕೂಡ ಇದೆ. ಆದರೆ ಒಂದು ಮಾತನ್ನು ಅವರೇ ಸ್ವತಃ ಒಪ್ಪಿಕೊಂಡಿದ್ದಾರೆ. ಜ್ಯುಡಿಷಿಯಲ್ ಎನಕ್ವೈರಿ ಏತಕ್ಕೆ ನಾವು ಮಾಡಿದ್ದೇವೆಂದರೆ ನಮ್ಮ ಕೆಲವು ಪೋಲಿಸ್ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನತಕ್ಕಂಥಹ ಒಂದು ಸಂಶಯ ಬಂದ ಕಾರಣ ಇದು ಜ್ಯುಡಿಷಿಯಲ್ ಎನ್‌ಕ್ವೈರಿ ನಾವು ಮಾಡಿದ್ದೇವೆ ಎಂದು ಆದಕ್ಕೇ ನಾನು ಕೇಳಿದ್ದು ಯಾರು ತಪ್ಪು ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಈಗಾಗಲೇ ಹೇಳಿದ್ದಾರೆ. ನಾವೇನೂ ಡಿ.ಜಿ.ಪಿ.ಯವರು ತಪ್ಪು ಮಾಡಿದ್ದಾರೆ ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳಿಲ್ಲ. ನಾನೇನು ಡಿ.ಐ.ಜಿ.ಯವರು ತಪ್ಪು ಮಾಡಿದ್ದಾರೆಂದು ಹೇಳಿಲ್ಲ, ಕೆಳಗಿನ ಅಧಿಕಾರಿಗಳು ರಾಜಕಾರಣಿಗಳನ್ನು ಖುಷಿಪಡಿಸುವುದಕ್ಕೆ ತಕ್ಷಣ ಏನು ಆ್ಯಕ್ಟ್ ಮಾಡಿ ಫೈರಿಂಗ್ ಮಾಡಿದರು ಅಂತಹ ಸಬ್ ಇನ್‌ಸ್ಪೆಕ್ಟರನ್ನು, ಸರ್ಕಲ್ ಇನ್‌ಸ್ಪೆಕ್ಟರನ್ನು ಎಸ್.ಪಿ.ಯವರನ್ನು ತಕ್ಷಣ ಸಸ್ಪೆಂಡ್ ಮಾಡಿ ಎಂದು ನಮ್ಮ ಬೇಡಿಕೆ ಇದೆ. ಇದಕ್ಕೆ ತಾವು ಉತ್ತರವನ್ನು ಕೊಡಲೇ ಇಲ್ಲ. ಆಮೇಲೆ ಎರಡನೆಯದಾಗಿ ಯಾವಾಗ ತಾವು ಮಾರಲ್ ರೆಸ್ಪಾನ್ಸಿಬಿಲಿಟಿ ನಮ್ಮದು ಇದೆ, ನಾವು ಒಪ್ಪಿಕೊಂಡಿದ್ದೇವೆ ಜನ ನಮಗೆ ಶಿಕ್ಷೆ ಕೊಟ್ಟಿದ್ದಾರೆ ಏನೋ ತಪ್ಪು ಮಾಡಿದ್ದೇವೆ ಎನ್ನತಕ್ಕಂಥದ್ದು ಅಲ್ಲ. ತಪ್ಪು ಮಾಡಿದ್ದೀರಿ. ಆ ಮಾರಲ್ ರೆಸ್ಪಾನ್ಸಿಬಿಲಿಟಿಯನ್ನು ಒಪ್ಪಿಕೊಂಡೇ ತಿಳಿದುಕೊಂಡೇ ತಾವು ರಾಜೀನಾಮೆಯನ್ನು ಕೊಡಿ ಎಂದು ನಾವು ಕೇಳಿದ್ದುದು.

ಶ್ರೀ ಜೆ.ಹೆಚ್. ಪಟೇಲ್:- ತಮಾಷೆಗೆ ಅಲ್ಲ, ಒಂದು ಪಕ್ಷ ರಾಜೀನಾಮೆಯನ್ನು ಕೊಟ್ಟೆ ಎಂದುಕೊಳ್ಳಿ ನೀವು ಏನು ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೊಟ್ಟೆ ಅಂದರೆ ಸಿದ್ದರಾಮಯ್ಯನವರು ಬರುತ್ತಾರೆ. ಅಥವಾ ಬೇರೆ ಇನ್ನೊಬ್ಬರು ಬರುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಪುರುಸೊತ್ತು ಇಲ್ಲ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಈ ಮಧ್ಯೆ ಸಾಮಾನ್ಯ ಈ ಲೋಕದ ಸಮಸ್ಯೆಯನ್ನು ಬಿಟ್ಟು ಸ್ವಲ್ಪ ನನ್ನ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮವರೇ ಝೀ ಟಿ.ವಿ.ಯಲ್ಲಿ ನೋಡಿದ್ದೇನೆಂದು ಹೇಳಿದರು. ಅದನ್ನೇ ನಾನು ಹೇಳಿದ್ದುದು

ಶ್ರೀ ಜೆ.ಹೆಚ್. ಪಟೇಲ್:- ಒಳ್ಳೆಯದು, ಝೀ ಟಿ.ವಿ.ಯಲ್ಲಿಯೆ ಹೇಳಿದ್ದೇನೆ. ಈಗ ನಿಮ್ಮ ಎದುರಿಗೆ ಹೇಳುವುದಕ್ಕೆ ಏನು ನಾಚಿಕೆ? ಆದರೆ, ಈ ಮಾತುಗಳನ್ನು ಹೇಳಿದ್ದರಿಂದ ಅವರು

ಮುಖ್ಯಮಂತ್ರಿಗಳಾಗಿ ಮುಂದುವರಿಯಬಾರದೆಂದು ಏನು ಹೇಳಿದ್ದೀರಿ, it reflects on my character, ವಿರೋಧಪಕ್ಷದ ನಾಯಕರು ಸದನದಲ್ಲಿ ಹೇಳಿರತಕ್ಕಂಥ ಮಾತು ಪತ್ರಿಕೆಯಲ್ಲಿ ಬಂದಾಗ, ಇವರು ಶ್ರೀಕೃಷ್ಣ ಇರಬಹುದು, ಶ್ರೀರಾಮ ಇರಬಹುದು.... ನಾನೇ ಹೇಳಿದ್ದು. ನಾನು ಆ ವಿಚಾರದವನೇ. ತಾವು ಶ್ರೀರಾಮ ವಂಶದವರು, ತಮ್ಮ ಬಗ್ಗೆ ನಾನು ಹೇಳಲಿಲ್ಲ. ನಾನು ನನ್ನ ಬಗ್ಗೆ ಹೇಳಿಕೊಂಡಿದ್ದೇನೆ. ನಿಮ್ಮ ಬಗ್ಗೆ ಹೇಳಿದ್ದು... ಗುಂಡೂರಾಯರು ಮತ್ತು ಇವರು ಇದ್ದಾಗ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಸಭಾನಯ್ಕಕರಾಗಿದ್ದೀರಿ, ಆ ಮಾತು ನಿಮ್ಮಿಂದ ಬರಬಾರದು, ಕರ್ನಾಟಕದ ಜನತೆಯ ಮುಖ್ಯಮಂತ್ರಿಯಾಗಿ ಏನು ಹೇಳಬೇಕೋ ಅದನ್ನು ಹೇಳಿ ಎಂದು ಹೇಳಿದ್ದೇವೆಯೇ ಹೊರತು ಲಘುವಾಗಿ ಮಾತನಾಡಿ ಎಂದು ಹೇಳಿಲ್ಲ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ನಾನು ಹೇಳಿದುದರಲ್ಲ ಯಾವುದೇ ರೀತಿಯ ಕ್ಷುದ್ರತೆ, ಅಥವಾ vulgarity or defaming the status of a man ಇಲ್ಲ, ನಾನು ಹೇಳಿದ್ದುದು ನಮ್ಮ ಸಾಂಸ್ಕೃತಿಕ ಹಿನ್ನಲೆ, ಕಲ್ಚರಲ್ ಬ್ಯಾಕ್ ಗ್ರೌಂಡ್ ಇಡೀ ಹಿಂದೂ ಸ್ಥಾನದ ಕಲ್ಚರ್ ಬಗ್ಗೆ ಹೇಳಿದಾಗ ನಾನು ಇಂಥವನು ಎಂದು ಅವತ್ತು ನಾನು ಹೇಳಿದ್ದು, ನನ್ನ ಗುಣವನ್ನು ಹೇಳುವುದಕ್ಕೆ ಅಥವಾ ತಮ್ಮನ್ನು ತೆಗಳಲಿಕ್ಕೆ ಹೇಳಿದ್ದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಆಯಿತು, ತಾವು ಅದೇ ಪ್ರಚಾರ ಮಾಡಿಕೊಂಡು ಹೋಗಿ. ಹೆಜ್ಜಾಲದಲ್ಲಿ ನಡೆದ ಘಟನೆಗೆ ತಪ್ಪಿತಸ್ಥರು ಇದ್ದಾರೆಂದು ಸಂಶಯ ಬಂದಮೇಲೆ ನಾವು ನ್ಯಾಯಾಂಗ ತನಿಖೆಗೆ ಆದೇಶ ನೀಡಿದ್ದು ಎಂದು ಅವರೇ ಒಪ್ಪಿಕೊಂಡಹಾಗೆ ಆಗಿದೆ. ಅದಕ್ಕಾಗಿ ನಾವು ಕೇಳಿದ್ದೇನೆಂದರೆ, ನೀವು ಪ್ರೋಬ್ ಮಾಡಬೇಕಾದರೆ, ಎನ್‌ಕ್ವೊಯರಿ ಮಾಡಬೇಕಾದರೆ ಆ ಅಧಿಕಾರಿಗಳನ್ನು ಹಾಗೆಯೇ ಇಟ್ಟುಕೊಂಡು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ they can influence. ಅದಕ್ಕಾಗಿ, ಆ ಸ್ಥಳದಲ್ಲಿ ಎಸ್.ಐ. ಸರ್ಕಲ್ ಇನ್ಸ್‌ಪೆಕ್ಟರ್, ಎಸ್.ಪಿ.ಯವರು ಮತ್ತು ಡಿವೈ ಎಸ್ ಪಿ ಹೀಗೆ ಯಾರು ಇದ್ದರು, ಅವರುಗಳ ಮೇಲೆ you take action and immediately suspend them. ಹೆಜ್ಜಾಲ ಗ್ರಾಮದಲ್ಲಿ ಏನು ಫೈರಿಂಗ್ ಆಗಿದೆ, ಇದರ ಬಗ್ಗೆ; ನಾವು ಬೇರೆಯವರ ಬಗ್ಗೆ ಹೇಳಿಲ್ಲ. ಡಿಜಿಪಿ ಗುಂಡು ಹಾರಿಸಿದ್ದಾರೆ, ಅಥವಾ ಡಿಐಜಿ ಮಾಡಿದ್ದಾರೆ ಅಥವಾ ಗೃಹ ಕಾರ್ಯದರ್ಶಿ ಮಾಡಿದ್ದಾರೆ ಎಂಬುದಾಗಿ ನಾವು ಹೇಳುತ್ತಿಲ್ಲ.

SRI J.H.PATEL:- We did it in Mulbagal.

SRI M. MALLIKARJUN KHARGE:- With all responsibility, we said. We have given specific names. ನಾನು ಅದಕ್ಕೆ ಬಂದಿದ್ದೇನೆ ಎಂದು ಹೇಳಿದ್ದಾನೆ. One Ashok Kumar S.I. with vengence he acted; he came from Pavagada and he was threatening. ತಾವು ಕ್ರಮ ತೆಗೆದುಕೊಂಡಿಲ್ಲ. ಅದಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳುತ್ತಿದ್ದೇವೆ. ಎನ್‌ಕ್ವೊರಿ ಕಂಪ್ಲೀಟ್ ಆದಮೇಲೆ ಅವರುಗಳು ನಿರ್ದೋಷಿಗಳು ಎಂದು ಕಂಡುಬಂದರೆ, ಅವರು ಒಳ್ಳೆಯವರೆಂದು ಕಂಡುಬಂದರೆ ನಂತರ ಅವರನ್ನು ನೀವು ರೀನ್‌ಸ್ಟೇಟ್ ಮಾಡಿ. ಅವರಿಗೆ ಪ್ರಮೋಷನ್ ಕೊಟ್ಟು ತೆಗೆದುಕೊಳ್ಳಿ.

ಅದಕ್ಕಾಗಿ ನಾವು ಡಿಮ್ಯಾಂಡ್ ಮಾಡುತ್ತೇವೆ. ಎರಡನೆಯದು ಅಲ್ಲಿ ನಿಮ್ಮನ್ನು ಜನ ತಿರಸ್ಕಾರ ಮಾಡಿದ್ದಾರೆ. ನಿಮಗೋಸ್ಕರ ಆಗಿಲ್ಲ, ನಮಗೋಸ್ಕರ ಆಗಿದೆಯೆಂದು ನೀವು ಹೇಳಿಕೊಳ್ಳಬಹುದು. ನಮಗೋಸ್ಕರ ಆಗಿಲ್ಲ ಎಂದರೆ ಅಲ್ಲಿ 10 ಸಾವಿರ ಓಟು ಕೂಡ ಬರುತ್ತಿರಲಿಲ್ಲ. ಅದು ಏನೇ ಇರಲಿ. ನಮ್ಮ ಅಭ್ಯರ್ಥಿಗೋಸ್ಕರವಾದರೂ ಬಂದಿರಬಹುದು, ಕಾಂಗ್ರೆಸ್ ಪಕ್ಷಕ್ಕೋಸ್ಕರ ಬಂದಿರಬಹುದು ಅಥವಾ ನೀವು ಕೆಟ್ಟ ಕೆಲಸ ಮಾಡಿದ್ದಕ್ಕಾದರೂ ಬಂದಿರಬಹುದು. ಅದನ್ನು ನೀವೇ ಒಪ್ಪಿಕೊಂಡಮೇಲೆ ಆ ಒಂದು ಮಾರೇಲ್ ರೆಸ್ಪಾನ್ಸಿಬಿಲಿಟಿಯನ್ನು ಒಪ್ಪಿಕೊಂಡು ರಾಜೀನಾಮೇ ಕೊಡಿ ಎಂದು ನಾನು ಕೇಳಿದ್ದುದು... ಹೊಸ ಮಂತ್ರಿಮಂಡಲ ಬರಲಿ. ಅಧ್ಯಕ್ಷರೆ, ತಮಗೆ ಈ ಕಾಪಿಯನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ. 2000 ಜನರ ಮೇಲೆ ಎಫ್ ಐ ಆರ್ ಕೇಸ್ ದಾಖಲೆ ಮಾಡಿಕೊಂಡಿದ್ದಾರೆ. ಇದು ಸಾಧ್ಯವೇ? ಹಿಂದೆ ಎಲ್ಲಾದರೂ ಮಾಡಿದ್ದಾರೆಯೇ ಎಂಬುದನ್ನು ನೋಡಿಕೊಂಡು ಬನ್ನಿ. ಆದ್ದರಿಂದ ಹೆಜ್ಜಾಲದಲ್ಲಿ ಪೋಲೀಸರ ಮುಖಾಂತರ ಗುಂಡು ಹಾರಿಸಿರುವುದನ್ನು ರಾಜಕೀಯ ದುರುದ್ದೇಶದಿಂದ ಮಾಡಿಸಿಲ್ಲವೆಂದು ತಾವು ಹೇಗೆ ಹೇಳುತ್ತೀರಿ? 600 ಕಾರ್ಮಿಕರನ್ನು ಕಂಟ್ರೋಲ್ ಮಾಡುವುದಕ್ಕೆ 2 ಸಾವಿರ ಜನರನ್ನು ಸೇರಿಸಿಕೊಂಡು ಕೇಸುಗಳನ್ನು ಹಾಕಬೇಕಾದರೆ, ಮತ್ತು ಕೆಲವು ಮುಖಂಡರುಗಳ ಹೆಸರುಗಳನ್ನು ಕೊಡಬೇಕೆಂದರೆ ಎಷ್ಟು ಅವರಿಗೆ ಟಾರ್ಚರ್ ನೀಡಿರಬಹುದು, ಎನ್ನತಕ್ಕಂಥದ್ದನ್ನು ನೋಡಬಹುದು. ನಿಮ್ಮದು ಇದರಲ್ಲಿ ರಾಜಕೀಯ ಇಲ್ಲದೇ ಇರಬಹುದು. ಆದರೆ ನಿಮ್ಮ ಸಪೋರ್ಟ್ ಪಡೆದುಕೊಂಡು, ನಿಮ್ಮ ಸರ್ಕಾರದ ಸಪೋರ್ಟ್ ಪಡೆದುಕೊಂಡು, ಅಲ್ಲಿ ಯಾರೇ ಗೆಲ್ಲಬಹುದು, ನೀವು ಗೆಲ್ಲಬೇಕೆಂದು ಅಂದುಕೊಂಡಿದ್ದಿರೋ ಅಥವಾ ಬಿಡಬೇಕು ಅಂತಿದ್ದೀರೋ ಆ ಮಾತು ಬೇರೆ. ನಾನು ಅದರ ಬಗ್ಗೆ ಡಿಸ್‌ಕಷನ್ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅಲ್ಲಿ ಯಾರು ಪ್ರತಿಷ್ಠೆ ಇಷ್ಯೂ ಮಾಡಿಕೊಂಡು ಕುಳಿತಿದ್ದರು, by hook or crook ಗೆಲ್ಲಬೇಕೆಂದು ಹೇಳಿ ಅವರೆಲ್ಲಾ ಕೂಡ ಬೇಕಾದ ಮೆಥಡ್ಸ್‌ನ್ನು ಉಪಯೋಗ ಮಾಡಿಕೊಂಡು ಈಗ 19 ಎಫ್‌ಐಆರ್ ಇಷ್ಯೂ ಮಾಡಿಸಿ ಅದರಲ್ಲಿ ಸಾವಿರಾರು ಜನರನ್ನು ಇನ್‌ವಾಲ್ವ್ ಮಾಡತಕ್ಕಂಥದ್ದು ನಡೆದಿದೆ. ಇದು ರಾಜಕೀಯ ದುರುದ್ದೇಶ ಇಲ್ಲವೆಂದು ಹೇಳಿದರೆ ಮತ್ತೆ ಇದು ಏನು ಇದೆಯೆಂದು ಹೇಳಬೇಕು? ಅಲ್ಲಿ ಸಾವಿರಾರು ಜನರ ಮೇಲೆ ಕೇಸುಗಳನ್ನು ದಾಖಲು ಮಾಡಿಕೊಂಡಿದ್ದಾರೆ. ಆದರೆ ಅವರೆಲ್ಲರನ್ನು ಹೇಗೆ ಐಡೆಂಟಿಫೈ ಮಾಡಿದರು? ಅಲ್ಲಿ ಗಲಾಟೆಯಲ್ಲಿ ಇದ್ದವರು ಇವರೇ ಎಂದು ಹೇಗೆ ಐಡೆಂಟಿಫೈ ಮಾಡಿದರು? ನೀವು ಬನ್ನಿ ಇಂಥವರು ಕರೆಯುತ್ತಿದ್ದಾರೆ ಎಂದು ಮನೆ ಮನೆಗೆ ಹೋಗಿ ಪೋಲೀಸರೇ ಹೇಳಿದ್ದಾರೆ. ಆದ್ದರಿಂದ ತಾವು ಮೊದಲು ಏನು ಸ್ಟೇಟ್‌ಮೆಂಟ್ ಮಾಡಿದಿರಿ ಅದು ಸತ್ಯಕ್ಕೆ ದೂರವಾದುದು. ಹೆಸರು ಕೊಡಬೇಕಾದರೂ ಸಮ್ ಇನ್‌ಟೆನ್‌ಷನ್ ಇರಬಹುದು. ಅದು ಹೆರ್‍ಯಾಸ್‌ಮೆಂಟ್ ಮಾಡತಕ್ಕಂಥ ಇನ್‌ಟೆನ್‌ಷನ್ ಇರಬಹುದು. ಶಿಕ್ಷೆ ಆಗುವುದು ಬಿಡುವುದು ಆ ಮಾತು ಬೇರೆ. ಆದರ ಹೆರ್‍ಯಾಸ್‌ಮೆಂಟ್ ಆದರೂ ಆಗಲಿ ಎನ್ನತಕ್ಕಂಥ ಇನ್‌ಟೆನ್‌ಷನ್‌ನಲ್ಲಿ ಇದನ್ನು ಕೊಡಬೇಕೆಂದರೆ ಖಂಡಿತವಾಗಿ ಇದರಲ್ಲಿ ರಾಜಕೀಯ ದುರುದ್ದೇಶದಿಂದಲೇ ಮಾಡಿದ್ದಾರೆ ಮತ್ತು ಇಂತಹ 19 ಎಫ್‌ಐಆರ್ ಹಾಕಿದ್ದನ್ನು ತಾವು ಬೇಕಾದರೆ ತರಿಸಿಕೊಂಡು ನೋಡಬಹುದು. ಆದ್ದರಿಂದ ತಕ್ಷಣ ಆ ಎಲ್ಲಾ 4 ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು ಮತ್ತು ಮಾರೇಲ್

ರೆಸ್ಪಾನ್ಸಿಬಿಲಿಟಿ ಎಂದು ತಾವೇ ಒಪ್ಪಿಕೊಂಡ ಕಾರಣ ರಾಜೀನಾಮೆ ಕೊಟ್ಟು ಹೊಗಬೇಕೆಂದು ಹೇಳಿ ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇವೆ. ಅಮಾನತ್ತುಗೊಳಿಸುವ ಬಗ್ಗೆ ಅವರು ಯಾರೂ ಡಿಮ್ಯಾಂಡ್ ಮಾಡಿಲ್ಲ. ಸದನದ ಸಮಿತಿ ಮಾಡಬೇಕೆಂದು ಅವರು ಡಿಮ್ಯಾಂಡ್ ಮಾಡಿದ್ದಾರೆ ಅದು ಬೇರೆ. ಈಗ ನಾನು ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರ ನೀಡಬೇಕು.

ಅಧ್ಯಕ್ಷರು:- ಶ್ರೀರಾಮರೆಡ್ಡಿಯವರು ಏನು ಕೇಳಬೇಕೆಂದು ಇದ್ದಾರೋ ಅದನ್ನು ಕೇಳಲಿ. ನಂತರ ಎರಡಕ್ಕೂ ಒಟ್ಟಿಗೆ ಸೇರಿಸಿ ಮುಖ್ಯಮಂತ್ರಿಗಳಿಂದ ಉತ್ತರ ಹೇಳಿಸಿಬಿಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಎರಡಕ್ಕೂ ಒಂದೇ ಸಾರಿ ಸರಿಯಾದ ಉತ್ತರ ಸಿಗುವುದಿಲ್ಲ. ಮುಖ್ಯಮಂತ್ರಿಗಳು ಉತ್ತರ ನೀಡುವಾಗ ಬಹಳ ಡೀವಿಯೇಟ್ ಮಾಡಿಬಿಡುತ್ತಾರೆ. ಅದು ತಮಗೇ ಗೊತ್ತಿದೆ, ನಾನು ಹೇಳಬೇಕಾಗಿಲ್ಲ. ಒಂದು ವಿಷಯದಲ್ಲಿ ಇರುವ ಸೀರಿಯೆಸ್‌ನೆಸ್‌ನ್ನು ಕಳೆದುಬಿಡುತ್ತಾರೆ. ಕೊನೇ ಗಳಿಗೆಯಲ್ಲಿ.

MR. SPEAKER:- I will try to co-ordinate with the Hon'ble Chief Minister and the Hon'ble members; I will see that he does not miss any point.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಕಾರ್ಮಿಕರು ಏನು ಮಾಡಿದರೆಂದು ಹೇಳಲು ಹೋಗಿದ್ದಕ್ಕೆ, ಮುಖ್ಯಮಂತ್ರಿಗಳು, ನೀವು ಏನು ಭಾಷಣ ಮಾಡುತ್ತಿದ್ದೀರಿ ಅದು ನನಗೆ ಗೊತ್ತು ಎಂದು ಹೇಳಿದರು. ನಾನು ಏನು ಭಾಷಣ ಮಾಡುತ್ತೇನೆಂಬುದು ಅವರಿಗೆ ಗೊತ್ತಿದೆ, ಮತ್ತು ಅವರು ಏನು ಹೇಳುತ್ತಾರೆಂದು ಅದು ನನಗೆ ಗೊತ್ತಿದೆ. ಪ್ರಶ್ನೆ ಅದು ಅಲ್ಲ. ನಾನು ಮುಖ್ಯವಾಗಿ ನಾಲ್ಕು ಅಂಶಗಳನ್ನು ಕೇಳಿದ್ದೇನೆ. ಮೊದಲನೆಯದು ಅಂದರೆ ಇಡೀ ಘಟನೆಗೆ ಕಾರಣವಾಗಿರತಕ್ಕಂಥ ಫ್ಯಾಕ್ಟರಿ ಮಾಲೀಕನ ಮೇಲೆ ಒಂದು ಕೇಸನ್ನೂ ಕೂಡ ದಾಖಲೆ ಮಾಡಿಲ್ಲ. ಅವನ ಮೇಲೆ ಕೇಸು ದಾಖಲೆ ಮಾಡಿ ಅವನನ್ನು ಅರೆಸ್ಟ್ ಮಾಡಬೇಕು ಎಂದು ನಾನು ಕೇಳುತ್ತಿದ್ದೇನೆ. ಎರಡನೆಯದು ಏನೆಂದರೆ ಇವತ್ತು ಪೋಲೀಸ್ ತಪ್ಪಿತಸ್ಥರು ಯಾರು ಇದ್ದಾರೆ, ಅಂದರೆ ಗೋಲಿಬಾರ್ ಅಲ್ಲ, ಯಾರು ಗುಂಡು ಹಾರಿಸಿದ್ದಾರೆ ಅವರನ್ನು 302ರ ಸೆಕ್ಷನ್ ಪ್ರಕಾರ ಅವರ ಮೇಲೆ ಕೇಸ್ ಬುಕ್ ಮಾಡಬೇಕು ಮತ್ತು ಅವರನ್ನು ಅಮಾನತ್ತಿನಲ್ಲಿಡಬೇಕು. ಮೂರನೆಯದು ಏನೆಂದರೆ ಕಾರ್ಮಿಕರ ಮೇಲೆ ಹಾಕಿರತಕ್ಕಂಥ ಎಲ್ಲಾ ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕು. ಮತ್ತು ನಾಲ್ಕನೆಯದು ಅಲ್ಲಿ ಗಾಯಗೊಂಡವರಿಗೆ ಮತ್ತು ಸತ್ತವರ ಪರಿವಾರಕ್ಕೆ ಹೆಚ್ಚಿನ ಪರಿಹಾರ ಕೊಡಬೇಕೆಂದು ನಾನು ಹೇಳಿರತಕ್ಕಂಥ ವಿಷಯಗಳು. ಇದರ ಜೊತೆಗೆ ಸದನ ಸಮಿತಿ ರಚನೆ ಮಾಡಬೇಕೆಂದು ಕೇಳಿದ್ದೆ ಆದರೆ ಅದಕ್ಕೆ ಮುಖ್ಯಮಂತ್ರಿಗಳು ಆಗುವುದಿಲ್ಲವೆಂದು ಹೇಳಿದ್ದಾರೆ. ಈ ಸದನ ಸಮಿತಿಬೇಕೆಂದು ಏಕೆ ಕೇಳಿದ್ದೇನೆಂದರೆ ನಮಗೆ ಗೊತ್ತಿರುವ ಹಾಗೆ ನ್ಯಾಯಾಂಗ ತನಿಖೆಯಿಂದ ಇದುವರೆಗೆ ಸರಿಯಾದ ಮಾಹಿತಿ ಬಂದಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಲಿಕ್ಕೆ ಸದನಸಮಿತಿಗೆ ಅಧಿಕಾರ ಇಲ್ಲದೇ ಇದ್ದರೂ ಕೂಡ ಕನಿಷ್ಟ ವಾಸ್ತವಾಂಶ ಏನು ಇದೆ ಎನ್ನತಕ್ಕಂಥದ್ದನ್ನು ಈ ರಾಜ್ಯದ ಜನತೆಗೆ ಮತ್ತು

ನಮಗೆ ಗೊತ್ತಾಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಸದನಸಮಿತಿಯನ್ನು ರಚನೆ ಮಾಡಬೇಕೆಂದು ಕೇಳಿದ್ದೇನೆಯೇ ಹೊರತು ಸದನದ ಸಮಿತಿ ಅವರಿಗೆ ಶಿಕ್ಷೆ ಕೊಡಬೇಕೆಂದು ಹೇಳತಕ್ಕಂಥ ಅಭಿಪ್ರಾಯ ನನಗೆ ಇಲ್ಲ. ಮತ್ತು ಇದಕ್ಕೆ ಅವರಲ್ಲಿ ಉತ್ತರವೂ ಇಲ್ಲ. ಮೂಲ ಸಮಸ್ಯೆ ಪರಿಹಾರಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿಲ್ಲ ಪ್ರಯತ್ನ ನಡೆದಿಲ್ಲವೆಂದು ಹೇಳುತ್ತಿಲ್ಲ. ಪ್ರಯತ್ನ ನಡೆದಿದೆ. ಆದರೆ ಮುಖ್ಯ ಸಮಸ್ಯೆಗೆ ಅದರ ಪರಿಹಾರಕ್ಕೆ ಉತ್ತರ ಕೊಟ್ಟಿಲ್ಲ. ಆದ್ದರಿಂದ ತಕ್ಷಣ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):- ಸೂರ್ಯನಾರಾಯಣರವರು, ನಂಜುಂಡಪ್ಪನವರು ಅವರುಗಳೆಲ್ಲಾ ಬಂದಿದ್ದರು. ಅಲ್ಲಿ ಏನಾಗಿದಯೆಂದು ನಿಮ್ಮ ಪಾರ್ಟಿಲೀಡರ್ಸ್‌ನ್ನು ಕೇಳಿ. ಗೊತ್ತಿಲ್ಲದೆ ಸುಮ್ಮನೆ ಏನೋ ಮಾತನಾಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೇನೆಂದು ನಮ್ಮ ಪಕ್ಷದ ಮುಖಂಡರಿಗೆ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಆದರೆ ಚುನಾವಣೆ ಇರುವುದರಿಂದ ಚುನಾವಣಾ ಕಮಿಷನ್ನಿನ ಕಾನೂನು ಅಡ್ಡಬರುವುದರಿಂದ ಈಗ ಅಮಾನತ್ತಿನಲ್ಲಿ ಇಡುವುದಕ್ಕೆ ಬರುವುದಿಲ್ಲ. ಎಲೆಕ್ಷನ್ ಮುಗಿದ ತಕ್ಷಣ ನಾನು ಅವರನ್ನು ಅಮಾನತ್ತಿನಲ್ಲಿಡುತ್ತೇನೆಂದು ಮುಖ್ಯಮಂತ್ರಿಗಳೇ ನಮ್ಮಪಕ್ಷದ ಮುಖಂಡರು ತಮ್ಮನ್ನು ಭೇಟಿ ಮಾಡಿದಾಗ ಹೇಳಿದರು. ನಾನು ಬೇರೆ ಏನೂ ಕೇಳುತ್ತಿಲ್ಲ. ನೀವು ಹೇಳಿದ್ದನ್ನೇ ನಾನು ಕೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಅವರು ಏನು ಹೇಳಿದ್ದಾರೆಂದರೆ ಶ್ರೀ ವೆಳ್ಳಿಯಪ್ಪನವರು ಲೇಬರ್ ಕಮೀಷನರ್ ಮಿಟಿಂಗ್‌ಗೆ ಕರೆದರೆ ಬರುವುದಿಲ್ಲ, ಬೇರೆಯವರನ್ನು ಕಳುಹಿಸುತ್ತಾರೆ ಎಂದು ಅದಕ್ಕೆ ನಾನು ನಮ್ಮ ಆಫೀಸರ್‌ಗೆ ಏನು ಹೇಳಿದೆ ಎಂದರೆ ನೆಕ್ಸ್ಟ್ ಟೈಮ್ ಮೀಟಿಂಗ್ ಕರೆಯುವಾಗ ಯೂನಿಯನ್ ಲೀಡರ್‌ನ್ನು ಕರೆಯಿರಿ; ವೆಳ್ಳಿಯಪ್ಪನವರನ್ನು ಕರೆಯಿರಿ. ನೆಗೋಷಿಯೇಟ್ ಮಾಡಿ ಆರ್ಡರ್ ಕೊಡುವುದಕ್ಕೆ ಬರುವುದಿಲ್ಲ. ಇದು ಪ್ರೈವೇಟ್ ಟೆಕ್ಸ್‌ಟೈಲ್ ಮಿಲ್. ಕಾನೂನು ಪ್ರಕಾರ ಲೇಬರ್ ಡಿಪಾರ್ಟ್‌ಮೆಂಟ್‌ನಿಂದ ಏನಾದರೂ ಆತನಿಗೆ ಶಿಕ್ಷೆ ಕೊಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡುತ್ತೇವೆಂದು ಹೇಳಿದನೇ ಹೊರತು ಸಸ್ಪೆಂಡ್ ಮಾಡುತ್ತೇನೆಂದು ಹೇಳಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ ಕ್ಷೇತ್ರ):- ನಾನು ಮಾತನಾಡುವಾಗ ಲೇಬರ್ ಲಾ ಪ್ರಕಾರವಾಗಿ ಏನು ಮಾಡಬೇಕೆಂದು ಹೇಳಿದ್ದೇನೆ. ಲೇಬರ್ ಲಾ ನಲ್ಲಿ ಕ್ಲೀಯರ್ ಆಗಿ ಪ್ರಾವಿಷನ್ ಇದೆ. ಯೂನಿಯನ್ ಜೊತೆಯಲ್ಲಿ ನೆಗೋಷಿಯೇಟ್ ಮಾಡಲಿಕ್ಕೆ ನಿರಾಕರಣೆ ಮಾಡತಕ್ಕಂತಹ ಯಾವ ಒಬ್ಬ ಮಾಲೀಕನಿಗೆ ಕನಿಷ್ಟ 6 ತಿಂಗಳು ಶಿಕ್ಷೆಯನ್ನು ವಿಧಿಸಬಹುದೆಂದು ಕಾನೂನು ಇದೆ. ಅದನ್ನೂ ಕೂಡ ನಾನು ಹೇಳಿದ್ದೇನೆ. ಹಾಗೆಯೇ ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದೂ ಕೂಡ ಕೇಳಿದ್ದೇನೆ. ಅವರನ್ನು ಅಮಾನತ್ತಿನಲ್ಲಿಟ್ಟು ಎನ್‌ಕ್ವೈರಿಯನ್ನು ಮಾಡಿ ಇಲ್ಲದಿದ್ದರೆ ಸತ್ಯಾಂಶ ಹೊರಗೆ ಬರಲಿಕ್ಕೆ ಸಾಧ್ಯವಿಲ್ಲ. ಸದನ ಸಮಿತಿಯನ್ನು ಮಾಡಿ ಎಂದು ಕೇಳಿದ್ದೆ ಅದಕ್ಕೆ ಮಾಡುವುದಕ್ಕೆ ಆಗುವುದಿಲ್ಲ ಎಂದಿದ್ದೀರಿ.

ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಹೇಳಿದ್ದೀರಿ. ನಮ್ಮ ಪಕ್ಷದ ಮುಖಂಡರು ಭೇಟಿ ಮಾಡಿದಾಗ ಈಗ ಚುನಾವಣೆಯು ಅಡ್ಡ ಬರುತ್ತದೆ ಮಾಡುವುದಕ್ಕೆ ಆಗುವುದಿಲ್ಲ, ಪೊಲೀಸ್ ಅಧಿಕಾರಿಗಳನ್ನು ಚುನಾವಣೆ ಮುಗಿದ ಮೇಲೆ ಮಾಡುತ್ತೇವೆಂದು ಹೇಳಿದ್ದೀರಿ. ತಾವು ಈಗ ಹೇಳಲ್ಲಿವೆಂದು ಹೇಳಿದರೆ, ನೀವು ಹೇಳಿರತಕ್ಕಂಥದ್ದು ಮತ್ತು ನಮ್ಮ ಪಕ್ಷದ ಮುಖಂಡರು ಹೇಳಿರತಕ್ಕಂಥದ್ದು ಯಾವುದು ಸತ್ಯಾಂಶವೆಂದು ತಿಳಿಯಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅವರ ಮನೆಯಲ್ಲಿ ಹೇಳಿರತಕ್ಕಂತಹ ವಿಷಯವನ್ನು ನಾನು ಹೇಳಿರತಕ್ಕಂಥದ್ದು ಹಿಯರಸೇ ಎವಿಡೆನ್ಸ್ ಹೇಳಿ ನಿಮ್ಮ ಸರ್ಕಾರವನ್ನು ಪೇಚಿಗೆ ಸಿಕ್ಕಿಸಿ ನಿಮ್ಮನ್ನು ರಾಜೀನಾಮೆ ಕೊಡಿಸಬೇಕೆಂದು ಹೇಳತಕ್ಕಂತಹ ಪಕ್ಷ ನಮ್ಮದು ಅಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಆ ಕಾರ್ಮಿಕರೂ ಕೂಡ ನಿಮ್ಮ ಪಕ್ಷಕ್ಕೆ ಮತವನ್ನು ಕೊಟ್ಟಿದ್ದಾರೆ. ಆ ಕಾರ್ಮಿಕರುಗಳು ಕೂಡ ನಿಮಗೆ ಮತವನ್ನು ಕೊಡಬೇಕೆಂದು ಹೇಳಿ ನಾವು ಅವರನ್ನು ಕೇಳಿದ್ದೇವೆ. ನಿಮ್ಮ ಸರ್ಕಾರವನ್ನು ಉಳಿಸಲಿಕ್ಕೆ ನಾವು ಮತವನ್ನು ಕೇಳಿದ್ದಲ್ಲ; ಕಾರ್ಮಿಕರ ಮೇಲೆ ಗುಂಡು ಹಾರಿಸಿದ್ದು ನಮ್ಮ ಪ್ರಶ್ನೆ ಇರುವುದು. ನೀವು ಅವರ ಮೇಲೆ ಆರೋಪ ಮಾಡಿಕೊಳ್ಳಿ. ಇವರು ನಿಮ್ಮ ಮೇಲೆ ಆರೋಪ ಮಾಡಿಕೊಳ್ಳಲಿ. ಅದು ನಮಗೆ ಬೇಕಾಗಿಲ್ಲ. ನಮಗೆ ಬೇಕಾಗಿರುವಂಥದ್ದು ಆ ಕಾರ್ಮಿಕರ ಮೇಲೆ ನಡೆದಿರತಕ್ಕಂತಹ ಅನ್ಯಾಯ, ಅವರ ಕುಟುಂಬದವರನ್ನು ಕಳೆದುಕೊಂಡಿರುವುದಕ್ಕೆ ಪರಿಹಾರವನ್ನು ಕೊಡಬೇಕು. ಈ ಪ್ರಶ್ನೆಯನ್ನು ಪರಿಹಾರ ಮಾಡಿ ಎಂದು ನಾವು ಕೇಳುತ್ತಿರತಕ್ಕಂಥದ್ದು, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ, ಅವರನ್ನು ಸಸ್ಪೆಂಡ್ ಮಾಡುವುದಿಲ್ಲವೆಂದು ಹೇಳಿದರೆ ಆ ಮಾಲೀಕರ ಮೇಲೆ ಕೇಸ್ ದಾಖಲು ಮಾಡದಿದ್ದರೆ ನಾನು ಅದನ್ನು ಪ್ರತಿಭಟನೆಯನ್ನು ಮಾಡಿ ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ಜೆ.ವಿ. ಶ್ರೀರಾಮರೆಡ್ಡಿಯವರು ಬಾವಿಗೆ ಬಂದು ಧರಣಿ ಕುಳಿತುಕೊಂಡರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನಾವು ತಪ್ಪಿತಸ್ಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದ್ದು ಏಕೆಂದರೆ ತಾವು ಒಪ್ಪಿಕೊಂಡಿದಂತೆಯೇ ಅಧಿಕಾರಿಗಳ ಮೇಲೆ ಸಂಶಯ ಬಂದಿದೆ. ಅದಕ್ಕೆ ಇವೊತ್ತಿನ ದಿವಸ ಜ್ಯುಡಿಷಿಯಲ್ ಪ್ರೋಬ್ ಮಾಡಬೇಕಾದಂತಹ ಪ್ರಸಂಗ ಬಂದಿದೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು):- ಡಿಪಾರ್ಟ್‌ಮೆಂಟ್‌ಲ್ ರಿಪೋರ್ಟ್ ಏನಾಯಿತು ಎಂದು ತಿಳಿದುಕೊಂಡು ಅದರಲ್ಲಿ ಯಾವ ಆಫೀಸರ್‌ನಿಂದ ನಿಮ್ಮ ದೃಷ್ಟಿಯಲ್ಲಿ ಆ ಗೌಡ ಈ ಗೌಡ ಇಲ್ಲಿಂದ ಕರೆಸಿದರು, ಎಂದು ನೀವು ಅಂದರೆ ಜವಾಬ್ದಾರಿ ವಿರೋಧ ಪಕ್ಷದ ನಾಯಕರು ಏನು ಹೇಳುರುತ್ತೀರಿ ಅದು ಎಷ್ಟರಮಟ್ಟಿಗೆ ಎಂಬ ಬಗ್ಗೆ I have to find out the details about it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಹಾರಿಕೆ ಉತ್ತರ ಏಕೆಂದರೆ ಇದು ತಮಗೂ ಸಹ ಗೊತ್ತಿದೆ. ನಾವು ಏನು ಮಾಡುವುದು ಮಾಡಿದ್ದೇವೆ. ಅದು ನಮಗೆ ಗೊತ್ತಿದೆ ಎಲ್ಲದ್ದಕ್ಕೂ ಇಮ್ಯೂನ್ ಆಗಿ ಬಿಟ್ಟಿದ್ದೀರಿ. ಆ ಪ್ರಶ್ನೆ ಬೇರೆ, ಆದರೂ ಕೂಡ ಈ ದೇಶದ ಜನರಿಗೆ ಗೊತ್ತಾಗಬೇಕು ಯಾವ

ರೀತಿಯಲ್ಲಿ ನೀವು ಸ್ಪಂದಿಸಿರುತ್ತೀರಿ, ಅವರ ಸಮಸ್ಯೆಗಳಿಗೆ ಎನ್ನತಕ್ಕಂಥದ್ದು. ನನ್ನದು ಇಷ್ಟೇ, ನಾವು ಕೇಳುವುದೆಂದರೆ ಅಲ್ಲಿ ಸ್ಥಳದಲ್ಲೇ ಇದ್ದು ಅವರೇ ಆರ್ಡರ್ ಮಾಡಿದ್ದು ಮತ್ತು ಅವರಿಗೆ ಪದೇ ಪದೇ ಎಲ್ಲಾ ಜನರನ್ನು ಕರೆದು ಕರೆದು ಹೆದುರಿಸತಕ್ಕಂಥದ್ದು ಎನ್ನುವುದೂ ಸಹ ಗೊತ್ತಿದೆ. ಮತ್ತು ನೇರವಾಗಿ ಷೂಟಿಂಗ್ ಮಾಡಿದ್ದಾರೆ. ಇದರಲ್ಲಿ ಫೈರಿಂಗ್ ಇಲ್ಲ. ನೇರವಾಗಿ ಷೂಟಿಂಗ್ ಅದಕ್ಕಾಗಿ ಮರ್ಡರ್ ಎಂದು ಟ್ರೀಟ್ ಮಾಡಿ ಎಂದು ಹೇಳಿದ್ದುದು. ಸೆಕ್ಷನ್ 302 ಎಂದು ಕೇಸ್ ರಿಜಿಸ್ಟರ್ ಮಾಡಿ ಆ ಆಫೀಸರ್‌ನ್ನು ಪ್ರಾಸಿಕ್ಯೂಟ್ ಮಾಡಿ ಎನ್ನತಕ್ಕಂಥದ್ದು ಅದಕ್ಕೂ ನೀವು ಒಪ್ಪುವುದಿಲ್ಲ, ಮಾರಲ್ ರೆಸ್ಪಾನ್ಸಿಬಿಲಿಟಿ ಎನುತ್ತೀರಿ. ಅದಕ್ಕೂ ರಾಜೀನಾಮೆಯನ್ನು ಕೊಡುವುದಿಲ್ಲ. ನಮಗೆ ತೃಪ್ತಿಕರವಾದಂತಹ ಉತ್ತರ ಇವರಿಂದ ಬರುವ ಹಾಗೆ ಇಲ್ಲ. ಇವರು ಯಾವಾಗಲೂ ಇದೇ ರೀತಿ ನಡೆದುಕೊಂಡು ಒಂದು ರೀತಿಯ ಮೊಂಡುತನದ ಧೋರಣೆಯನ್ನು ತಾಳಿದ್ದಾರೆ. ಆ ಒಂದು ಧೋರಣೆಯನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು)

ಅಧ್ಯಕ್ಷರು:- ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 13ನೇ ಫೆಬ್ರವರಿ 1997ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ)